ಆಗಸ್ಟ್ 3, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

1996

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಅಭಿಮಾನಿ ದೇವರುಗಳೇ... ಇಲ್ನೋಡಿ!

## ರೌಡಿ ಬೇಬಿ ರಚ್ಚು!



## ದಚ್ಚು ಭವಿಷ್ಯ ನುಚ್ಚು!!





## ಆಟೋ ಡ್ರೈವರ್ ದರ್ಶನ್ ಕಗ್ಗೊಲೆ!

## ಬ್ಯಾಡರಹಳ್ಳಿ ಪಂಚಾಯ್ತೀಲಿ ಗೋಲ್‌ಮಾಲ್!





## 75ರ ವೃದ್ಧೆಯ ರೇಪ್ & ಮರ್ಡರ್!

## ಭೀಮಾತೀರದಲ್ಲಿ ಮತ್ತೆ ಹರೀತು ನೆತ್ತರು!



# ಬ್ಯಾಡರಹಳ್ಳಿ ಪಂಚಾಯಿತ್ತಿಯಲ್ಲಿ ಗೋಲ್‌ಮಾಲ್! ಪಿಡಿಓ ಬಸವರಾಜನ ಡಿಸ್‌ಮಿಸ್?!

**ಚನ್ನಪಟ್ಟಣ**

✍ ಶಾಂತರಾಜು ಜಿ. ಕಲ್ಲಹಳ್ಳಿ

**ಬೆಂ**ಗಳೂರು ದಕ್ಷಿಣ ಜಿಲ್ಲೆ (ಈ ಹಿಂದೆ ರಾಮನಗರ)ಯ ಚನ್ನಪಟ್ಟಣ ತಾಲ್ಲೂಕಿನ, ವಿರೂಪಾಕ್ಷಪುರ ಹೋಬಳಿಯ, ಜೆ. ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ



ಚನ್ನಪಟ್ಟಣದ ಜೆ. ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ

ಯಲ್ಲಿ 15ನೇ ಹಣಕಾಸು ಮತ್ತು ಗ್ರಾಮಗಳಿಂದ ಸಂಗ್ರಹವಾಗಿದ್ದ ತೆರಿಗೆ ಹಣ ಮತ್ತು ಸರ್ಕಾರದಿಂದ ಬಿಡುಗಡೆಯಾಗಿದ್ದ ಅನುದಾನ ಒಟ್ಟು 50 ಲಕ್ಷಕ್ಕೂ ಹೆಚ್ಚು ಹಣವನ್ನು ಪಿಡಿಓ ಬಸವರಾಜು ನಕಲಿ ಬಿಲ್‌ಗಳನ್ನು ಸೃಷ್ಟಿಸಿ ಗ್ರಾಮ ಪಂಚಾಯಿತಿಯ ಎರಡು ಖಾತೆಗಳಲ್ಲೂ ಹಣವನ್ನು ಡ್ರಾ ಮಾಡಿದ್ದಾರೆ. ಇಂತಹ ಪಿಡಿಓ ನಮ್ಮ ಪಂಚಾಯಿತಿಗೆ ಬೇಡ. ಈತನ ವಿರುದ್ಧ ಈಗಲೇ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸೂಕ್ತ ಕ್ರಮ ಜರುಗಿಸುವಂತೆ ಮನವಿ ಮಾಡಿದ್ದೇನೆ. ಈ ಕೂಡಲೇ ತಾಲ್ಲೂಕು ಪಂಚಾಯಿತಿ ಇಓ ಮತ್ತು ಜಿಲ್ಲಾ ಪಂಚಾಯಿತಿ ಸಿಇಓ ರವರುಗಳು ಜೆ. ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ


ಗ್ರಾ.ಪಂ. ಮಾಜಿ ಅಧ್ಯಕ್ಷ ರಾಮಚಂದ್ರು ಆರೋಪಿಸುತ್ತಿರುವುದು



ಸಾಮಾಜಿಕ ಪರಿಶೋಧನೆ ಗ್ರಾಮ ಸಭೆ

ಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಸೂಕ್ತ ತನಿಖೆ ನಡೆಸಿ ಪಿಡಿಓ ಬಸವರಾಜು ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಬೇಕು ಎಂದು ಮಾಜಿ ಅಧ್ಯಕ್ಷ ರಾಮಚಂದ್ರು ಮತ್ತು ಗ್ರಾ.ಪಂ.ನ ಸದಸ್ಯರುಗಳ ಜೊತೆಗೂಡಿ ಗ್ರಾಮ ಪಂಚಾಯಿತಿ ಕಚೇರಿಗೆ ಬೀಗ ಜಡಿದು ಪ್ರತಿಭಟಿಸಿದ ಪ್ರಸಂಗ ನಡೆದಿದೆ.

ಜೆ. ಬ್ಯಾಡರಹಳ್ಳಿ ಗ್ರಾ.ಪಂ.ಯಲ್ಲಿ ಒಟ್ಟು 16 ಚುನಾಯಿತ ಸದಸ್ಯರಿದ್ದು, ಹಾಲಿ ಅಧ್ಯಕ್ಷರಾಗಿ ಶ್ರೀಮತಿ ಅಭಿಲಾಷ ಕೃಷ್ಣ ಮತ್ತು ಉಪಾಧ್ಯಕ್ಷರಾಗಿ ಸಿದ್ದಪ್ಪರವರು ಕಾರ್ಯ ನಿರ್ವಹಿಸುತ್ತಿದ್ದು, ಸುಮಾರು 50 ಲಕ್ಷಕ್ಕೂ ಹೆಚ್ಚು ಅಭಿವೃದ್ಧಿ ಕಾಮಗಾರಿಗಳು ನಡೆದಿದ್ದು, ಕೆಲವು ಟೆಂಡರ್ ಮೂಲಕ ನಡೆದಿದೆ. ಆದರೆ ಇನ್ನೂ ಕೆಲವು ಕಾಮಗಾರಿಗಳಲ್ಲಿ ಖರೀದಿ ಸಾಮಗ್ರಿಗಳು ತಂದಿದ್ದೇವೆ ಎಂದು ಹೇಳುತ್ತಾರೆ. ಆದರೆ ಇವರು ಯಾವುದೇ ಮೋಟಾರ್ ಪಂಪ್‌ಗಳನ್ನಾಗಲಿ, ಕುಡಿಯುವ ನೀರಿಗೆ ಸಂಬಂಧಿಸಿದ ವಸ್ತುಗಳನ್ನಾಗಲಿ ಖರೀದಿ ಮಾಡದೆ ಗ್ರಾಮ ಪಂಚಾಯಿತಿ ಸದಸ್ಯರ ಗಮನಕ್ಕೆ ಬರದಂತೆ ನಕಲಿ ಬಿಲ್‌ಗಳನ್ನು ಸೃಷ್ಟಿಸಿ ಆ ಮೂಲಕ ಕೆಲಸ ಮಾಡಿದ್ದೇವೆ ಎಂದು ಹೇಳಿ ಹಣವನ್ನು ಡ್ರಾ ಮಾಡಿದ್ದಾರೆ. ಈ ಬಗ್ಗೆ ಸಾಮಾನ್ಯ ಸಭೆಗಳಲ್ಲೂ ತಾವು ಯಾವ ಊರಿನಲ್ಲಿ ಯಾವ ಸಾಮಗ್ರಿಗಳನ್ನು ತಂದಿದ್ದೀರಿ ಅದರ ದಾಖಲೆ ಸಮೇತ ಕೊಡಿ ಎಂದು ಸಭೆಯಲ್ಲಿ ಎಲ್ಲಾ ಸದಸ್ಯರುಗಳು ಕೇಳಿದ್ದೇವೆ. ಆದರೆ ಈವರೆಗೂ ಯಾವುದೇ ಸರಿಯಾದ ಮಾಹಿತಿ ನಮ್ಮಗಳಿಗೆ ಕೊಟ್ಟಿರುವುದಿಲ್ಲ. ಜೊತೆಗೆ ನಮ್ಮ ಗ್ರಾಮಗಳಲ್ಲೂ ಕೂಡ ಸಾಮಗ್ರಿಗಳನ್ನು ಕೂಡ ಅಳವಡಿಸಿಲ್ಲ. ಈ ಬಗ್ಗೆ ನಾವು ಸಾಮಾನ್ಯ ಸಭೆಯಲ್ಲಿ ಕೇಳಿದರೆ ಈ ಪಿಡಿಓ ಬಸವರಾಜು ಯ[illegible]


ಚನ್ನಪಟ್ಟಣ ಶಾಸಕ ಸಿ.ಪಿ. ಯೋಗೇಶ್ವರ್

ಪಂಚಾಯಿತಿಯಲ್ಲಿ ಸದಸ್ಯರ ಯಾವ ಕೆಲಸಕ್ಕೂ ಸ್ಪಂದನೆ ನೀಡುತ್ತಿಲ್ಲ. ಬದಲಿಗೆ ದಲ್ಲಾಳಿಗಳನ್ನು ಇಟ್ಟುಕೊಂಡು ಆ ಮೂಲಕ ಈತನ ಅನುಕೂಲಕ್ಕೆ ತಕ್ಕಂತೆ ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಜೆ. ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು ತಮ್ಮ ವಾರ್ಡ್‌ನಲ್ಲಿ ಕೆಲಸ ಕಾರ್ಯಗಳು ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಬಗ್ಗೆ ಗಮನಕ್ಕೆ ತಂದರೆ ಆ ಕೆಲಸವನ್ನು ಈತ ಮಾಡುವುದೇ ಇಲ್ಲ. ಬದಲಿಗೆ ದಲ್ಲಾಳಿಗಳನ್ನು ಇಟ್ಟುಕೊಂಡು ಹಣ ಕೊಟ್ಟವರಿಗೆ ಕೆಲಸವನ್ನು ಮಾಡಿಕೊಡುತ್ತಿರುವ ಪಿಡಿಓ. ಈತ ಈ ಗ್ರಾಮ ಪಂಚಾಯಿತಿಗೆ ಬಂದಾಗಿನಿಂದ ಈವರೆಗೆ ಜೆ. ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಭ್ರಷ್ಟಾಚಾರವನ್ನು ಮಾಡಿಕೊಂಡು ಬರುತ್ತಿದ್ದಾರೆ ಎಂದು ಆರೋಪಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಭ್ರಷ್ಟ ಪಿಡಿಓ ಬಸವರಾಜು

**ಮಾಜಿ ಗ್ರಾ.ಪಂ. ಅಧ್ಯಕ್ಷೆ ಪೂರ್ಣಿಮಾ ಆಕ್ರೋಶ!**

ಈ ಗ್ರಾಮ ಪಂಚಾಯಿತಿಗೆ ನಾನು ಅಧ್ಯಕ್ಷೆಯಾಗಿ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮಾಡಬೇಕೆಂದು ಕೊಂಡಿದ್ದಿದ್ದರೆ ಈ ಪಿಡಿಓ ಬಸವರಾಜು ನಾನು ಮಾಡುವ ಕೆಲಸ ಕಾರ್ಯಗಳಿಗೆ ಯಾವುದೇ ಸ್ಪಂದನೆ ಮಾಡುತ್ತಿರಲಿಲ್ಲ. ಮನೆ ಮನೆ ಬಾಗಿಲಿಗೆ ಹೋಗಿ ಇ-ಖಾತೆ ಮಾಡುವಂತೆ ಸುಮಾರು ಫೈಲ್‌ಗಳನ್ನು ತಂದುಕೊಟ್ಟಿದ್ದೆ. ಆದರೆ ಒಂದು ಇ-ಖಾತೆಯನ್ನು ಮಾಡಲಿಲ್ಲ. ಇನ್ನೂ ಆ ಫೈಲ್‌ಗಳು ವಿಲೇವಾರಿಯಾಗದೆ ಗ್ರಾಮ ಪಂಚಾಯಿತಿಯಲ್ಲೇ ಬಿದ್ದಿವೆ. ಯಾರು ಅವರಿಗೆ ಅನುಕೂಲ ಮಾಡಿಕೊಡುತ್ತಾರೆ ಅಂತಹವರಿಗೆ ಇ-ಖಾತೆಯನ್ನು ಮಾಡಿಕೊಟ್ಟಿದ್ದಾರೆ. ಈ ಚನ್ನಪಟ್ಟಣ ತಾಲ್ಲೂಕಿನ ಎಲ್ಲಾ ಪಂಚಾಯಿತಿಗಳನ್ನು ಹೊರತುಪಡಿಸಿದರೆ ನಮ್ಮ ಪಂಚಾಯಿತಿಯಲ್ಲಿ ನಡೆದಿರುವ ಭ್ರಷ್ಟಾಚಾರ ಯಾವ ಪಂಚಾಯಿತಿಯಲ್ಲೂ ನಡೆದಿರುವ ಭ್ರಷ್ಟಾಚಾರ ಯಾವ ಪಂಚಾಯಿತಿಯಲ್ಲೂ ನಡೆದಿಲ್ಲ. ಈ ಬಗ್ಗೆ ಜನ ಸ್ಪಂದನ ಸಭೆಯಲ್ಲಿ ಉಪಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಜೊತೆಗೆ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ. ಆದರೆ ಯಾವುದೇ ಅಧಿಕಾರಿಗಳು ಇದುವರೆಗೆ ಗ್ರಾಮ ಪಂಚಾಯಿತಿಗೆ ಬಂದು ಇಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆಯನ್ನು ಮಾಡಿಲ್ಲ. ಈಗಲಾದರೂ ತಾಲ್ಲೂಕು ಪಂಚಾಯಿತಿ ಇಓ ಈ ಬಗ್ಗೆ ಗಮನಹರಿಸಿ ನಮ್ಮ ಗ್ರಾಮ ಪಂಚಾಯಿತಿಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಸೂಕ್ತ ತನಿಖೆ ಕೈಗೊಂಡು ಈ ಭ್ರಷ್ಟ ಪಿಡಿಓ ಬಸವರಾಜುನನ್ನು ವಜಾಗೊಳಿಸಿ ಇಲ್ಲವಾದರೆ ವರ್ಗಾವಣೆಯಾದರೂ ಮಾಡಿ. ಇಲ್ಲ ಎಂದರೆ ಎಲ್ಲಾ ಸದಸ್ಯರ ಒಮ್ಮತದಲ್ಲಿ ಗ್ರಾಮ ಪಂಚಾಯಿತಿ ಮುಂದೆ ಈ ಪಿಡಿಓ ತೊಲಗುವವರೆಗೂ ಉಗ್ರವಾದ ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದರು.


ಜೆ. ಬ್ಯಾಡರಹಳ್ಳಿ ಗ್ರಾ.ಪಂ. ಕಾರ್ಯದರ್ಶಿ ಕುಮಾರ್

ಇವರ ಜೊತೆಯಲ್ಲಿ ಸಹಕಾರ ನೀಡಿದ ಗ್ರಾ.ಪಂ. ಸದಸ್ಯರಾದ ರಂಗಪ್ಪ, ಬಸವರಾಜು, ಜ್ಯೋತಿ, ಮುನಿವೆಂಕಟಮ್ಮ, ಸಿದ್ದಪ್ಪ, ಲಕ್ಷ್ಮಿ, ಗುರುರಾಜುರವರುಗಳಿದ್ದರು.

☞ 14


ಅಕ್ರಮ ಇ-ಖಾತೆ ಸಿದ್ದರಾಜು ಆರೋಪಿಸುತ್ತಿರುವುದು


ಗ್ರಾ.ಪಂ.ಯಲ್ಲಿ ಸಾಮಾನ್ಯ ಸಭೆಯ ದೃಶ್ಯ



ಗ್ರಾ.ಪಂ. ಸದಸ್ಯರ ಪಟ್ಟಿ



## ಬಿಕ್ಲು ಶಿವ ಹಂತಕನೊಂದಿಗೆ...?!

ರಾಜಧಾನಿ ಬೆಂಗಳೂರಿನಲ್ಲಿ ಇತ್ತೀಚೆಗೆ ರೌಡಿ ಬಿಕ್ಲು ಶಿವನ ಕೊಲೆ ನಡೆದಿದ್ದು, ಈ ಕೇಸ್‌ನಲ್ಲಿ ಕೆ.ಆರ್. ಪುರದ ಬಿಜೆಪಿ ಶಾಸಕ ಭೈರತಿ ಬಸವರಾಜ್ ಅವರನ್ನು ಐದನೇ ಆರೋಪಿ ಮಾಡಿರುವುದು, ಮತ್ತೇ ಈಗ ಈ ಪ್ರಕರಣದ ತನಿಖೆಯನ್ನು ಸಿಐಡಿ ಇಲಾಖೆಗೆ ವಹಿಸಿರುವುದೆಲ್ಲ ನಿಮಗೆ ಗೊತ್ತಿರಬೇಕು.

ರೌಡಿ ಬಿಕ್ಲು ಶಿವನ ಕೊಲೆ ಪ್ರಕರಣದಲ್ಲಿ ಹೆಣ್ಣೂರು ರೌಡಿ ಶೀಟರ್ ಜಗದೀಶ್ ಜಗ್ಗ ಎ1 ಆರೋಪಿಯಾಗಿದ್ದು, ಆತನ ಜೊತೆ ರಚಿತಾ ರಾಮ್ ಇರೋ ಫೋಟೋ ವೈರಲ್ ಆಗಿದೆ! ಸೆಕ್ಸಿ ನಟಿ ರಚಿತಾ ರಾಮಿಗೆ, ಕುಖ್ಯಾತ ರೌಡಿ ಜಗದೀಶ್ ರೇಷ್ಮೆ ಸೀರೆ ಹಾಗೂ ಚಿನ್ನದ ಒಡವೆಗಳನ್ನು 'ಗಿಫ್ಟ್' ಕೊಟ್ಟಿದ್ದಾನೆ ಎನ್ನುವ ಹಾಗಿದೆ ಚಿತ್ರ ರೂಪಕ!!

ಒಂದು ಮೂಲದ ಪ್ರಕಾರ, ರವಿಚಂದ್ರನ್, ರಾಧಿಕಾ ಕುಮಾರಸ್ವಾಮಿ ನಟಿಸಿದ್ದ ರವಿ ಬೋಪಣ್ಣ ಸಿನಿಮಾದಲ್ಲಿ ರಚ್ಚು ವಿಶೇಷ ಪಾತ್ರ ನಿರ್ವಹಿಸಿದ್ದಳು. ಆ ಚಿತ್ರಕ್ಕೆ ಜಗದೀಶ್ ಸಹ ನಿರ್ಮಾಪಕನಾಗಿದ್ದನಂತೆ. ರಚಿತಾಗೆ ಸಂಭಾವನೆ ಬದಲು ಇಂತಿರ್ಪ ದುಬಾರಿ ಉಡುಗೊರೆ ಕೊಟ್ಟಿದ್ದನಂತೆ! ಅವತ್ತು ರವಿಚಂದ್ರನ್ ಕೂಡ ಇದಕ್ಕೆ ಸಾಕ್ಷಿಯಾಗಿದ್ದರು ಎನ್ನಲಾಗಿದೆ. ಈಗ ರವಿ ಮಾಮನನ್ನು ಮರೆಮಾಚಿ ರಚ್ಚು ಬೇಬಿ ಯನ್ನು ಮಾತ್ರ ವಿಜೃಂಭಿಸ ಲಾಗುತ್ತಿದೆ ಎಂದು ರಚ್ಚು ಬಳಗ ಫೀಲಿಡುತ್ತಿದೆ! ಹಾಗಾದ್ರೆ, ರಚ್ಚು ಒಳ್ಳೆಯವಳ... ಅವಳಿಗೆ ರೌಡಿ ಇಸಮುಗಳ ಸಂಪರ್ಕವೆ ಇಲ್ವಾ.... ಅಂತ ಕೇಳಬೇಡಿ. ಮಾಂಸಲ ಸುಂದರಿ 'ರಚ್ಚು', ಕೊಲೆ ಆರೋಪಿ ಅಂತ ಗೊತ್ತಿದ್ರು 'ದಚ್ಚು' ಜಪ ಮಾಡ್ತಿಲ್ವ! ದಚ್ಚುಗೆ ಬೆಂಗಳೂರಿನ ನಟೋರಿಯಸ್ ರೌಡಿ ಸೈಕಲ್ ರವಿ ಫ್ರೆಂಡ್! ಆತ ಇವಳಿಗೂ ಫ್ರೆಂಡೇ ಅನ್ನೋದು ರಹಸ್ಯವೇನಲ್ಲ!!


ಇನ್ನೊಂದು ಬ್ರೇಕಿಂಗ್ ನ್ಯೂಸ್ ಏನಂದ್ರೆ, ರಚ್ಚುಗೆ ರಾಜಕಾರಣಿ ಗಳ ಜೊತೆಗೂ ಅಂಟು ನಂಟು ಎಲ್ಲಾ ಇದೆ, ಬಿಜೆಪಿ ಧುರೀಣರೊಬ್ಬರಿಂದ ಭಾರಿ ಗಂಟು ಮಾಡಿಕೊಂಡಿದ್ದಾಳೆ ಅಂತ ಕೆಲವೇ ಮಾಸಗಳ ಹಿಂದೆ ರೂಮರ್ ಎದ್ದಿತ್ತು! ವಕೀಲ್ ಸಾಬ್ ಜಗದೀಶ್ ಗೌಡ ಬಾಂಬ್ ಬ್ಲಾಸ್ಟ್ ಮಾಡಿದ್ರು!

ಅದು'ನಂದಿ ಹಿಲ್ಸ್' ಮ್ಯಾಟರ್!! ಮೀಡಿಯಾ ಮಂದಿ ಆ ಸುದ್ದಿಗೆ ಸುಣ್ಣ ಬಣ್ಣ ಬಳಿಯಲು ಸಿದ್ದವಾಗೋ ಅಷ್ಟರಲ್ಲಿ 'ಯಾರೋ' ಮಾನ್ಯ ನ್ಯಾಯಾಲಯದಿಂದ 'ಸ್ಟೇ' ಆರ್ಡರ್ ತಂದುಬಿಟ್ಟರು!! ಅಂಥ ಪವರ್ ಫುಲ್ ರಾಜಕಾರಣಿಗಳ ಸಾಂಗತ್ಯ ಹೊಂದಿರುವ ರಚ್ಚುಗೆ ಇನ್ನೂ ರೌಡಿಗಳ ಸ್ನೇಹ ಯಾವ ಲೆಕ್ಕಕ್ಕೆ ಅಂತೀರಾ....?! ಅಂದಹಾಗೆ, ರಚಿತಾ ರಾಮ್ ತಾನೇ ಹೀರೋಯಿನ್ ಆಗಿ ನಟಿಸಿದ್ದ 'ಸಂಜು ವೆಡ್ಸ್ ಗೀತಾ-2' ಚಿತ್ರದ ಪ್ರಚಾರ ಕಾರ್ಯಕ್ಕೆ ಹೋಗದೆ, ಆ ಚಿತ್ರದ ನಿರ್ಮಾಪಕರಿಗೆ ಭಾರಿ ಅನ್ಯಾಯ ಮಾಡಿದ್ದ ಘಟನೆ ನಡೆದಿತ್ತು. ಅವರ ಶಾಪ ತಟ್ಟದೇ ಬಿಟ್ಟೀತೆ.... ಅಂತ ಜನ ಮಾತಾಡಿಕೊಂಡಿದ್ರು. ಅದೀಗ ಒಂದೊಂದಾಗಿ ನಿಜವಾಗ್ತ ಇದೆಯಾ?!

# ರೌಡಿ ಬೇಬಿ ರಚ್ಚು...! ದಚ್ಚು ಭವಿಷ್ಯ ನುಚ್ಚು?



**ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಆರು ತಿಂಗಳು ಜೈಲ್‌ನಲ್ಲಿದ್ದ ನಟ ದರ್ಶನ್‌ಗೆ, ನಂತರ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಜಾಮೀನು ಸಿಕ್ಕಿದ್ದು, ಬೆನ್ನು ಹುರಿಯ 'ಡಿಸ್ಕ್ ಲ್ಯಾಪ್ಸ್' ಆಗಿದೆ ಅರ್ಜೆಂಟಾಗಿ ಆಪರೇಷನ್ ಮಾಡಿಸಬೇಕು ಎಂಬ ಕಾರಣ ಕೊಟ್ಟು ಬೇಲ್ ಗಿಟ್ಟಿಸಿಕೊಂಡು ಹೊರಬಂದ ದರ್ಶನ್, ಯಾವ ಆಪರೇಷನ್ನೂ ಮಾಡಿಸಿಕೊಳ್ಳದೆ ನಾಲ್ಕು ದಿನ ಕುಂಟುಕೊಂಡು ನಡೆದು ಡ್ರಾಮಾ ಮಾಡಿದ್ದು ಇದೀಗ ಶೂಟಿಂಗ್.... ಥೈಲ್ಯಾಂಡ್... ಅಂತ ಮಜಾ ಮಾಡಿಕೊಂಡು ಸುತ್ತಾಡುತ್ತಾ ಇರೋ ವಿಚಾರ... ಎಲ್ಲಾ ನಿಮಗೆ ಗೊತ್ತಿದೆ! ಇದನ್ನೇ ಈಗ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಗಮನಕ್ಕೆ ತಂದು, ದರ್ಶನ್‌ಗೆ ನೀಡಿರುವ ಬೇಲ್ ಅನ್ನು ರದ್ದುಪಡಿಸಬೇಕು... ಎಂದು ಅರ್ಜಿ ಸಲ್ಲಿಸಿದ್ದು, ಮಾನ್ಯ ಸುಪ್ರೀಂ ಕೋರ್ಟ್ ರಾಜ್ಯ ಹೈ ಕೋರ್ಟ್ ನಡೆಯನ್ನು ಪ್ರಶ್ನಿಸಿ, ಒಂದು ವಾರ ಕಾಲಮಿತಿಯೊಳಗೆ ಈ ಬಗ್ಗೆ ಸಮರ್ಥನೆ ನೀಡುವಂತೆ ಅದೇಶಿಸಿದೆ! ಸುಪ್ರೀಂ ಕೋರ್ಟ್‌ನ ಖಡಕ್ ಆದೇಶವನ್ನು ಗಮನಿಸಿದರೆ, ನಮ್ಮ ಹೈಕೋರ್ಟ್, ಸುಪ್ರೀಂ ಪೀಠಕ್ಕೆ ಸಮರ್ಥನೆ ಕೊಡಲಾಗದೆ, ದರ್ಶನ್ ಮತ್ತೆ ಜೈಲು ಪಾಲಗುತ್ತಾರೆ ಎಂಬ ಅನುಮಾನ ಹುಟ್ಟುಕೊಂಡಿದೆ!! ಹಾಗಾದ್ರೆ...**




ರೇಣುಕಾಸ್ವಾಮಿ ಕೊಲೆ ಕೇಸ್ ಆರೋಪಿಗಳಿಗೆ ರಾಜ್ಯ ಹೈಕೋರ್ಟ್ ಜಾಮೀನು ನೀಡಿದ್ದನ್ನು ಆಕ್ಷೇಪಿಸಿ, ಜಾಮೀನು ರದ್ದುಪಡಿಸಲು ಕೋರಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದು, ಈ ಕುರಿತ ವಿಚಾರಣೆಯನ್ನು ಕೈಗೆಟ್ಟಿಕೊಂಡಿರುವ ಮಾನ್ಯ ಸುಪ್ರೀಂ ಕೋರ್ಟ್, ಒಂದು ವಾರದೊಳಗೆ ಈ ವಿಚಾರವನ್ನು ಪರಾಮರ್ಶಿಸಿ ವರದಿ ನೀಡುವಂತೆ ರಾಜ್ಯ ಹೈಕೋರ್ಟ್ ಗೆ ಆದೇಶ ಮಾಡಿದೆ! ಈಗಾಗಲೇ ನಾಲ್ಕು ದಿನ ಉರುಳಿ ಹೋಗಿದ್ದು, ಇನ್ನೂ ಮೂರು ದಿನಗಳಲ್ಲಿ ದರ್ಶನ್ ಪರ ವಕೀಲರು ಮೂರೇ ಮೂರು ಪುಟಗಳಲ್ಲಿ ತಮ್ಮ ಲಿಖಿತ ವಾದ ಸಲ್ಲಿಸಬೇಕಾಗಿದೆ!

ಒಂದು ವೇಳೆ ದರ್ಶನ್ ಬೇಲ್ ಕ್ಯಾನ್ಸಲ್ ಆದ್ರೆ ಮುಂದೇನು? ಮತ್ತೆ ಜೈಲಿಗೆ ಹೋಗುವ ಸ್ಥಿತಿ ಬಂದ್ರೆ ಒಪ್ಪಿಕೊಂಡಿರುವ ಸಿನಿಮಾಗಳ ಕಥೆಯೇನು? ರೇಣುಕಾಸ್ವಾಮಿ ಕೊಲೆ ಕೇಸಲ್ಲಿ ಜೈಲಿಗೆ ಹೋಗಿ ಆಚೆ ಬಂದ್ಮೇಲೆ ರಿಲ್ಯಾಕ್ಸ್ ಆಗಿದ್ದ ದರ್ಶನ್ ಅಂಡ್ ಗ್ಯಾಂಗ್‌ಗೆ ಮತ್ತೆ 'ಢವಢವ' ಶುರುವಾಗಿದೆ! ಯಾಕಂದ್ರೆ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಆಡಿರೋ ಮಾತುಗಳು, ಹೈಕೋರ್ಟ್ ನೀಡಿರುವ ಜಾಮೀನೇ ರದ್ದಾಗಿ ಬಿಡುತ್ತಾ ಎನ್ನುವ ಪ್ರಶ್ನೆಗಳನ್ನ ಹುಟ್ಟಾಕಿವೆ! ಒಂದು ವೇಳೆ ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನು ರದ್ದಾದ್ರೆ 'ಡಿ' ಬಾಸ್ ಗ್ಯಾಂಗ್‌ನ ಪರಿಸ್ಥಿತಿ ಹೇಗಿರಲಿದೆ? ಅಕಸ್ಮಾತ್ ಬೇಲ್ ರದ್ದಾಗಿ ಡಿ ಬಾಸ್ ಮತ್ತೆ ಜೈಲಿಗೆ ಹೋದ್ರೂ ಕಾನೂನು ಕುಣಿಕೆಯಿಂದ ಪಾರಾಗೋದಕ್ಕೆ ದರ್ಶನ್ ಮುಂದಿರೋ ಆಪ್ಷನ್‌ಗಳಾದರೂ ಏನು?! ಗ್ಯಾಂಗ್ ಮಾತು ಅತ್ಲಾಗಿರಲಿ, ಡಿ ಬಾಸ್ ಅವರ ಫ್ಯಾನ್ಸ್ ಸಿಕ್ಕಾಪಟ್ಟೆ ಟೆನ್ಷನ್‌ನಲ್ಲಿದೆ! ಇನ್ನು ಮೂರು ದಿನ ನಿದ್ದೆಯಿಲ್ಲದೆ ಒದ್ದಾಡುವಂಥ ಟೆನ್ಷನ್‌ನಲ್ಲೇ

☞ 4

# ಹೈಕೋರ್ಟ್ ವಿರುದ್ಧ ಹರಿಹಾಯ್ದ ಸುಪ್ರೀಂ!

24-07-2025 ರಂದು ಸುಪ್ರೀಂ ಕೋರ್ಟ್‌ನಲ್ಲಿ ನಡೆದ ದರ್ಶನ್ ಮತ್ತವರ ಆರು ಮಂದಿ ಸಹಚರರ ಬೇಲ್ ತೀರ್ಪಿನ ವಿಚಾರಣೆಯಲ್ಲಿ, ದರ್ಶನ್ ಸೇರಿ ಏಳು ಮಂದಿ ಆರೋಪಿಗಳಿಗೆ ಹೈಕೋರ್ಟ್ ನೀಡಿದ ಜಾಮೀನು ಆದೇಶದ ಕುರಿತು ಸುಪ್ರೀಂ ಕೋರ್ಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ! ಸಾಕ್ಷ್ಯಾಧಾರಗಳಿಗಿಂತ ಹೆಚ್ಚು ವಿಮರ್ಶೆ ಇಲ್ಲದೆ ಜಾಮೀನು ನೀಡಿರುವ ಹೈಕೋರ್ಟ್ ತೀರ್ಪು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಪೀಠ ತಿಳಿಸಿದೆ. ಸಾಕ್ಷ್ಯಾಧಾರಗಳ ಲಭ್ಯತೆ ಇದ್ದರೂ ಅದನ್ನು ಗಂಭೀರವಾಗಿ ಪರಿಗಣಿಸದೇ ಜಾಮೀನು ನೀಡಲಾಗಿದೆ ಎಂಬರ್ಥದಲ್ಲಿ ಹೈಕೋರ್ಟ್ ಜಾಮೀನು ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್ ಕಿಡಿಕಾರಿದೆ. 1 ಗಂಟೆ 40 ನಿಮಿಷಗಳ ಕಾಲ ನಡೆದ ಸುಧೀರ್ಘ ವಿಚಾರಣೆಯಲ್ಲಿ, ಸದರಿ ಪೀಠವು ಪ್ರಕರಣದ ಸಾಕ್ಷ್ಯಾಧಾರಗಳು, ಎಫ್‌ಎಸ್‌ಎಲ್ ವರದಿ, ಸ್ಥಳ ಪರಿಶೀಲನೆ ವರದಿಗಳು ಎಲ್ಲವೂ ಸ್ಪಷ್ಟವಾಗಿರುವಾಗ, ಹೈಕೋರ್ಟ್ ಯಾಕೆ ಇಂತಹ ತೀರ್ಪು ನೀಡಿತು ಎಂಬ ಪ್ರಶ್ನೆ ಎತ್ತಿದೆ. ಅನೇಕ ಕರೆ ವಿವರಗಳು, ಪ್ರಮುಖ ಪ್ರತ್ಯಕ್ಷದರ್ಶಿಗಳ ಹೇಳಿಕೆಗಳು, ಹಾಗೂ ಇತರ ಮೌಲ್ಯಮಾಪನಗಳ ಕುರಿತು ರಾಜ್ಯ ಹೈಕೋರ್ಟ್‌ನಿಂದ ಮಾನ್ಯ ಸುಪ್ರೀಂ ಕೋರ್ಟ್ ಸ್ಪಷ್ಟತೆ ಕೇಳಿದೆ! ದರ್ಶನ್ (ಎ1) ಹಾಗೂ ಎರಡನೇ ಆರೋಪಿ ಪವಿತ್ರಾ ಗೌಡಗೆ ಇರುವ ಸಂಬಂಧವನ್ನು ಪ್ರಶ್ನೆ ಮಾಡಲಾಗಿದೆ! ಅವರ ನಡುವೆ ನಡೆದ ಕರೆ ಸಂವಹನದ ವಿವರಗಳನ್ನು ಕೋರಿ, ತನಿಖಾ ವರದಿಗಳನ್ನು ಮತ್ತೆ ಪರಿಶೀಲಿಸಲು ಸೂಚಿಸಲಾಗಿದೆ! ಸಂಪೂರ್ಣ ವಾದ ಆಲಿಸಿದ ನ್ಯಾ. ಪರ್ದಿವಾಲಾ ನೇತೃತ್ವದ ಸುಪ್ರೀಂ ಪೀಠ, ದರ್ಶನ್ ಮತ್ತವರ ಸಹಚರರಿಗೆ ಕರ್ನಾಟಕ ಹೈಕೋರ್ಟ್ ಜಾಮೀನು ನೀಡಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದೆ. ಕರ್ನಾಟಕ ಹೈಕೋರ್ಟ್ 7 ಆರೋಪಿಗಳನ್ನು ನಿರ್ದೋಷಿ ಎಂದು ನಿರ್ಧರಿಸಿದೆಯೇ ? ಎಲ್ಲಾ ಜಾಮೀನು ಆದೇಶಗಳಲ್ಲಿಯೂ ಹೈಕೋರ್ಟ್ ಹೀಗೆ ಹೇಳುತ್ತಾ? ಹೈಕೋರ್ಟ್ ನ್ಯಾಯಮೂರ್ತಿ ಹೀಗೆ ತಪ್ಪು ಮಾಡಬಹುದೇ? ಎಂದು ಪ್ರಶ್ನಿಸಿದೆ. ಹೀಗಾಗಿ, ದರ್ಶನ್ ಗ್ಯಾಂಗ್ ಬೇಲ್ ಕ್ಯಾನ್ಸಲ್ ಆಗುತ್ತಾ ಎಂಬ ಪ್ರಶ್ನೆ ಉದ್ಭವಿಸಿದೆ! ನಾಳೆ 31-07-2025 ಗುರುವಾರ ಈ ಪ್ರಶ್ನೆಗೆ ಉತ್ತರ ಸಿಗಲಿದೆ!!

1. ಈ ಒಂದು ಕೊಲೆ ಪ್ರಕರಣದ ದೂರುದಾರರು ಯಾರು..?
2. ಎಷ್ಟು ಜನರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆ ಮಾಡಲಾಗಿದೆ..?
3. ಈ ಒಂದು ಕೊಲೆ ಪ್ರಕರಣದ ಟ್ರಯಲ್ ಪ್ರಾರಂಭವಾಗಿದ್ಯಾ..?
4. ಕೊಲೆ ಪ್ರಕರಣದ ಪ್ರತಿಯೊಬ್ಬ ಆರೋಪಿಯ ಪಾತ್ರವೇನು..?
5. ಈ ಪ್ರಕರಣದಲ್ಲಿ ಐ ವಿಟ್ನೆಸ್ ಗಳು ಎಷ್ಟು ಜನರಿದ್ದಾರೆ..?
6. ಪವಿತ್ರಾ ಗೌಡ ಮತ್ತು ದರ್ಶನ್ ನಡುವಿನ ಸಂಬಂಧವೇನು..?
7. ಪವಿತ್ರಾ ಹಾಗೂ ದರ್ಶನ್ ಏನು ಕೆಲಸ ಮಾಡುತ್ತಿದ್ದಾರೆ..?
8. ಇಷ್ಟೆಲ್ಲಾ ಸಾಕ್ಷಿಗಳಿದ್ರೂ ಹೈಕೋರ್ಟ್ ಜಾಮೀನು ಹೇಗೆ ನೀಡ್ತು..?
9. ಕೆಳ ಹಂತದ ನ್ಯಾಯಾಲಯ ತಪ್ಪು ಮಾಡಿದ್ರೆ ತಿದ್ದಬಹುದು. ಆದ್ರೆ, ಹೈಕೋರ್ಟ್ ಈ ರೀತಿ ತಪ್ಪುಮಾಡಿದ್ದು ಸರಿಯೇ..?
10. ದರ್ಶನ್ ಮೆಡಿಕಲ್ ಗ್ರೌಂಡ್‌ನ ಮೇಲೆ ಜಾಮೀನು ಪಡೆದುಕೊಂಡಿದ್ದಾರೆ. ಆದರೆ, ಇದೀಗ ಸಿನಿಮಾ ಶೂಟಿಂಗ್‌ನಲ್ಲಿ ಭಾಗಿಯಾಗಿರೋದು ಹೇಗೆ..?
11. ಕೊಲೆ ಮಾಡಿದ ಬಳಿಕವೂ ಇಂತಹ ಫೋಟೋಗಳನ್ನ ತೆಗೆದುಕೊಳ್ಳೋದು ಸಾಧ್ಯವೇ..?
12. ಇಬ್ಬರು ಐ ವಿಟ್ನೆಸ್‌ಗಳ ಬಗೆಗೆ ಹೈಕೋರ್ಟ್ ಏನು ಹೇಳಿದೆ..?
13. ಟೆಕ್ನಿಕಲ್ ಹಾಗೂ ಸೈಂಟಿಫಿಕ್ ಎವಿಡೆನ್ಸ್ ಇದ್ರೂ ಅದೇಗೆ ಜಾಮೀನು ನೀಡಲಾಯ್ತು..?
14. ಪ್ರತ್ಯಕ್ಷದರ್ಶಿ ಹಾಗೂ ವೈದ್ಯರ ವರದಿಯನ್ನು ಯಾಕೆ ನಂಬಬಾರದು..?
15. ಪವಿತ್ರಾಗೌಡ ವೃತ್ತಿಯಲ್ಲಿ ಏನು ಮಾಡಿಕೊಂಡಿದ್ದಾರೆ..?
16. ಹೈಕೋರ್ಟ್ ಎಲ್ಲಾ ಪ್ರಕರಣದಲ್ಲೂ ಇದೇ ರೀತಿಯ ಆದೇಶ ಕೊಡಲು ಸಾಧ್ಯವೇ..?
17. ಏಳು ಜನ ಆರೋಪಿಗಳನ್ನ ಐ ವಿಟ್ನೆಸ್‌ಗಳು ಗುರುತಿಸಿದ್ದಾರಾ..?
18. ಈ ಎಲ್ಲಾ ಸಾಕ್ಷ್ಯಗಳನ್ನ ಹೈಕೋರ್ಟ್ ನಿರ್ಲಕ್ಷಿಸಬಹುದೇ..?






3 ☜

ಇರುವಂತೆ ಮಾಡಿದ್ದಾರೆ, ಸುಪ್ರೀಂ ಕೋರ್ಟ್‌ನ ಖಡಕ್ ನ್ಯಾಯಮೂರ್ತಿಗಳು!


ಡಿಸಿಪಿ ಎಸ್. ಗಿರೀಶ್


ಎಸಿಪಿ ಚಂದನ್‌ಕುಮಾರ್

ಡಿಯರ್ ರೀಡರ್ಸ್, ಡಿ ಗ್ಯಾಂಗ್‌ನ ಜಾಮೀನು ರದ್ದು ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿರೋ ಮೇಲ್ಮನವಿ ಅರ್ಜಿಯ ವಿಚಾರಣೆಯ ತೀವ್ರತೆಯೇ ಹಾಗಿತ್ತು ಅಂದ್ರೆ ತಪ್ಪಿಲ್ಲ, ಯಾಕಂದ್ರೆ, ಸುಪ್ರೀಂ ಕೋರ್ಟ್‌ನಲ್ಲಿ ಸರ್ಕಾರದ ಪರ ಹಾಗೂ ದರ್ಶನ್ ಪರ ವಾದ ಪ್ರತಿವಾದಗಳನ್ನ ಸೂಕ್ಷ್ಮವಾಗಿ ಆಲಿಸಿದ ನ್ಯಾಯಮೂರ್ತಿಗಳು, ಹೈಕೋರ್ಟ್ ನೀಡಿರೋ ಜಾಮೀನಿಗೆ ಗಂಭೀರ ಆಕ್ಷೇಪ ವ್ಯಕ್ತಪಡಿಸಿದ್ದೇ ಪ್ರಕರಣಕ್ಕೆ ಸಿಕ್ಕಿರೋ ಬಿಗ್ ಟ್ವಿಸ್ಟ್! ಹೈಕೋರ್ಟ್ ಆದೇಶದ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವುದರ ಜೊತೆ ಜೊತೆಗೆ ಆಗಿರೋ ಎಲ್ಲಾ ಅನಾಹುತಗಳಿಗೂ ಪವಿತ್ರಾ ಗೌಡಳೇ ಕಾರಣ ಅಂತಲೂ ನ್ಯಾಯಮೂರ್ತಿಗಳು ಹೇಳಿರುವುದು ಇನ್ನೊಂದು ಬಿಗ್ ಟ್ವಿಸ್ಟ್!! ಇಷ್ಟೆಲ್ಲಾ ಹೇಳಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾ ಸರ್, ಆರೋಪಿ ದರ್ಶನ್ ಗ್ಯಾಂಗ್‌ಗೆ ಬೇಲ್ ನೀಡುವಾಗ ಹೈಕೋರ್ಟ್ ಸೂಕ್ತ ವಿವೇಚನೆ ಬಳಸಿಲ್ಲ ಅಂತಾ ಹೇಳಿರೋದು ಈಗ ಡಿ ಅಭಿಮಾನಿಗಳಲ್ಲಿ ಕುತೂಹಲದ ಜೊತೆಗೆ ಮತ್ತೆ ಜೈಲು ಭೂತದ ಆತಂಕ ಕಾಡುವಂತೆ ಮಾಡಿದೆ! ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಿಂದಲೂ ರಿಲೀಫ್ ಪಡೆದುಕೊಳ್ಳುವುದಕ್ಕೆ ಡಿ ಬಾಸ್ ಅಂಡ್ ಗ್ಯಾಂಗ್ ಹರಸಾಹಸ ಪಡ್ತಿದೆ!

ಗಮನಿಯ ವಿಚಾರ ಏನೆಂದರೆ, ಭಾರತದಲ್ಲಿ ದಿ ಬೆಸ್ಟ್ ವಕೀಲ ಅನಿಸಿಕೊಂಡಿದ್ದ ಕಪಿಲ್ ಸಿಬಲ್‌ರನ್ನೇ ತಮ್ಮ ಪರ ವಾದ ಮಾಡೋದಕ್ಕೆ ಆಯ್ಕೆ ಮಾಡಿಕೊಂಡಿದ್ರು ಡಿ ಬಾಸ್! ಆದ್ರೆ, ಅದ್ಯಾಕೋ ಏನೋ, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಕಪಿಲ್ ಸಿಬಲ್‌ರವರು ಕೊನೇ ಕ್ಷಣದಲ್ಲಿ ಈ ಪ್ರಕರಣದಿಂದ ಹಿಂದೆ ಸರಿದುಬಿಟ್ಟರು! ಅಲ್ಲೇ ಸಾಕಷ್ಟು ಪ್ರಶ್ನೆಗಳು ದಿಗ್ಗನೇ ಎದ್ದವು! ಜೊತೆಗೆ ಕೆಲ ಸುಳಿವುಗಳನ್ನ ಕೊಡ್ತಾ ಹೋದವು.

ಕೊನೆಗೆ, ಮತ್ತೊಬ್ಬ ಖ್ಯಾತ ವಕೀಲ ಸಿದ್ಧಾರ್ಥ್ ದವೆ ದರ್ಶನ್ ಪರ ವಾದ ಮಂಡಿಸಲು ಮುಂದೆ ಬಂದ್ರು. ಆದ್ರೆ, ಗುರುವಾರ ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾರವರ ಮುಂದೆ ಸಿದ್ಧಾರ್ಥ್ ದವೆ ಮಂಡಿಸಿದ ವಾದ ತುಂಬಾನೇ ವೀಕ್ ಆಗಿತ್ತು ಅಂತಾನೇ ಹೇಳಬಹುದು! ಯಾಕಂದ್ರೆ, 1 ಗಂಟೆ 40 ನಿಮಿಷಗಳ ಕಾಲ ನಡೆದ ವಾದ ಪ್ರತಿವಾದದಲ್ಲಿ (ಬಾಕ್ಸ್ ನೋಡಿ) ಮಾನ್ಯ ನ್ಯಾಯಮೂರ್ತಿಗಳು ಸರ್ಕಾರದ ಪರ ವಕೀಲ ಸಿದ್ಧಾರ್ಥ್ ಲೂತ್ರಾರ ಕಡೆಯಿಂದ ರೇಣುಕಾಸ್ವಾಮಿ ಕೊಲೆ ಕೇಸ್‌ನ ಇಂಚಿಂಚೂ ಮಾಹಿತಿ ಪಡ್ಕೊಂಡ್ರು! ಕೊನೆಗೆ ಮೂರು ಪುಟಗಳಿಗೆ ಮೀರದಂತೆ ನಿಮ್ಮ ಆರ್ಗ್ಯೂಮೆಂಟ್‌ನ ಬರೆದುಕೊಡಿ ಅಂತಾ ಆರೋಪಿಗಳಿಗೆ ಸುಪ್ರೀಂ ಕೋರ್ಟ್ ಪೀಠ ಆದೇಶಿಸಿತು! ಒಂದು ವಾರದೊಳಗೆ ಉಳಿದ ಆರೋಪಿಗಳ ಪರ ವಕೀಲರು ಮೂರು ಪುಟಗಳ ಲಿಖಿತ ವಾದಂಶವನ್ನು ಸಲ್ಲಿಸಿ ಎಂದು ಸುಪ್ರೀಂಕೋರ್ಟ್ ಹೇಳಿತು. ಇನ್ನೂ ಮೂರು ದಿವಸ ಕಳೆದ ಮೇಲೆ ಈ ಕುರಿತ ಜಡ್ಜ್‌ಮೆಂಟ್ ಬರಲಿದೆ! ಈಗ ದರ್ಶನ್ ಅಭಿಮಾನಿಗಳಲ್ಲಿ ಕಾಡ್ತಿರೋ ಟೆನ್ಷನ್ ಒಂದೇ... ಒಂದು ವೇಳೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಬೇಲ್ ಕ್ಯಾನ್ಸಲ್ ಮಾಡಿದ್ರೆ ಮುಂದೇನು ಅನ್ನೋದು!

### ಒಂದು ವೇಳೆ ದರ್ಶನ್ ಬೇಲ್ ಕ್ಯಾನ್ಸಲ್ ಆದ್ರೆ?

ಸುಪ್ರೀಂಕೋರ್ಟ್‌ನಲ್ಲಿ ದರ್ಶನ್‌ಗೆ ಬೇಲ್ ಕ್ಯಾನ್ಸಲ್ ಆಯ್ತು ಅಂತಾ ಇಟ್ಕೊಳ್ಳಿ, ಆಗ ಅಭಿಮಾನಿಗಳ ಪಾಲಿನ ಚಾಲೆಂಜಿಂಗ್ ಸ್ಟಾರ್‌ಗೆ ಶರಣಾಗದೇ ಬೇರೆ ದಾರಿಯೇ ಇಲ್ಲ! ದರ್ಶನ್‌ಗೆ ಎಲ್ಲಿದ್ದರೂ ಬಂದು ಸರಂಡರ್ ಆಗೋದಕ್ಕೆ ನ್ಯಾಯಾಲಯ ಕಾಲಾವಕಾಶ ಕೊಡುತ್ತೆ. ಅದು 24ರಿಂದ 72 ಗಂಟೆ ಇರಬಹುದು ಅಥವಾ ಒಂದು ವಾರ ಕೂಡ ಇರಬಹುದು. ಬೇಲ್ ರದ್ದಾಯ್ತು ಅಂದ್ರೆ ದರ್ಶನ್ ಎಲ್ಲಿದ್ದರೂ ಬಂದು ಪೊಲೀಸರ ಮುಂದೆಯೋ, ಅಥವಾ ನ್ಯಾಯಾಲಯದ ಮುಂದೆಯೋ ಶರಣಾಗಲೇಬೇಕು! ಒಂದು ವೇಳೆ ಶರಣಾಗಲಿಲ್ಲ ಅಂದ್ರೆ, ಪೊಲೀಸರು 'ದಾಸ'ನನ್ನ ಅರೆಸ್ಟ್ ಮಾಡ್ತಾರೆ! ಕಾನೂನು ಏನೇ ಹೇಳಿದ್ರೂ ದರ್ಶನ್ ಅದಕ್ಕೆ ತಲೆಬಾಗಿ ನಡೆದುಕೊಂಡ್ರೆ, ಒಳ್ಳೇದು ಅನ್ನೋದು ಕೆಲ ವಕೀಲರು ಹೇಳುತ್ತಿರೋ ಮಾತು!

ಸುಪ್ರೀಂ ಕೋರ್ಟ್‌ನಂತಹ ನ್ಯಾಯಾಲಯಗಳಲ್ಲಿ ಬೇಲ್ ರದ್ದಾಯ್ತು ಅಂತಾದ್ರೆ ನಿಜಕ್ಕೂ ಕಷ್ಟ, ಯಾಕಂದ್ರೆ, ಎಲ್ಲಾ ರಾಜ್ಯಗಳ ಎಷ್ಟೆಷ್ಟೋ ಪ್ರಕರಣಗಳ ವಿಚಾರಣೆ ನಡೆಸಿ ತೀರ್ಪು ಕೊಡೋ ಸುಪ್ರೀಂ ಕೋರ್ಟ್ ದರ್ಶನ್‌ದು ಜಸ್ಟ್ ಒಂದು ಪ್ರಕರಣ ಅಷ್ಟೇ! ಇಡೀ ದೇಶದ ಪ್ರಕರಣಗಳನ್ನ ನೋಡುವ ಸುಪ್ರೀಂ ಕೋರ್ಟ್, ದರ್ಶನ್ ಪ್ರಕರಣದಲ್ಯಾಕೆ ಸ್ಪೆಷಲ್ ಇಂಟರೆಸ್ಟ್ ತೆಗೆದುಕೊಳ್ಳುತ್ತೆ ಅಲ್ವಾ?

### ಸಾಧ್ಯವೇ ಇಲ್ಲ ಬಿಡ್ರಿ...

ಆ ಕಾರಣಕ್ಕೇನೆ ಕಳೆದ 24ರಂದು ಸುಪ್ರೀಂ ನ್ಯಾಯಮೂರ್ತಿ ಪರ್ದಿವಾಲಾ ಇನ್ನೊಂದು ಮಾತು ಹೇಳಿದ್ರು ನೆನಪಿದೆಯಾ..... ಆರೋಪಿ ದರ್ಶನ್ ಪರ ವಕೀಲರು ಚಾಲೆಂಜಿಂಗ್ ಸ್ಟಾರ್ ದರ್ಶನ್ ಕರ್ನಾಟಕದಲ್ಲಿ ಫೇಮಸ್ ಅಂತಾ ಹೇಳ್ತಿದ್ದ ಹಾಗೇ, ಇಲ್ಲಿ ಯಾರು ಫೇಮಸ್, ಯಾರು ಫೇಮಸ್ ಅಲ್ಲ ಅನ್ನೋದು ಬೇಡ... ಪ್ರಕರಣದಲ್ಲಿ ಏನೇನು ಸಾಕ್ಷಿಗಳಿವೆ ಅದನ್ನಷ್ಟೇ ಹೇಳಿ... ಅಂತಾ ಜಾಡಿಸಿಬಿಟ್ಟರು! ಮಾನ್ಯ ನ್ಯಾಯಮೂರ್ತಿಗಳ ಒಂದೊಂದು ಮಾತುಗಳೂ ಯಾರೆಷ್ಟೇ ಪ್ರಬಲವಾಗಿದ್ರೂ ಅಷ್ಟೇ, ತಪ್ಪು ತಪ್ಪೇ... ಎನ್ನುವಂತಹದ್ದನ್ನ ಸೂಚಿಸುತ್ತಿತ್ತು!!

ಕರ್ನಾಟಕ ರಾಜ್ಯ ಸರ್ಕಾರ ಹಾಗೂ ರೇಣುಕಾಸ್ವಾಮಿ ಕೊಲೆ ಕೇಸ್ ತನಿಖೆ ನಡೆಸಿ, ಆರೋಪಿಗಳಿಗೆ ಶಿಕ್ಷೆ ಕೊಡಿಸಲು ಹೋರಾಟ ಮಾಡ್ತಾ ಇರೋ ಪೊಲೀಸ್ ಅಧಿಕಾರಿಗಳಿಗೆ 'ಬಲ' ಬಂದಿರೋದೇ ನ್ಯಾಯ ಮೂರ್ತಿ ಪರ್ದಿವಾಲಾ ಆಡಿದ ಮಾತುಗಳಿಂದ!

ನಾಳೆ ದರ್ಶನ್ ಗ್ಯಾಂಗ್‌ಗೆ ನೀಡಿರುವ ಬೇಲ್ ಕ್ಯಾನ್ಸಲ್ ಆಯ್ತು ಅಂತಾ ಅಂದ್ರೆ, ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯ ಪ್ರಾಥಮಿಕ ಸಾಕ್ಷ್ಯಗಳನ್ನ ಪರಿಗಣಿಸಿದೆ ಅಂತಾನೇ ಅರ್ಥ. ಜೊತೆಗೆ, ಆ ರದ್ದತಿಯ ಆದೇಶ ದರ್ಶನ್ ವಿರುದ್ಧ ಸುಪ್ರೀಂ ಮೆಟ್ಟಿಲೇರಿರುವ ರಾಜ್ಯದ ಪೊಲೀಸರಿಗೂ ಮತ್ತಷ್ಟು ಬಲ ತುಂಬೋದ್ರಲ್ಲಿ ಸಂಶಯವೇ ಇಲ್ಲಾ!!

☞13

# ರಮ್ಯಾ v/s ರಕ್ಷಿತಾ ವಾರ್!

ಸುಪ್ರೀಂ ಕೋರ್ಟ್ ಆದೇಶ ಹೊರಬಿದ್ದು ಥೈಲ್ಯಾಂಡ್‌ನಲ್ಲಿ ಹಾಡು ಪಾಡು ಹೇಳಿಕೊಂಡು ನಿಂತಿದ್ದ ದರ್ಶನ್ ರಾತ್ರೋ ರಾತ್ರಿ ಬೆಂಗಳೂರಿಗೆ ಲೋಹದ ಹಕ್ಕಿಯಲ್ಲಿ ವಾಪಸ್ ಹಾರಿ ಬಂದ ಬಳಿಕ ನಟಿ ರಮ್ಯಾ ಹಾಗೂ ಡಿ ಬಾಸ್ ಫ್ಯಾನ್ಸ್ ನಡುವೆ ಸೋಷಿಯಲ್ ಮೀಡಿಯಾ ವಾರ್ ಬಲೇ ಜೋರಾಗಿ ನಡೆದಿದೆ! ಏರ್‌ಪೋರ್ಟ್‌ನಲ್ಲಿ ಕೊಲೆ ಆರೋಪಿ ದರ್ಶನ್‌ಗೆ ವಿವಿಐಪಿ ಭದ್ರತೆ ಒದಗಿಸಿದ್ದನ್ನ ರಮ್ಯಾ ಮೇಡಂ ಪ್ರಶ್ನಿಸಿದ್ದೆ ಇದಕ್ಕೆ ಕಾರಣ! ಯಾರೇ ಆಗಲಿ, ತಪ್ಪು ಮಾಡಿದ ಮೇಲೆ ಶಿಕ್ಷೆ ಆಗಲೇಬೇಕು, ತಪ್ಪು ತಪ್ಪೇ ಅನ್ನೋದು ರಮ್ಯಾ ಸಿದ್ಧಾಂತ. ಆಕೆ ಓಪನ್ ಹಾರ್ಟೆಡ್ ವಿಮೆನ್. ಇದು ಇಡೀ ಜಗತ್ತಿಗೇ ಗೊತ್ತಿರುವ ಸಂಗತಿ. ಈಗ ದರ್ಶನ್ ವಿಚಾರದಲ್ಲಿ ಕಾಮೆಂಟ್ ಮಾಡುವುದನ್ನು ಮುಂದುವರೆಸಿರೋ ರಮ್ಯಾಗೆ, ದರ್ಶನ್ ಅಭಿಮಾನಿಗಳು ಪ್ರತಿ ದಾಳಿ ನಡೆಸ್ತಾನೆ ಇದ್ದಾರೆ. ಆರಂಭದಲ್ಲಿ ಕೇವಲ ಕಾಮೆಂಟ್‌ಗಳಿಗೆ ಸೀಮಿತವಾಗಿದ್ದ ಈ ಬೆಳವಣಿಗೆ ಇದೀಗ ಇಡೀ ಸ್ಯಾಂಡಲ್‌ವುಡ್‌ನಲ್ಲಿ ಸಂಚಲನ ಸೃಷ್ಟಿಸುತ್ತಿದೆ! ಕೊಲೆಯಾದ ರೇಣುಕಾಸ್ವಾಮಿಗೆ ನ್ಯಾಯ ಸಿಗಬೇಕು ಎಂದು ಧ್ವನಿ ಎತ್ತಿದ್ದಕ್ಕೆ ಡಿಬಾಸ್ ಫ್ಯಾನ್ಸ್ ರಮ್ಯಾ ವಿರುದ್ಧ ಹಗೆ ಸಾಧಿಸುತ್ತಿದ್ದಾರೆ!!



ಕೊಲೆ ಆರೋಪಿ ಎಂಬುದನ್ನು ಮರೆತು ದಾಸನ ಪರ ನಿಂತಿರೋ ಕೆಲವರು, ರಮ್ಯಾ ಅವರ ಬಗ್ಗೆ ಕೆಟ್ಟ ಕೆಟ್ಟದಾಗಿ ಕಾಮೆಂಟ್ ಹಾಕಿ ಅಸಹ್ಯ ಮೆರೆಯುತ್ತಿದ್ದಾರೆ. ಆಕೆಯ ಖಾಸಗಿ ಸ್ನೇಹಗಳನ್ನು, ಬದುಕನ್ನು ಚಿತ್ರ ವಿಚಿತ್ರವಾಗಿ ಪ್ರಶ್ನಿಸಿ ಮರ್ಯಾದೆ ಕಳೆಯುವ ಕೆಲಸ ಮಾಡುತ್ತಿದ್ದಾರೆ. ಈ ವಿಚಾರ ಗೃಹ ಸಚಿವರಿಗೂ ಗೊತ್ತಾಗಿದ್ದು, ರಮ್ಯಾ ದೂರು ಕೊಟ್ರೆ ಕ್ರಮ ಜರುಗಿಸುತ್ತೇವೆ ಎಂದು ಹೇಳಿದ್ದಾರೆ. ಇಂಥ ಸನ್ನಿವೇಶದಲ್ಲಿಯೂ ದರ್ಶನ್ ಪಾಲಿನ 'ಕ್ರೇಜಿ ಕ್ವೀನ್' ರಕ್ಷಿತಾ ಎಂಟ್ರಿ ಕೊಟ್ಟಿರುವುದು ಇಲ್ಲಿನ ಕಾನೂನು ಮತ್ತು ಕ್ರಮದ ಬಗ್ಗೆ ಅನುಮಾನ ಪಡುವಂತಿದೆ!

ರಕ್ಷಿತಾ ಅವರು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಎರಡು ಪೋಸ್ಟ್ ಹಂಚಿಕೊಂಡಿದ್ದಾರೆ. ಮೊದಲನೆಯ ಪೋಸ್ಟ್‌ನಲ್ಲಿ, ನೀವು ಜನರ ಮಾನಸಿಕ ಆರೋಗ್ಯ ನೋಡಲು ಸಾಧ್ಯವಿಲ್ಲ, ದಯವಿಟ್ಟು ಯಾವಾಗಲೂ ದಯೆಯಿಂದ ಇರಿ ಅಂತ ಬರೆದಿದ್ದಾರೆ! ಇನ್ನೊಂದು ಪೋಸ್ಟ್‌ನಲ್ಲಿ, ನಾನು ನಿಜವಾಗಿ ಏನು ವೈರಲ್ ಆಗೋದನ್ನ ನೋಡಲು ಬಯಸುತ್ತಿದ್ದೇನೆ ಗೊತ್ತಾ? ಬೇಸಿಕ್ ಹ್ಯೂಮನ್ ಡೀಸೆನ್ಸಿ (ಮೂಲಭೂತ ಮಾನವ ಸಭ್ಯತೆ) ಎಂದು ಬರೆದುಕೊಂಡಿದ್ದಾರೆ!!




ನಟಿ ರಮ್ಯಾ ದರ್ಶನ್ ಜೊತೆ ನಟಿಸಿದವರೇ. ಒಳ್ಳೆ ಸ್ನೇಹವೂ ಇತ್ತು. ಆದರೆ ರೇಣುಕಾಸ್ವಾಮಿ ಕೊಲೆ ಕೇಸ್ ನಂತರ ರಮ್ಯಾ ಅವರು ದರ್ಶನ್ ವಿರುದ್ಧ ತಿರುಗಿಬಿದ್ದಿದ್ದಾರೆ. ಮೊದಲೇ ಹೇಳಿದಂತೆ, ತಪ್ಪು ಯಾರದ್ದೇ ಆಗಿರಲಿ ಶಿಕ್ಷೆ ಆಗಲೇಬೇಕು.... ಅನ್ನೋದು ಅವರ ವಾದ. ಆದರೆ, ರಕ್ಷಿತಾ ನಡೆಯೇ ಬೇರೆ. ಆಕೆ, ಈ ಕೇಸ್‌ನಲ್ಲಿ ದರ್ಶನ್ ಜೈಲು ಸೇರಿದಾಗಲೂ ಅವರ ಬೆಂಬಲಕ್ಕೆ ನಿಂತಿದ್ದು, ಕೇಂದ್ರ ಕಾರಾಗೃಹಕ್ಕೆ ತೆರಳಿ ದರ್ಶನ್ ರನ್ನು ಭೇಟಿಯಾಗಿ ಬಂದಿದ್ದರು! ದಚ್ಚು ಬೇಲ್ ಮೇಲೆ ಹೊರ ಬಂದ ಬಳಿಕ ಗಂಡ ಪ್ರೇಮ್ಸ್ ಹೊಸ ಸಿನಿಮಾಗೆ ಕಾಲ್ ಶೀಟ್ ಕೊಡಿಸಿದ್ದಾರೆ ಎಂಬ ಸುದ್ದಿ ಗುಟ್ಟೇನು ಅಲ್ಲಾ! ಇದೀಗ ರಮ್ಯಾ ಹಾಗೂ ಡಿ'ಬಾಸ್ ಅಭಿಮಾನಿಗಳ ಸೋಶಿಯಲ್ ಮೀಡಿಯಾ ವಾರ್ ಮಧ್ಯಪ್ರವೇಶಿಸಿ, ಮಾನವೀಯತೆ ಪಾಠ ಮಾಡಿ, 'ಮಮತೆ'ಯ ಪೋಸ್ಟ್ ಹಾಕಿರುವುದು ಲಾಭಕ್ಕಾಗಿ ಅಲ್ಲದೆ ಮತ್ತೇನು?! ಕರಿಯ... ಚಿತ್ರದ ಬಳಿಕ ಪ್ರೇಮ್ಸ್ ಅನ್ನು ಹತ್ತಿರ ಬಿಟ್ಟುಕೊಂಡವರಲ್ಲ ದರ್ಶನ್. ತೀರಾ ಇತ್ತೀಚಿಗೆ ಅವನೇನು ದೊಡ್ಡ ಪುಡಂಗಾ....ಅದಿದ್ದನ್ನು ಜನ ಇನ್ನೂ ಮರೆತಿಲ್ಲ, ಈಗ ಒಂದು ಕಾಲ್ ಶೀಟ್ ಕೊಡದೆ ಹೋಗಿದ್ರೆ, ದರ್ಶನ್ ಕಡೆ ಬೀಸುತ್ತಿತ್ತಾ ಸುಂಟರಗಾಳಿ....?

# ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಆದರ್ಶದ ಹಾದಿಯಲ್ಲಿ ಇನ್ನಾದರೂ...





ಗಮನೀಯ ಸಂಗತಿ ಏನೆಂದರೆ, ರಕ್ಷಿತಾ-ರಮ್ಯಾ ಇಬ್ಬರೂ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್‌ರವರ ಕೊಡುಗೆಯೇ. ಆದರೆ, ಇವರಿಬ್ಬರೂ ಪಾರ್ವತಮ್ಮನವರಿಂದ ಪಾಠ ಕಲಿಯಲಿಲ್ಲ. ರಮ್ಯಾ ಸ್ವಲ್ಪ ವಾಸಿ. ಈ ಹಿಂದೆ ದರ್ಶನ್-ನಿಖಿತಾ ಲವ್ವಿ-ಡವ್ವಿ ಜಗಜ್ಜಾಹೀರಾಗಿ, ಪತ್ನಿ ವಿಜಯಲಕ್ಷ್ಮಿ ಗಂಡ ದರ್ಶನ್‌ನ ಜೈಲಿಗೆ ಕಳುಹಿಸಿದ್ದಳಲ್ಲ, ಆ ಸಂದರ್ಭದಲ್ಲಿ ಇಡೀ ಕನ್ನಡ ಚಿತ್ರರಂಗ ನಿಖಿತಾಳನ್ನು ಬ್ಯಾನ್ ಮಾಡಲು ಹವಣಿಸಿತ್ತು. ಆದರೆ, ಇದಕ್ಕೆ ಪಾರ್ವತಮ್ಮನವರು ಬಿಡಲಿಲ್ಲ. ಒಂದು ಹೆಣ್ಣು ಮಗಳ ಮೇಲೆ ದೌರ್ಜನ್ಯ ನಡೆಯಬಾರದು ಎಂದು ನಿಖಿತಾಳ ಪರ ನಿಂತರು. ಅದೇ ಇವತ್ತಿನ ಕನ್ನಡ ಚಿತ್ರರಂಗದ ಪರಿಸ್ಥಿತಿ ಏನಾಗಿದೆ ನೋಡಿ. ಒಬ್ಬರನ್ನು ಕಂಡರೆ ಒಬ್ಬರಿಗೆ ಆಗಲ್ಲ. ಯಾರ ಮಾತಿಗೂ ಇಲ್ಲಿ ಬೆಲೆ ಇಲ್ಲ. ಪಾರ್ವತಮ್ಮ ರಾಜ್‌ಕುಮಾರ್‌ರವರ ಕಾಲದಲ್ಲಿ ಅವರ ಮಾತಿಗೆ ಒಂದು ತೂಕವಿತ್ತು. ಯಾರೂ ದೂಸ್ರಾ ಮಾತಾಡುತ್ತಿರಲಿಲ್ಲ. ಅದೇ ಬೆಲೆ ಈಗ ರಾಜ್ ಕುಟುಂಬಕ್ಕೆ ಇದೆಯೇ? ಶಿವಣ್ಣ-ಗೀತಕ್ಕ ಉಳಿಸಿಕೊಂಡಿದ್ದಾರ? ಸದ್ಯ, ರಮ್ಯಾಗೆ ಸೋಷಿಯಲ್ ಮೀಡಿಯಾದಲ್ಲಿ ಅವಮಾನವಾಗಿರುವ ಈ ಸಂದರ್ಭದಲ್ಲಿ ಗಂಡ-ಹೆಂಡತಿ ಒಳ್ಳೆಯ ಪ್ರತಿಕ್ರಿಯೆಯನ್ನು ನೀಡಿ ರಾಜ್‌ಕುಮಾರ್ ಮನೆತನದ ಮರ್ಯಾದೆ ಉಳಿಸುವ ಕೆಲಸ ಮಾಡಿದ್ದಾರೆ.



"ರಮ್ಯಾ ಅವರ ವಿರುದ್ಧ ಬಳಸಿರುವ ಪದಗಳು ಖಂಡನೀಯ. ಯಾವ ಮಹಿಳೆಯ ವಿರುದ್ಧವೂ ಆ ರೀತಿ ಮಾತನಾಡುವುದು ಸರಿಯಲ್ಲ; ಅದನ್ನು ನಾವು ಸಹಿಸಬಾರದು. ಮಹಿಳೆಯರನ್ನು ತಾಯಿಯಾಗಿ, ಅಕ್ಕನಾಗಿ, ಮಗಳಾಗಿ, ಮಡದಿಯಾಗಿ ಮತ್ತು ಮೊಟ್ಟ ಮೊದಲು ಒಬ್ಬ ವ್ಯಕ್ತಿಯಾಗಿ ಗೌರವಿಸುವುದು ತುಂಬಾ ಮುಖ್ಯ. ಸೋಷಿಯಲ್ ಮೀಡಿಯಾ ತುಂಬಾ ಬಲಿಷ್ಠವಾದ ಅಸ್ತ್ರ, ಅದನ್ನು ತಮ್ಮ ಏಳಿಗೆಗಾಗಿ ಬಳಸಬೇಕೇ ಹೊರತು, ದ್ವೇಷ-ಅಸೂಯೆಯನ್ನು ಬಿತ್ತಲು ಬಳಸಬಾರದು. ನಿಮ್ಮ ನಿಲುವು ಸರಿಯಿದೆ, ರಮ್ಯಾ ನಿಮ್ಮ ಜೊತೆಗೆ ನಾವು ಸದಾ ನಿಲ್ಲುತ್ತೇವೆ." ಇದು ರಮ್ಯಾ ಪರ ಶಿವಣ್ಣ ದಂಪತಿ ನಿಲುವು.

# ಬೊಮ್ಮಸಂದ್ರದಲ್ಲಿ ಆಟೋ ಚಾಲಕ ದರ್ಶನ್ ಕಗ್ಗೊಲೆ!

ಕರ್ನಾಟಕ ರಾಜ್ಯದ ಪ್ರತಿಷ್ಠಿತ ಕೈಗಾರಿಕಾ ಪ್ರದೇಶಗಳಲ್ಲಿ 'ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ'ವೂ ಒಂದು. ಅದರ ಹತ್ತಿರದಲ್ಲೇ ಜಿಗಣಿ, ಅತ್ತಿಬೆಲೆ ಕೈಗಾರಿಕಾ ಪ್ರದೇಶಗಳೂ ಇವೆ. ಅವೂ ಕೂಡ ರಾಜ್ಯಕ್ಕೆ-ದೇಶಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಿವೆ. ಮುಖ್ಯವಾಗಿ, ಅಲ್ಲಿ ಲಕ್ಷಾಂತರ ಮಂದಿಗೆ ಉದ್ಯೋಗ-ಅನ್ನ ಸಿಗುತ್ತಾ ಇದೆ. ಇಂತಹ ಇಂಡಸ್ಟ್ರಿಯಲ್ ಏರಿಯಾಗಳಲ್ಲಿ ಹಫ್ತಾ ವಸೂಲಿ, ಮೋಸ-ವಂಚನೆ ನಡೆಯುತ್ತಿದ್ದ ಕಾಲವಿತ್ತು. ಅದೀಗ 'ಬಂದ್' ಆಗಿದೆ. ಕಾರಣ, ನಮ್ಮ ಕರ್ನಾಟಕ ಪೊಲೀಸ್ ಲಾಠಿ! ಎಲ್ಲಿ ಪೊಲೀಸ್ ವೈಫಲ್ಯ ವಿಜೃಂಭಿಸುತ್ತೋ ಅಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತದೆ. ಆದರೆ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಭ್ರಷ್ಟ ಪೊಲೀಸ್





ಭೀಕರವಾಗಿ ಕೊಲೆಯಾದ ದರ್ಶನ್

ಇಲ್ಲವೇ ಇಲ್ಲ! ಅಲ್ಲಿ ಸೋಮಶೇಖರ್ ಎಂಬ ಖಡಕ್ ಪೊಲೀಸ್ ಇನ್‌ಸ್ಪೆಕ್ಟರ್ ಡ್ಯೂಟಿಯಲ್ಲಿದ್ದಾರೆ! ಸತೀಶ್ ಎಂಬ ದಕ್ಷ ಎಸಿಪಿ ಇದ್ದಾರೆ. ಇನ್ನೊಂದು ಸಂತಸಕರ ಮಾಹಿತಿ ಏನೆಂದರೆ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ ವ್ಯಾಪ್ತಿ ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತಿದ್ದು, ಆ ಠಾಣೆಯೀಗ ಎಲೆಕ್ಟ್ರಾನಿಕ್ ಸಿಟಿ ಉಪವಿಭಾಗಕ್ಕೆ ಸೇರಿದ್ದು ನೂತನ ಡಿಸಿಪಿ ಎಂ. ನಾರಾಯಣ ಸರ್ ರೌಂಡ್ಸ್ ಹೊಡೆಯುತ್ತಾರೆ. ಹೀಗೆ ದಕ್ಷ ಪೊಲೀಸ್ ಅಧಿಕಾರಿಗಳ ದಂಡೇ ಆ ಏರಿಯಾದಲ್ಲಿ ಕರ್ತವ್ಯ ನಿಭಾಯಿಸುತ್ತಿರುವ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿ

**ಅವರಿಬ್ಬರೂ ಒಂದೇ ನಿಲ್ದಾಣದಲ್ಲಿ ಆಟೋ ಹಾಕೊಂಡು ನಿಲ್ಲುತ್ತಿದ್ದ ಆಟೋ ಚಾಲಕರು. ಬೆಳಗಾಗೆದ್ದು ಮುಖ ಮುಖ ನೋಡ್ತಾ ಹೋಗೋ ಬಾರೋ ಮಚ್ಚಾ ಮಗಾ... ಅನ್ನುತ್ತಿದ್ದ ಪರಿಚಿತರು. ಆದರೆ ಆವತ್ತು ಅದೇನು ಗ್ರಹಚಾರ ಕಟ್ಟಿತ್ತೋ ಏನೋ. ಮಧ್ಯಾಹ್ನದ ಗಡದ್ದಾಗಿ ಎಣ್ಣೆ ಏರಿಸಿದ್ದ ಒಬ್ಬಾತ, ರೋಡ್ ಸೈಡ್‌ನಲ್ಲಿ ಆಟೋ ನಿಲ್ಲಿಸಿಕೊಂಡು ನಿಂತಿದ್ದ ಇನ್ನೊಬ್ಬನ ಬಳಿ ಬಂದು, ಹೆಗಲಿಗೋ ಬೆನ್ನಿಗೋ ಗುದ್ದು ಕೊಟ್ಟು- ''ಏನ್ ಮಗಾ...'' ಎಂದಿದ್ದಾನೆ! ಪ್ರೀತಿಯಿಂದಲೋ ಅಥವಾ ಹೊಟ್ಟೆಕಿಚ್ಚಿನಿಂದಲೋ ಗುದ್ದಿದ ಆ ಗುದ್ದು ಅವನಿಗೆ ನೋವಾಗಿ ''ಯಾಕೋ ಇಷ್ಟು ಜೋರಾಗಿ ಹೊಡೆದೆ? ನೋವಾಗೋದಿಲ್ವಾ'' ಎಂದು ಗದರಿದ್ದಾನೆ! ಅದಕ್ಕೆ ಆ ಕುಡುಕ ಸ್ನೇಹಿತ ಸುಮ್ಮನಾಗದೆ ಮತ್ತೆ ಮತ್ತೆ ಕೆಣಕಿ, ''ಏನಾಗೋಯ್ತು ಈವಾಗ...?! ಯಾಕೋ ಹರ್ಕೋತೀಯಾ?'' ಅಂತೇನೋ ಹಂಗಿಸಿದ್ದಾನೆ. ಇಷ್ಟೇ ಕಣ್ರೀ ಜಗಳ! ಇಷ್ಟಕ್ಕೇ ನಖಶಿಖಾಂತ ಉರಿದುಬಿದ್ದಿರೋ ಒಬ್ಬಾತ, ತಕ್ಷಣ ಆಟೋ ಸೀಟಿನ ಕೆಳಗೆ ಇಟ್ಟಿದ್ದ ಮಚ್ಚು ಎತ್ತಿಕೊಂಡು ಬಂದು, ಕತ್ತರಿಸಿಬಿಡ್ತೇನೆ ಹುಷಾರ್... ಎಂದನಂತೆ! ಮುಂದೇನಾಯ್ತು ಗೊತ್ತಾ??!**

ಕೆಲವೇ ದಿನಗಳ ಹಿಂದೆ ಅಪ್ಪಿತಪ್ಪಿ ಒಂದು ಕೊಲೆ ನಡೆದು ಹೋಗಿದೆ! ಆಟೋ ಚಾಲಕನೊಬ್ಬನ ಹೆಣ ಬಿದ್ದು ಹೋಗಿದೆ!

### ತಲಕಾಡು ಮೂಲದ ದರ್ಶನ್!

ನಿರ್ಗಮಿತ ಡಿಸಿಪಿ ಸಾರಾ ಫಾತಿಮಾ ಮೇಡಂ ಈ ಭಾಗದಲ್ಲಿ ತನಿಖೆ ನಡೆಸಿದ ಕೊನೆ ಕೇಸ್ ಇದು! ಅಂದಹಾಗೆ; ಕೊಲೆಯಾದ ನತದೃಷ್ಟನ ಹೆಸರು ದರ್ಶನ್. 30ರ ಆಸುಪಾಸಿನ ಯುವಕ. ಇವನಿಗೆ ಮದುವೆ ಮಾಡಲೆಂದು ಪೋಷಕರು ವಧು ಅರಸುತ್ತಿದ್ದರಂತೆ! ದುರ್ವಿಧಿ, ಹಸೆಮಣೆ ಏರಬೇಕಾಗಿದ್ದ ಹುಡುಗ ಚಿತೆ ಏರಿ ಬೆಂದು ಬೂದಿಯಾಗಿ ಗಾಳಿಯಲ್ಲಿ ಲೀನವಾಗಿದ್ದಾನೆ!

ದರ್ಶನ್ ಮೂಲತಃ ಟಿ. ನರಸೀಪುರ ತಾಲ್ಲೂಕಿನ ತಲಕಾಡು ಸಮೀಪದ ಬಣವೆ ಗ್ರಾಮದವನು. ಸುಮಾರು ಆರು ವರ್ಷಗಳಿಂದ ಈ ಭಾಗದಲ್ಲಿ ಆಟೋ ಓಡಿಸಿಕೊಂಡಿದ್ದ ದರ್ಶನ್‌ಗೆ ಒಳ್ಳೆ ಫ್ರೆಂಡ್ಸ್ ಸಿಕ್ಕಿದ್ದರು. ಅವರೊಂದಿಗೆ ದುಡಿಮೆ ಮಾಡಿಕೊಂಡು, ಸಂಪಾದನೆಯನ್ನು ಹಳ್ಳಿಯಲ್ಲಿದ್ದ ತಂದೆತಾಯಿಗೆ ಕಳುಹಿಸುತ್ತಾ ಆರಾಮವಾಗಿದ್ದ. ಈ ನಡುವೆ ಅವನಿಗೆ ಮದುವೆ ಮಾಡಬೇಕೆಂದು ಅವನ ಹೆತ್ತವರು ಹೆಣ್ಣು ನೋಡುತ್ತಿದ್ದರು. ಆದರೆ ವಿಧಿಯ ಆಟವೇ ಬೇರೆ ಇತ್ತು!

### ಜುಲೈ 15 ಕರಾಳ ದಿನ!

ಕಳೆದ ಜುಲೈ 15, 2025ರಂದು ಬೆಳಿಗ್ಗೆ ದರ್ಶನ್ ಎಂದಿನಂತೆ ಆಟೋ ಎತ್ತಿಕೊಂಡು, ತನ್ನ ಬಾವ ಸುರೇಶ್‌ರನ್ನು ಅವರ ಕಂಪನಿಗೆ ಡ್ರಾಪ್ ಮಾಡಿ ತಾನು ತನ್ನ ಪಾಡಿಗೆ ರೋಡಿಗಿಳಿದಿದ್ದ. ಸಂಜೆ ಸಮಯ ಮತ್ತೆ ತನ್ನ ಬಾವನನ್ನು ಮನೆಗೆ ಕರೆದೊಯ್ದು ಬಿಟ್ಟು ಮತ್ತೆ ರೋಡಿಗೆ ವಾಪಸ್ ಆಗಿದ್ದವನು, ರಾತ್ರಿ ಎಷ್ಟೊತ್ತಾದರೂ ಮನೆಗೆ ಹಿಂತಿರುಗಿರಲಿಲ್ಲ. ಬಾವ ಸುರೇಶ್ ಅವನ ಮೊಬೈಲ್‌ಗೆ ಅದೆಷ್ಟು ಕರೆ ಮಾಡಿದ್ರೂ ಆತ ಸ್ವೀಕರಿಸಿರಲಿಲ್ಲ. ಮೊಬೈಲ್ ಮಾತ್ರ ರಿಂಗ್ ಆಗ್ತಾನೇ ಇತ್ತು. ನಾನ್ ರಿಸೀವ್.

ಹೀಗಾಗಿ; ಭಯಭೀತರಾದ ಅಕ್ಕ-ಬಾವ ಜಿಗಣಿ ಆಟೋ ಸ್ಟ್ಯಾಂಡ್‌ನಲ್ಲಿದ್ದ ನವೀನ್ ಕುಮಾರ್ ಎಂಬುವರಿಗೆ ಕರೆ ಮಾಡಿ, ದರ್ಶನ್ ಯಾಕೋ ಫೋನ್ ಎತ್ತುತ್ತಾ ಇಲ್ಲ ಸರ್... ಎಂದು ವಿಚಾರಿಸಿದ್ದರು. ಆಗ ನವೀನ್ ತಿಳಿಸಿದ್ದು ಮರಣ ವಾರ್ತೆ! ದರ್ಶನ್‌ಗೆ ಬೊಮ್ಮಸಂದ್ರದಲ್ಲಿ ಏನೋ ಅಪಾಯವಾದಂತಿದೆ, ಹೋಗಿ ನೋಡೋಣ ಬನ್ನಿ... ಎಂದರಂತೆ!

ನಂತರ ಎಲ್ಲರೂ ಅಲ್ಲಿಗೆ ತೆರಳಿ ಹೊಸೂರು ಮುಖ್ಯ ರಸ್ತೆಯ ಟಾಟಾ ಶೋರೂಂ ಮುಂಭಾಗದಲ್ಲಿ ದರ್ಶನ್ ತನ್ನ ಆಟೋರಿಕ್ಷಾ ಪಕ್ಕದಲ್ಲೇ ಭೀಕರವಾಗಿ ಕೊಲೆಯಾಗಿ ಬಿದ್ದಿದ್ದ ದೃಶ್ಯ ಕಾಣಿಸಿತ್ತು! ಅಷ್ಟು ಒಳ್ಳೆ ಹುಡುಗ, ಯಾಕಪ್ಪಾ ಇಷ್ಟು ಕ್ರೂರವಾಗಿ ಕೊಲೆಯಾಗಿದ್ದಾನೆ? ಯಾರು ಏಕಾಗಿ ಕೊಂದ್ರಪ್ಪಾ? ಎಂದುಕೊಂಡು ರೋಧಿಸಿರುವ ಅಕ್ಕ-ಬಾವ ಮತ್ತು ಸ್ನೇಹಿತರು, ಪೊಲೀಸರಿಗೆ ಕೈ ಮುಗಿದು ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಿ ತಮಗೆ ನ್ಯಾಯ ಕೊಡಿಸಿ



ಡಿಸಿಪಿ ಸಾರಾ ಫಾತಿಮಾ, ಎಸಿಪಿ ಸತೀಶ್ ಹಾಗೂ ಇನ್‌ಸ್ಪೆಕ್ಟರ್ ಜಿ. ಸೋಮಶೇಖರ್

ಸ್ವಾಮಿ ಎಂದು ಅಂಗಲಾಚಿದ್ದರು. ಡಿಸಿಪಿ ಸಾರಾ ಫಾತಿಮಾ, ಎಲೆಕ್ಟ್ರಾನಿಕ್ ಸಿಟಿ ಉಪವಿಭಾಗದ ಎಸಿಪಿ ಸತೀಶ್, ಹೆಬ್ಬಗೋಡಿ ಪೊಲೀಸ್ ಇನ್‌ಸ್ಪೆಕ್ಟರ್ ಸೋಮಶೇಖರ್ ಮತ್ತು ಸಿಬ್ಬಂದಿಗಳು ಘಟನಾ ಸ್ಥಳದಲ್ಲಿ ಮಹಜರ್ ನಡೆಯಿಸಿ, ಶ್ವಾನದಳ ಹಾಗೂ ಬೆರಳಚ್ಚು ತಜ್ಞರನ್ನು ಕರೆಯಿಸಿ ಪರಿಶೀಲನೆ ನಡೆಸಿದ್ದರು. ಅಂದು ರಾತ್ರಿ 10-45ರ ಸುಮಾರಿನಲ್ಲಿ ಈ ಕೊಲೆ ನಡೆದಿದ್ದು, ಬೆಳಗಾಗುವುದರೊಳಗೆ ಕೊಲೆಗೈದು ಪರಾರಿಯಾಗಿದ್ದ ಆರೋಪಿಗಳಿಬ್ಬರನ್ನು ಬಂಧಿಸಲಾಯ್ತು!



ಆರೋಪಿ ಜಯಸೂರ್ಯ ಅಲಿಯಾಸ್ ಕೆಂಚ



ಆರೋಪಿ ಕರಿಯ

### ಎಣ್ಣೆ ಏಟಿನಲ್ಲಿ ಕುತ್ತಿಗೆ ಕತ್ತರಿಸಿದ!

ಮಂಡ್ಯ ಮೂಲದ ಜಯಸೂರ್ಯ ಮತ್ತು ಕರಿಯ ಎಂಬಿಬ್ಬರೇ ಬಂಧಿತ ಆರೋಪಿಗಳು. ಈ ಪಾಪಿಗಳು ಮೃತ ದರ್ಶನ್‌ನ ಸಹಪಾಟಿಗಳೇ. ಜಿಗಣಿಯ ಎಪಿಸಿ ಸರ್ಕಲ್ ಫ್ರೆಂಡ್ಸ್. ಒಟ್ಟೊಟ್ಟಿಗೆ ಆಟೋ ಓಡಿಸಿಕೊಂಡು ಮಗಾ... ಮಚ್ಚಾ... ಎಂದು ಹರಟುತ್ತಿದ್ದವರೇ. ಅಂದು ರಾತ್ರಿ 9 ಗಂಟೆ ಸುಮಾರಿಗೆ ಮನೆಯಲ್ಲಿ ಊಟ ಮಾಡಿಕೊಂಡು ಆಟೋ ಎತ್ತಿಕೊಂಡು ಹೊರಗಡೆ ಬಂದ ದರ್ಶನ್, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಹೊಸೂರು ಮೈನ್ ರೋಡ್‌ನಲ್ಲಿರುವ ಟಾಟಾ ಶೋರೂಂ ಮುಂಭಾಗ ಆಟೋ ನಿಲ್ಲಿಸಿಕೊಂಡು ನಿಂತಿದ್ದಾಗ, ಅಲ್ಲಿಗೆ ಜಯಸೂರ್ಯನ ಆಗಮನವಾಗಿತ್ತು. ಆತ ಅದಾಗಲೇ ಕಂಠಮಟ್ಟ ಕುಡಿದು ಜೋಶ್‌ನಲ್ಲಿ ತೇಲಾಡ್ತಾ ಇದ್ದನಂತೆ. ದರ್ಶನ್‌ನ ಬಳಿ ಬಂದವನು ಅದೇ ಜೋಶ್‌ನಲ್ಲಿ ಅವನ ಹೆಗಲಿಗೇ ಬೆನ್ನಿಗೋ ಒಂದು ಗುದ್ದು ಹಾಕಿ, ಏನ್ ಮಚ್ಚಾ... ಅಂದನಂತೆ. ಆ ಹೊಡೆತ ನೊಂದುಬಿಡ್ತೊ ಏನೋ, ದರ್ಶನ್ ಕೋಪಗೊಂಡು ''ಏಯ್, ಯಾಕೋ ಇಷ್ಟು ಜೋರಾಗಿ ಹೊಡೆದೆ?'' ಎಂದು ರೇಗಿದ್ದಾನೆ. ಆಗಲೂ ಸುಮ್ಮನಿರದ ಕುಡುಕ ಜಯಸೂರ್ಯ ''ಯಾಕೋ ಉರ್ಕೊತೀಯಾ... ಏನಾಯ್ತು ಈವಾಗ'' ಅಂತಂದು ಮತ್ತೊಂದು ಗುದ್ದು ಕೊಟ್ಟನಂತೆ! ನಖಶಿಖಾಂತ ಉರಿದುಬಿದ್ದ ದರ್ಶನ್, ತನ್ನ ಆಟೋ ಒಳಗೆ, ಸೀಟ್ ಕೆಳಗೆ ಇಟ್ಟಿದ್ದ ಮಚ್ಚನ್ನು ಎತ್ತಿಕೊಂಡು ಬಂದು ''ಕತ್ತರಿಸಿಬಿಡ್ತೀನಿ'' ಅನ್ನುತ್ತಾ ಮತ್ತಗೊಂದು ಏಟು ಹಾಕಿದನಂತೆ!

☞ 14



ತನ್ನ ಆಟೋ ಪಕ್ಕದಲ್ಲೇ ಭೀಕರವಾಗಿ ಕೊಲೆಯಾಗಿ ಬಿದ್ದಿರುವ ದರ್ಶನ್




ಘಟನಾ ಸ್ಥಳದಲ್ಲಿ ಪೊಲೀಸ್ ಮಹಜರ್



ಮೃತನ ಬಾವ ಸುರೇಶ್ ಹಾಗೂ ಅಕ್ಕ ವೀಣಾ

# ಭೀಮಾತೀರದಲ್ಲಿ ಮತ್ತೆ ನೆತ್ತರು! ಬಾಗಪ್ಪನ ಹತ್ಯೆಗೆ ರಿವೇಂಜ್ ಕಿಲ್ಲಿಂಗ್?!



**ಇವನು ಒಂದು ಕಾಲದಲ್ಲಿ ಭೀಮಾತೀರದ ಹಂತಕ ಬಾಗಪ್ಪನ ಭಂಟನಾಗಿದ್ದವ. ಆದ್ರೆ, ಬಾಗಪ್ಪ ಹತನಾದ ಐದೇ ತಿಂಗಳಲ್ಲಿ ಇವನ ಹೆಣ ಬಿದ್ದಿದೆ. ಈ ಮೂಲಕ ಬಾಗಪ್ಪನ ಹತ್ಯಯ ಬಳಿಕ ತಣ್ಣಗಿದ್ದ ಭೀಮಾತೀರ ಮತ್ತೆ ನೆತ್ತರಮಯವಾಗಿದೆ. 10 ವರ್ಷಗಳಿಂದ ಪಾತಕಲೋಕ ಬಿಟ್ಟಿದ್ದೇನೆ ಎಂದವನನ್ನ ಜತೆಗಿದ್ದ ಪಾತಕಿಗಳೇ ಗುಂಡು ಹಾರಿಸಿ, ತಲವಾರ್‌ನಿಂದ ಕತ್ತರಿಸಿ ಕೊಂದು ಹಾಕಿದ್ದಾರೆ! ಇಂಟರೆಸ್ಟಿಂಗ್ ಕಹಾನಿ ಅಂದ್ರೆ, 'ಇಂಡಿ'ಯ ಖಾಕಿ ಪಡೆಯು ತಮ್ಮ ಗನ್‌ಗೆ ಕೆಲಸ ಕೊಟ್ಟಿದ್ದು, ಇಬ್ಬರು ಹಂತಕರ ಕಾಲಿಗೆ ಗುಂಡು ಬಿದ್ದಿವೆ!!**


ರೌಡಿ ಸುಶೀಲ್ ಕಾಳೆ

ಭೀಮಾತೀರದ್ದು ಮುಗಿಯದ ಅಧ್ಯಾಯ. ಕಳೆದ ಫೆಬ್ರವರಿಯಲ್ಲಿ ಭೀಮಾತೀರದ ಏಕಮೇವ ಡಾನ್ ಅನ್ನೋ ಹಾಗೆ ಇದ್ದ ಹಂತಕ ಬಾಗಪ್ಪ ಹರಿಜನ್ ಹೆಣವಾದ ಮೇಲೆ ಭೀಮಾತೀರದ ರಕ್ತಸಿಕ್ತ ಅಧ್ಯಾಯ ಮುಕ್ತಾಯ ವಾಯ್ತು ಅಂತಲೇ ಬಹುತೇಕರು ಅಂದು ಕೊಂಡಿದ್ದರು. ಹಾಗೇ ನೋಡೋದಾದ್ರೆ, ಬಾಗಪ್ಪ ಸತ್ತ ದಿನದಿಂದ ಇಲ್ಲಿವರೆಗೆ ಭೀಮಾ ತೀರ ಪಾತಕ ಲೋಕ ತಣ್ಣಗಿತ್ತು. ಆದ್ರೆ ಈಗ ಭೀಮಾತೀರದ ವೈಷ ಮ್ಯಕ್ಕೆ ಮತ್ತೊಂದು ಹೆಣ ಬಿದ್ದಿದ್ದು, ಇಲ್ಲಿನ ಪಾತಕಲೋಕ ಮತ್ತೆ ನೆತ್ತರಮಯ ವಾಗಿದೆ!


ಎಸ್ಪಿ ಲಕ್ಷ್ಮಣ್ ನಿಂಬರಗಿ

ಹೀಗೆ ಪಿಸ್ತೂಲಿನಿಂದ ಪಾಯಿಂಟ್ ಬ್ಲಾಕ್‌ನಲ್ಲಿ ಗುಂಡು ತಿಂದು, ತಲವಾರ್‌ಗಳಿಂದ ಏಟುಗಳನ್ನು ತಿಂದು ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡಿ ಸತ್ತವ ಬೇರಾರು ಅಲ್ಲ, ಒಂದು ಕಾಲದಲ್ಲಿ ಭೀಮಾತೀರದ ಡಾನ್ ಬಾಗಪ್ಪ ಹರಿಜನ್ ಹತ್ತಿರದಲ್ಲಿಯೇ ಓಡಾಡಿಕೊಂಡಿದ್ದವ. ಬಳಿಕ ಅದೊಂದು ಬೇಡದ ಕಾರಣಕ್ಕೆ ಬಾಗಪ್ಪನಿಂದ ದೂರವಾಗಿದ್ದ. ಆದ್ರೆ ಬಾಗಪ್ಪ ಹೋದ ಬೆನ್ನಲ್ಲಿಯೇ ಆತನ ಹಳೆಯ ಶಿಷ್ಯ ರೌಡಿ ಶೀಟರ್ ಸುಶೀಲ್ ಕಾಳೆ ಬೀದಿ ಹೆಣವಾಗಿದ್ದಾನೆ..

## ಸುಶೀಲ್ ಕಾಳೆ!

ರೌಡಿ ಶೀಟರ್ ಸುಶೀಲ್ ಕಾಳೆ ತನ್ನ ಫೈನಾನ್ಸ್ ಹಣವನ್ನ ಕಟ್ಟೋದಕ್ಕೆ ವಿಜಯಪುರ ನಗರದ ಬಿಎಲ್‌ಡಿ ರಸ್ತೆಯಲ್ಲಿರೋ ಎಸ್.ಎಸ್. ಕಾಂಪ್ಲೆಕ್ಸ್‌ನಲ್ಲಿರುವ ಅಮರವರ್ಷಿಣೀ ವಿವಿಧ ಉದ್ದೇಶಗಳ ಸಹಕಾರಿ ಬ್ಯಾಂಕಿಗೆ ಬಂದಿದ್ದಾನೆ. ಅದೇನೋ ಹಣ ಕಟ್ಟಬೇಕಿತ್ತಂತೆ. ಹಣವನ್ನ ಕಟ್ಟಿ ಅಲ್ಲಿಂದ ಹೊರಟಿದ್ದಾನೆ. ಇನ್ನೇನು ಎಸ್. ಎಸ್. ಕಾಂಪ್ಲೆಕ್ಸ್‌ನಿಂದ ಕೆಳಗೆ ಇಳಿದು ಬಂದು ಬಿಎಲ್‌ಡಿ ರಸ್ತೆ ಸೇರಬೇಕು. ಆಗಲೇ ನೋಡಿ ಯಡವಟ್ಟಾಗಿದ್ದು ಸುಶೀಲ್ ಕಾಳೆಗೆ ಯಾರ ನಿರೀಕ್ಷೆ ಇರಲಿಲ್ಲವೋ, ಆ ಐದರಿಂದ ಆರು ಜನ ಆಗಂತುಕರು ಕೈಯಲ್ಲಿ ಪಿಸ್ತೂಲು, ತಲವಾರ್‌ಗಳನ್ನ ಹಿಡಿದು ನಿಂತಿದ್ರು. ಅವರನ್ನ ನೋಡಿದ ತಕ್ಷಣವೇ ಸುಶೀಲ್ ಕಾಳೆಗೆ ಕೆಲಸ ಕೆಟ್ಟಿದೆ ಅನ್ನೋದು ಅರಿವಾಗಿದೆ. ತಪ್ಪಿಸಿಕೊಳ್ಳೊದಕ್ಕೆ ಅಂತಾ ಅದೇ ಎಸ್.ಎಸ್. ಕಾಂಪ್ಲೆಕ್ಸ್‌ನ ಒಳಗೆ ಓಡಿದ್ದಾನೆ. ಮತ್ತದೆ ಬ್ಯಾಂಕ್ ನಲ್ಲಿ ಅಡಗಿ ಕೂಡಬೇಕು ಅಂತಾ ಓಡಿದ್ದಾನೆ. ಆದರೆ ದುರಾದೃಷ್ಟಕ್ಕೆ ಮೆಟ್ಟಿಲು ಏರುವಾಗಲೇ ಸುಶೀಲ್ ಬೆನ್ನಿಗೆ ಪಾಯಿಂಟ್ ಬ್ಲಾಕ್‌ನಲ್ಲಿ ಗುಂಡು ಬಿದ್ದಿದೆ. ಆಗಲೇ ನಿತ್ರಾಣನಾದ ಸುಶೀಲ್ ಮೆಟ್ಟಿಲು ಏರಿ ಬ್ಯಾಂಕ್ ಒಳಗೆ ಹೋಗುವುದರೊಳಗಾಗಿ ಮನಬಂದಂತೆ ಮಚ್ಚುಗಳಿಂದ ಕೊಚ್ಚಿದ್ದಾರೆ ಹಂತಕರು!

## ಸಿಎಂ ಬರೋ ದಿನವೇ...!

ಅದೇನೋ ಗೊತ್ತಿಲ್ಲ, ಹಂತಕರು ಸುಶೀಲ್ ಕಾಳೆ ಹತ್ಯೆಗೆ ಜುಲೈ 14ನೇ ತಾರೀಕಿನ ಮೊದಲೇ ಆಯ್ಕೆ ಮಾಡಿ ಕೊಂಡಿದ್ರಾ ಅನ್ನೋ ಅನುಮಾನಗಳಿವೆ. ಯಾಕಂದ್ರೆ ಅಂದು ಸಿಎಂ ಸಿದ್ದರಾಮಯ್ಯ ಇಂಡಿ ಪಟ್ಟಣಕ್ಕೆ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆಗೆ ಬರೋರಿದ್ರು. ಭದ್ರತಾ ದೃಷ್ಟಿಯಿಂದ ಬಹುತೇಕ ಪೊಲೀಸ್ ಪಡೆ ಇಂಡಿಯಲ್ಲೆ ಬೀಡು ಬಿಟ್ಟಿತ್ತು. ಹತ್ತಾರು ಸಚಿವರು, ಡಿಸಿಎಂ, ಸಿಎಂ ಒಂದೆ ದಿನ ಭೇಟಿ ಕೊಡ್ತಿದ್ದರಿಂದ ಖಾಕಿ ಪಡೆಯ ದೃಷ್ಟಿ ಎಲ್ಲವೂ ಇಂಡಿ ಪಟ್ಟಣದ ಮೇಲಿತ್ತು. ಹಾಗೇ ನೋಡೋದಾದ್ರೆ ವಿಜಯಪುರ ನಗರದಲ್ಲಿನ ಪೊಲೀಸರು ಸಿಎಂ ಪ್ರೋಗ್ರಾಂ ಕರ್ತವ್ಯದ ಮೇಲೆ ತೆರಳಿದ್ದರು. ಇದನ್ನೆ ಬಂಡವಾಳ ಮಾಡಿಕೊಂಡ ಹಂತಕರು ಸುಶೀಲ್ ಹತ್ಯೆಗೆ ಸ್ಕೆಚ್ ಹಾಕಿದ್ರು. ಅತ್ತ ಸಿಎಂ ಇಂಡಿ ಪಟ್ಟಣಕ್ಕೆ ಆಗಮಿಸಿದ್ರೆ,


ಸುಶೀಲ್ ಶವ



ಅಲ್ಲಿಂದ 50 ಕೀ.ಮೀ ದೂರದ ವಿಜಯಪುರ ನಗರದಲ್ಲಿ ಮೊದಲೇ ಸ್ಕೆಚ್ ಹಾಕಿಕೊಂಡು ಕೂತಿದ್ದ ಹಂತಕರು ರೌಡಿ ಸುಶೀಲ್ ಕಾಳೆ ಮೇಲೆ ಅಟ್ಯಾಕ್ ನಡೆಸಿದ್ದರು.

**ವಿಜಯಪುರ**
**✍ ರಾಜೀವ್ ಬೈರಿ**

ಸಿಎಂ ಬಂದ ದಿನವೇ ಅದೇ ಜಿಲ್ಲೆಯ ಇನ್ನೊಂದು ವ್ಯಾಪ್ತಿಯಲ್ಲಿ ಪಿಸ್ತುಲ್‌ನಿಂದ ಗುಂಡುಗಳು ಹಾರುತ್ವೆ! ವ್ಯಕ್ತಿಯೊಬ್ಬನ ಭೀಕರ ಹತ್ಯೆ ನಡೆಯುತ್ತೆ ಅಂದ್ರೆ, ಸುಮ್ನೆನಾ?





ಸಹಜವಾಗಿಯೇ ಗಾಂಧಿ ಚೌಕ ಪೊಲೀಸರ ಮೇಲೆ ತನಿಖಾ ಒತ್ತಡ ನಿರ್ಮಾಣವಾಗಿತ್ತು. ಆಗ ರೌಡಿ ಸುಶೀಲ್ ಕಾಳೆಯನ್ನ ಹೆಣವಾಗಿಸಿದ ಹಂತಕರನ್ನ ಪತ್ತೆ ಮಾಡಲೇ ಬೇಕು ಅಂತಾ ಫೀಲ್ಡಿಗಿಳಿದಿದ್ದರು ಗಾಂಧೀ ಚೌಕ ಇನ್ಸಪೆಕ್ಟರ್. ಮುಂದೆ ನಡೆದದ್ದು ಖಾಕಿ ಖದರ್ ಪ್ರದರ್ಶನ!!



ಕಳೆದ 2 ತಿಂಗಳ ಹಿಂದೆ ಮನಗೂಳಿಯ ಕೆನರಾ ಬ್ಯಾಂಕ್ ನಲ್ಲಿ 59 ಕೆಜಿ ಚಿನ್ನ ಲೂಟಿ ಕೇಸ್ ನಿಮಗೆಲ್ಲ ಗೊತ್ತಿರಬೇಕಲ್ಲ, ದೇಶದಲ್ಲಿಯೇ ದೊಡ್ಡ ದರೋಡೆ ಪ್ರಕರಣ ಎನ್ನುವ ಕುಖ್ಯಾತಿಗಳಿಸಿತ್ತು. ಈ ಕೇಸ್ ಬೆನ್ನಿಗೆ ಬಿದ್ದಿದ್ದ ಪೊಲೀಸರು ಒಂದೂವರೆ ತಿಂಗಳಲ್ಲಿ ಪ್ರಕರಣ ಬೇಧಿಸಿ ಶೇಕಡ 90ರಷ್ಟು ಚಿನ್ನವನ್ನ ರಿಕವರಿ ಮಾಡುವ ಮೂಲಕ ಪೊಲೀಸ್ ಖಾಕಿ ಪವರ್ ಪ್ರದರ್ಶಿಸಿದ್ರು. ಈ ಸುಶೀಲ್ ಹತ್ಯಾಕಾಂಡದಲ್ಲೂ ಅಷ್ಟೇ, ಕೇಸನ್ನ ಪ್ರತಿಷ್ಟೆಯಾಗಿಯೇ ತೆಗೆದುಕೊಂಡ ಗಾಂಧಿ ಚೌಕ ಪೊಲೀಸರು ಕೇವಲ 12 ಗಂಟೆಯಲ್ಲೆ ಆರೋಪಿಗಳನ್ನ ಹಡೆಮುರಿಕಟ್ಟಿದ್ದಾರೆ. ಅಷ್ಟೇ ಅಲ್ಲ, ಸಿಎಂ ಬಂದ ದಿನ ಕಾನೂನು ಸುವ್ಯವಸ್ಥೆಗೆ ಭಂಗ ತಂದ ಹಂತಕರ ಕಾಲುಗಳಿಗೆ ಗುಂಡು ಹಾರಿಸಿ ಆಸ್ಪತ್ರೆ ಪಾಲು ಮಾಡಿದ್ದಾರೆ. ಸುಶೀಲ್ ಹತ್ಯೆಗೆ ಮುಂದಾಳತ್ವ ವಹಿಸಿದ್ದ ಆಕಾಶ ಹಾಗೂ ಸುದೀಪ್ ಕಾಲಿಗೆ ಗುಂಡು ಹಾಕಲಾಗಿದೆ..

## ಪೊಲೀಸರ ಮೇಲೆ ಗುಂಡು ಹಾರಿಸಲು ಯತ್ನಿಸಿದ ಹಂತಕರು!

ಸುಶೀಲ್ ಹತ್ಯೆ ಬೆನ್ನಲ್ಲೆ ಅಲರ್ಟ್ ಆದ ಪೊಲೀಸರು ಇಡೀ ದಿನ ಕಾರ್ಯಾಚಾರಣೆ ನಡೆಸಿದ್ದಾರೆ. ಬಳಿಕ ಸುಶೀಲ್‌ಗೆ ಸ್ಕೆಚ್ ಆಗಿದ್ದವರ ಪೈಕಿ ಹತ್ಯಾಕಾಂಡದ ಮುಂದಾಳತ್ವ ವಹಿಸಿದ್ದು ಆಕಾಶ ಕಲ್ಲವ್ವಗೊಳ, ಸುದೀಲ್ ಅಲಿಯಾಸ್ ಸುಭಾಷ ಬಗಲಿ ಅನ್ನೋದು ಬಯಲಾಗಿದೆ.

ಅವರಿಬ್ಬರು ಇರೋ ಸ್ಥಳದ ಮಾಹಿತಿ ಪಡೆದ ಪೊಲೀಸರು ತಡರಾತ್ರಿ ಬಂಧನಕ್ಕೆ ಇಳಿದಿದ್ರು. ಆದ್ರೆ ಆಗಿದ್ದೆ ಬೇರೆ, ನಂಬರ್ ಇಲ್ಲದ ಸ್ಪೆಂಡರ್ ಬೈಕೊಂದನ್ನ ತೆಗೆದುಕೊಂಡು ನಸುಕಿನ ಜಾವ ಇಬ್ಬರು ಹಂತಕರು ಇಟ್ಟಂಗಿಹಾಳ ಹೊರ ವಲಯದಿಂದ ಪರಾರಿಯಾಗ್ತಿದ್ದಾರೆ ಅನ್ನುವ ಮಾಹಿತಿ ಸಿಕ್ಕಿತ್ತು! ಅಲ್ಲಿ ಹೋದ್ರೆ ಪೊಲೀಸರ ಮೇಲೆ ಫೈರಿಂಗ್ ನಡೆಸಲು ಇಬ್ಬರು ಹಂತಕರು ಮುಂದಾಗಿದ್ದಾರೆ! ಈ ವೇಳೆ ಪಿಸಿಐ ತಳಕೇರಿ ತಮ್ಮ ಆತ್ಮರಕ್ಷಣೆಗೆ ಇಬ್ಬರ ಕಾಲಿಗೆ ಗುಂಡು ಹಾರಿಸಿ, ಬಂಧಿಸಿದ್ದಾರೆ.

ಅಂದಹಾಗೆ; ಭೀಮಾತೀರದ ಹಂತಕ ಬಾಗಪ್ಪ ಹರಿಜನ ಮಾಜಿ ಶಿಷ್ಯ ಸುಶೀಲ್ ಕಾಳೆ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಪೊಲೀಸರು ಪರಾರಿಯಾಗಿದ್ದ ನಾಲ್ವರನ್ನು ಬಂಧಿಸಿದ್ದಾರೆ. ಗೌತಮ್ ಆಲಮೇಲಕರ, ನಾರಾಯಣ ಜಾಧವ್, ಬಸವರಾಜ್ ಮುನ್ನಾಳ, ಪ್ರಜ್ವಲ ಹಳಿಮನಿ ಬಂಧಿತ ಆರೋಪಿಗಳು.

ಈ ಕುರಿತು ಎಸ್ಪಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಹತ್ಯೆಯ ಬಳಿಕ ಪರಾರಿಯಾಗಿದ್ದ ಆರೋಪಿಗಳ ಪೈಕಿ ಅಪ್ರಾಪ್ತ ಸೇರಿ ಇಬ್ಬರನ್ನು ಇತ್ತೀಚಿಗೆ ಬಂಧಿಸಲಾಗಿತ್ತು. ಇದೀಗ ಇನ್ನುಳಿದಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಜೊತೆಗೆ ಬಂಧಿತರಿಂದ ಒಂದು ಕಂಟ್ರಿ ಮೇಡ್ ಪಿಸ್ತೂಲ್, ನಾಲ್ಕು ಜೀವಂತ ಗುಂಡುಗಳು, ಮೂರು ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರೆದಿದೆ.

# 75 ರ ವೃದ್ಧೆಯ ರೇಪ್ ಅಂಡ್ ಮರ್ಡರ್ ಕಾಮುಕ ಮಹೇಶ್ ಪೊಲೀಸರ ಬಲೆಗೆ!

**ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಕೆಸ್ತೂರಿನ ಮನೆಯಲ್ಲಿ ದೃಷ್ಠಿ ಹೀನಾ ವೃದ್ಧೆ ಕೆಂಪಮ್ಮನ ಶವವಿದ್ದ ಕಡೆ ಪಕ್ಕದ ಮನೆಯ ಮಹೇಶ ಎಂಬಾತನು ಕೂಡ ಮಲಗಿದ್ದ. ಇದರಿಂದ ಕೆಂಪಮ್ಮನ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಮಗ ನಂಜಯ್ಯ ಯಳಂದೂರು ಪೊಲೀಸ್ ಠಾಣೆಗೆ ದೂರು ನೀಡಿದ್ದ. ಆದರೆ ಮಹೇಶ ಕುಡಿದ ಅಮಲಿನಲ್ಲಿ ಮನೆಗೆ ಬಂದಿದ್ದ ವೇಳೆಯಲ್ಲಿ ವೃದ್ಧೆ ಕೆಂಪಮ್ಮ ಸಾವಿಗೀಡಾಗಿರುವುದು ಗ್ರಾಮದಲ್ಲಿ ಅನುಮಾನಕ್ಕೆಡೆ ಮಾಡಿಕೊಟ್ಟಿತ್ತು. ಅದರಂತೆ ವೃದ್ದೆ ಕೆಂಪಮ್ಮನ ಶವವನ್ನು ಮರಣೋತ್ತರ ಪರೀಕ್ಷೆಗೆ ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ರವಾನಿಲಾಗಿತ್ತು. ಇಲ್ಲಿ ಪೊಲೀಸ್ ಇಲಾಖೆ ಶವವನ್ನು ಪಂಚನಾಮೆ ನಡೆಸುವ ವೇಳೆ ವೃದ್ದೆ ಕೆಂಪಮ್ಮನ ಶವದ ಮೇಲಿನ ಗುರುತುಗಳ ಪರಿಶೀಲನೆಯನ್ನು ನಿಯಮದಂತೆ ಮಾಡಿದ್ದಾರೆ. ಆ ವೇಳೆ ಕೆಂಪಮ್ಮನ ಶವದ ಮರ್ಮಾಂಗದಲ್ಲಿ ತರಿಚಿದ ಗಾಯಗಳಾಗಿದ್ದೂ ಹಾಗೆಯೇ ತೊಡೆಯ ಭಾಗದಲ್ಲಿ ಕೈಗಳಿಂದ ಹಿಸುಕಿದ ಗುರುತುಗಳು ಕಂಡುಬಂದಿದೆ. ಇದರಿಂದ 75ರ ಇಳಿವಯಸ್ಸಿನ ವೃದ್ಧೆ ಕೆಂಪಮ್ಮನ ಮೇಲೆ ಅತ್ಯಾಚಾರವೆಸಗಲಾಗಿದೆ ಎಂಬುದು ಸಾಬೀತಾಗಿದೆ. ಯಳಂದೂರು ಠಾಣೆಯ ವೃತ್ತ ನಿರೀಕ್ಷಕ ಶ್ರೀಕಾಂತ್‌ರವರಿಗೆ ವೃದ್ಧೆಯನ್ನು ಆರೋಪಿ ಅತ್ಯಾಚಾರವೆಸಗಿ ಕೊಂದು ಹಾಕಿರುವ ಎಲ್ಲಾ ಸುಳಿವು ದೊರೆಯುತ್ತಿದ್ದಂತೆ ಆಕೆಯ ವಾರಸುದಾರಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಂಡು ದೃಷ್ಠಿಹೀನ ವೃದ್ದೆಯನ್ನೂ ಬಿಡದೆ ಕ್ರೂರವಾಗಿ ಅತ್ಯಾಚಾರ ನಡೆಸಿ ಕೊಂದು ಹಾಕಿದ ಕಾಮಾಂದನನ್ನು ಹೆಡೆಮುರಿಕಟ್ಟಿ ತಂದು ಜೈಲು ಸೇರಿಸಿದ್ದಾರೆ. ಸದ್ಯಕ್ಕೆ ಆರೋಪಿ ಮಹೇಶ್ ಜೈಲಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾನೆ. ವೃದ್ಧೆ ಕೆಂಪಮ್ಮನ ಬದುಕಿನ ಕೊನೆಯ ಹಂತದಲ್ಲಿ ಘೋರ ಅನ್ಯಾಯವೊಂದು ನಡೆದು ಹೋಗಿದೆ.**



ಕಾಮುಕ ಮಹೇಶ



ಕೊಲೆಯಾದ ಕೆಂಪಮ್ಮ

**ಚಾಮರಾಜನಗರ**
✍ ಎಸ್. ಸ್ವಾಮಿ

ಹೌದು... ಮೃತೆ ಕೆಂಪಮ್ಮ ಕೆಸ್ತೂರು ಗ್ರಾಮದ ಲೇ.ರಂಗಯ್ಯ ಎಂಬುವವರ ಎರಡನೆ ಪತ್ನಿ, ಇಳಿ ವಯಸ್ಸಿನಲ್ಲಿ ಹಾಸಿಗೆ ಹಿಡಿದು ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದ್ದಳು. ಈಕೆಯ ಒಬ್ಬನೇ ಮಗ ನಂಜಯ್ಯ ತಾಯಿಗೋಸ್ಕರ ಮದುವೆಯೇ ಆಗದೇ ಅವಳನ್ನು ಜೋಪಾನ ಮಾಡಿಕೊಂಡಿದ್ದ. ಈ ವೃದ್ಧೆಯ ಮೇಲೆ ಪಕ್ಕದ ಮನೆಯ (ಸಂಬಂಧದಲ್ಲಿ ಅಳಿಯನಾಗಬೇಕು.) ಕಾಮಾಂಧನ ವಕ್ರದೃಷ್ಠಿ ಬಿದ್ದು ವಯಸ್ಸಲ್ಲದ ವಯಸ್ಸಿನಲ್ಲಿ ಅತ್ಯಚಾರಕ್ಕೊಳಗಾಗಿ ಕೊಲೆಯಾಗಿ ಹೋಗಿದ್ದಾಳೆ.

ಈಕೆಯನ್ನು ಕೊಂದ ಹಂತಕ ಸುಮಾರು 45 ವರ್ಷದ ಮಹೇಶ ಬಿನ್ ಲೇಟ್ ಮಾದಯ್ಯ ಯಳಂದೂರು ತಾಲ್ಲೂಕಿನ ಕೆಸ್ತೂರು ಗ್ರಾಮದವನು. ಈತನ ಸ್ವಂತ ಊರು ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೂಕಿನಈಶ್ವರಗೌಡನಹಳ್ಳಿ ಗ್ರಾಮ. ಮಹೇಶನ ತಂದೆ ಲೇಟ್ ಮಾದಯ್ಯನಿಗೆ ಒಟ್ಟು 10 ಜನ ಮಕ್ಕಳು. ಮೊದಲನೆಯವಳು ಚಿನ್ನಮ್ಮ, ಎರಡನೇಯವನು ಮಾದೇವ, ಮೂರನೇಯವನು ಶೇಖರ, ನಾಲ್ಕನೇಯವನು ಬಸವಣ್ಣ ಐದು ಮತ್ತು ಆರನೇಯವರು ಗಂಗಾ-ಗೌರಿ ಎಂಬ ಅವಳಿ-ಜವಳಿ ಸಹೋದರಿಯರು, ಈ ಪೈಕಿ ಗೌರಿ ಅದಾಗಲೇ ತೀರಿಕೊಂಡಿದ್ದಾಳೆ. ಏಳನೇಯವನು ಆರೋಪಿ ಮಹೇಶ, ಎರಟನೇಯವನು ನಾಗರಾಜು, ಒಂಭತ್ತನೇಯವನು ಮಲ್ಲೇಶ, ಹತ್ತನೇಯವನು ಪುಟ್ಟಸ್ವಾಮಿಯಾಗಿದ್ದು ಈ ಪೈಕಿ ಬಸವಣ್ಣ ಮತ್ತು ಮಲ್ಲೇಶರವರಿಗೆ ಮದುವೆಯಾಗಿರುವುದಿಲ್ಲ ಉಳಿದ ಎಲ್ಲರಿಗೂ ಮದುವೆಯಾಗಿದೆ.

ಅವಿದ್ಯವಂತನಾದ ಮಹೇಶ ಕೂಲಿ ಕೆಲಸ (ಗಾರೆಕೆಲಸ, ಬಾರ್ ಬೆಂಡಿಂಗ್ ಕೆಲಸ) ಮಾಡಿಕೊಂಡಿದ್ದ. ಕಳೆದ 20 ವರ್ಷದ ಹಿಂದೆ ಯಳಂದೂರು ತಾಲ್ಲೂಕಿನ ಕೆಸ್ತೂರು ಗ್ರಾಮದ ಗುರುಮೂರ್ತಿ ಮತ್ತು ನಿಂಗಮ್ಮರವರ ಮಗಳಾದ ಮೀನಾಕ್ಷಿ ಎಂಬುವಳ ಜೊತೆ ಮದುವೆಯಾಗಿದ್ದು ಇವರಿಗೆ ಪ್ರಜ್ವಲ್ ಮತ್ತು ಐಶ್ವರ್ಯ ಎಂಬ ಮಕ್ಕಳಿದ್ದರು. ಈ ಪೈಕಿ ಮಗ ಪ್ರಜ್ವಲ್ ಈಗ್ಗೆ ಎರಡು ವರ್ಷದ ಹಿಂದೆ ಮನೆಯಲ್ಲಿಯೇ ನೇಣು ಹಾಕಿಕೊಂಡು ಮೃತಪಟ್ಟಿದ್ದಾನೆ. ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿರುವ ಮಗಳಿದ್ದು ಇನ್ನೂ ಮದುವೆಯಾಗಿರುವುದಿಲ್ಲ. ಈತನ ಹೆಂಡತಿ ಮೀನಾಕ್ಷಿಯು ಕೂಡ ಕೂಲಿಕೆಲಸ ಮಾಡಿಕೊಂಡಿದ್ದು, ಈಕೆಯ ಒಡಹುಟ್ಟಿದವರು ಒಟ್ಟು ಐದು ಮಂದಿ, ಎಲ್ಲರೂ ಹೆಣ್ಣು ಮಕ್ಕಳೆ. ಈ ಪೈಕಿ ಮೀನಾಕ್ಷಿ ಕಿರಿಯವಳು ನಾಲ್ಕು ಜನ ಅಕ್ಕಂದಿರೂ ಅದಾಗಲೇ ತೀರಿಕೊಂಡಿದ್ದಾರೆ. ಗುರುಮೂರ್ತಿ ಹಾಗೂ ನಿಂಗಮ್ಮರವರಿಗೆ ಗಂಡು ಮಕ್ಕಳಿಲ್ಲದ ಕಾರಣ ಮಹೇಶನನ್ನು ಮನೆ ಅಳಿಯನಾಗಿ ಕೆಸ್ತೂರಿನಲ್ಲಿಯೇ ಉಳಿಸಿಕೊಂಡಿದ್ದಾರೆ. ಅತ್ತೆ ನಿಂಗಮ್ಮ ಬದುಕಿದ್ದು ಮಾವ ಗುರುಮೂರ್ತಿ ಮದುವೆಗೂ ಮುನ್ನ ತೀರಿಕೊಂಡಿದ್ದಾರೆ. ಪ್ರತಿದಿನ ಕೂಲಿ ಕೆಲಸಕ್ಕೆ ಹೋಗುತ್ತಿದ್ದ ಮಹೇಶ ದಿನಕ್ಕೆ 600 ರಿಂದ 700 ರೂ.ವರೆಗೆ ಕೂಲಿ ಹಣ ಸಂಪಾದನೆ ಮಾಡುತ್ತಿದ್ದ. ಅದರಲ್ಲಿ 400 ರೂಪಾಯಿ ಮನೆಗೆ ಕೊಟ್ಟು ಉಳಿದ ಹಣದಲ್ಲಿ ಬಸ್ ಚಾರ್ಜ್, ಊಟ ಹಾಗೂ ಕುಡಿತಕ್ಕೆ ಬಳಿಸಿಕೊಳ್ಳುತ್ತಿದ್ದ. ಕುಡಿದು ಬೀದಿಯಲ್ಲಿ ಎಲ್ಲರೊಂದಿಗೆ ಗಲಾಟೆ ಮಾಡುವುದು, ಬಯ್ಯುವುದು ಮಾಡುತ್ತಿದ್ದನು. ಸದಾ ಜಗಳ ಮಾಡುತ್ತ ಗ್ರಾಮದಲ್ಲಿ ಅಶಾಂತಿ ಸೃಷ್ಟಿಸುತ್ತಿದ್ದ. ಆತನ ನಡವಳಿಕೆಯಿಂದ ಯಾರು ಸಹ ಈತನೊಟ್ಟಿಗೆ ಹಾಗೂ ಈತನ ಮನೆಯವರ ಜೊತೆ ಮಾತನಾಡುತ್ತಿರಲಿಲ್ಲ. ಒಟ್ಟಿನಲ್ಲಿ ಆರೋಪಿ ಮಹೇಶ್ ರೌಡಿ ಎಂದು ಬಿಂಬಿಸಿಕೊಂಡು ಗ್ರಾಮಸ್ಥರನ್ನು ಎದುರಿಸುತ್ತಿದ್ದ, ಮಹಿಳೆಯರಿಗೂ ಜೀವಭಯ ಉಂಟಾಗುವಂತೆ ನಡೆದುಕೊಳ್ಳುತ್ತಿದ್ದ ಎಂದು ಗ್ರಾಮಸ್ಥರು ಮಾತನಾಡುತ್ತಿದ್ದರು.



ಡಿವೈಎಸ್ಪಿ ಧರ್ಮೇಂದ್ರ



ಸಿಪಿಐ ಶ್ರೀಕಾಂತ್



ಎಸ್ಪಿ ಡಾ. ಬಿ.ಟಿ. ಕವಿತಾ

ಇವರ ಮನೆಯ ಪಕ್ಕದಲ್ಲಿಯೇ ಮೃತೆ ಕೆಂಪಮ್ಮನವರ ಮನೆಯಿದೆ. ಕೆಂಪಮ್ಮಳ ಪತಿ ರಂಗಯ್ಯನಿಗೆ ಇಬ್ಬರು ಹೆಂಡತಿಯರು. ಮೊದಲನೆಯವಳು ಅದಾಗಲೇ ತೀರಿಕೊಂಡಿದ್ದಾಳೆ ಅವಳಿಗೆ ಒಬ್ಬ ಮಗನಿದ್ದು ಸಿಂಗನಲ್ಲೂರು ಸೇರಿಕೊಂಡಿದ್ದಾನೆ. ಅವಳು ತೀರಿಕೊಂಡ ನಂತರ ಕೆಂಪಮ್ಮಳನ್ನು ಎರಡನೇ ಮದುವೆಯಾಗಿದ್ದ. ಇವಳಿಗೆ ನಂಜಯ್ಯ ಎಂಬ ಮಗನಿದ್ದು ರಂಗಯ್ಯ ಈಗ ಬದುಕಿಲ್ಲ. ಹಾಗಾಗಿ ಈಗ ಆ ಮನೆಯಲ್ಲಿ ಕೆಂಪಮ್ಮ ಮತ್ತು ಆಕೆಯ ಮಗ ನಂಜಯ್ಯ ಇಬ್ಬರೇ ವಾಸವಿದ್ದರು. ಕೆಂಪಮ್ಮಳಿಗೆ ಸುಮಾರು 70 ವರ್ಷ ವಯಸ್ಸಾಗಿದ್ದರಿಂದ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ ಹಾಗೂ ನಡೆಯಲು ಆಗುತ್ತಿರಲಿಲ್ಲ. ನಂಜಯ್ಯನಿಗೆ ಸುಮಾರು 40 ವರ್ಷ ವಯಸ್ಸಾಗಿದ್ದು ಇನ್ನೂ ಮದುವೆಯಾಗಿರುವುದಿಲ್ಲ. ಆಕೆಯನ್ನು ಮಗ ನಂಜಯ್ಯನೇ ನೋಡಿಕೊಳ್ಳುತ್ತಿದ್ದನು. ಮಹೇಶ್ ಮನೆಯವರಿಗೂ ಮೃತೆ ಕೆಂಪಮ್ಮಳ ಮನೆಯವರಿಗೂ ಮನೆಯ ಜಾಗದ ವಿಚಾರವಾಗಿ ಈ ಹಿಂದಿನಿಂದಲೂ ಗಲಾಟೆ ನಡೆಯುತ್ತಿತ್ತು.

ಆರೋಪಿ ಮಹೇಶನಿಗೆ 2-3 ದಿನಗಳಿಂದ ಕೆಲಸ ಇರಲಿಲ್ಲ. ಹಾಗಾಗಿ ಘಟನೆ ನಡೆದ 09-07-2025 ರಂದು ಬುಧವಾರವೂ ಸಹ ಯಾವುದೇ ಕೆಲಸ ಇಲ್ಲದ ಕಾರಣ ಊರಿನಲ್ಲಿಯೇ ಇದ್ದನು. ಅಂದು ಬೆಳಿಗ್ಗೆ ಬೆಳಿಗ್ಗೆಯೇ ಸುಮಾರು 8-00 ಗಂಟೆ ಸಮಯದಲ್ಲಿ ಗ್ರಾಮದ ಅಂಬೇಡ್ಕರ್ ಭವನದ ಬಳಿ ಇರುವ ಚಿಕ್ಕಬಸವಯ್ಯ ಎಂಬುವರ ಅಂಗಡಿಯಲ್ಲಿ 90 ಎಂಎಲ್‌ನ ಎರಡು ಪಾಕೆಟ್ ಮದ್ಯ ಸೇವಿಸಿ ಅಂಬೇಡ್ಕರ್ ಭವನದೊಳಗೆ ಹೋಗಿ ಕುಳಿತು ನಂದೀಶನ ಜೊತೆ ಕಾಲ ಕಳೆಯುತ್ತಿದ್ದ. ಆ ದಿನ ಗ್ರಾಮದ ಕಣ್ಣಪ್ಪಿ ಎಂಬುವರ ಮನೆಯ ಮೋಲ್ಡ್ (ಕಾಂಕ್ರೀಟ್ ಕೆಲಸ) ನಡೆಯುತ್ತಿದ್ದರಿಂದ ಅವರು ಊಟಕ್ಕೆ ಕರೆದಿದ್ದಾರೆ. ಮಧ್ಯಾಹ್ನ ಸುಮಾರು 3-00 ಗಂಟೆ ಸಮಯದಲ್ಲಿ ಅಲ್ಲಿ ನಾನ್‌ವೆಜ್ ಅಡಿಗೆ ಮಾಡಿದ್ದರಿಂದ ಅಲ್ಲಿಯೂ ಕಣ್ಣಪ್ಪಿ ಮನೆಯವರು 90 ಎಂಎಲ್‌ನ ಒಂದು ಪಾಕೇಟ್ ಡಿಂಕ್ಸ್ ಕೊಟ್ಟಿದ್ದರಿಂದ ಅದನ್ನು ಕುಡಿದು ಊಟ ಮಾಡಿಕೊಂಡು ಮತ್ತೆ ಅಂಬೇಡ್ಕರ್ ಸಂಘದ ಮನೆಗೆ ಹೋಗಿ ಕುಳಿತುಕೊಂಡಿದ್ದಾನೆ. ಆ ದಿನ ಹೆಂಡತಿ ಮೀನಾಕ್ಷಿ ಮನೆಯಲ್ಲಿರಲಿಲ್ಲ ಕೂಲಿ ಕೆಲಸಕ್ಕೆ ಹೋಗಿದ್ದಳು. ಸಾಯಂಕಾಲ ಸುಮಾರು 5 ರಿಂದ 5-30 ರವರೆಗೂ ಅಂಬೇಡ್ಕರ್ ಭವನದಲ್ಲೆ ಇದ್ದು ನಂತರ ಮನೆಯ ಕಡೆಗೆ ಬಂದಾಗ ತನ್ನ ಎದುರು ಮನೆಯಲ್ಲಿ ಕೆಂಪಮ್ಮ ಒಬ್ಬಳೇ ಇದ್ದಳು ಮಗ ನಂಜಯ್ಯ ಇರಲಿಲ್ಲ.

ಆಗ ಮಹೇಶ ಕೆಂಪಮ್ಮಳ ಮನೆಯ ಒಳಗೆ ಹೋಗಿ ಲೈಟ್ ಸ್ವಿಚ್ ಹುಡುಕಾಡಿದಾಗ ಸಿಗಲಿಲ್ಲ. ಆಗ ಕೆಂಪಮ್ಮ ಒಬ್ಬಳೇ ಇರುವುದನ್ನು ನೋಡಿ ಹೇಗಿದ್ದರೂ ಇವಳು ಒಬ್ಬಳೇ ಇದ್ದಾಳೆ ಇವಳನ್ನು ಈ ದಿನ ಸಂಭೋಗ ಮಾಡಬೇಕು, ಹೇಗಿದ್ದರೂ ಇವಳಿಗೆ ಕಣ್ಣು ಕಾಣುವುದಿಲ್ಲ, ಹಾಗಾಗಿ ನಾನು ಏನು ಮಾಡಿದರೂ ಅವಳಿಗೂ ಗೊತ್ತಾಗುವುದಿಲ್ಲ ಬೇರೆಯವರಿಗೂ ಗೊತ್ತಾಗುವುದಿಲ್ಲ ಎಂದು ನಿರ್ಧರಿಸಿದ್ದಾನೆ. ನಂತರ ಮನೆಯಿಂದ ವಾಪಸ್ ಹೊರಗೆ ಬಂದು ಮನೆಯ ಹೊರಗೆ ಯಾರೂ ಇಲ್ಲದಿದ್ದದನ್ನು ನೋಡಿಕೊಂಡು ಮತ್ತೆ ಕೆಂಪಮ್ಮರವರ ಮನೆಗೆ ಹೋಗಿ ಮನೆಯ ಬಾಗಿಲಿನ ಬಳಿ ಕುಳಿತಿದ್ದ ಕೆಂಪಮ್ಮಳನ್ನು ಕೈ ಹಿಡಿದು ಎಳೆದು ಕೆಳಗೆ ಬೀಳಿಸಿದ್ದಾನೆ. ಆಗ ಕಣ್ಣು ಕಾಣದ ಅವಳು ಯಾರು... ಯಾರು... ಎಂದು ಕೇಳುತ್ತಿದ್ದಳು. ಆದರೆ ಮಹೇಶ ಏನೂ ಮಾತನಾಡದೆ ಮೃಗದಂತೆ ಅವಳ ಮೇಲೆರಗಿ ಅತ್ಯಾಚಾರವೆಸಗಿದ್ದಾನೆ. ಈತನ ಬಲಿಷ್ಠತೆಯನ್ನು ತಡೆಯಲಾಗದೆ ಇಳಿವಯಸ್ಸಿನ ಆ ವೃದ್ಧೆ ಅತ್ಯಾಚಾರ ನಡೆಸುತ್ತಿರುವಾಗಲೇ ಉಸಿರು ಚೆಲ್ಲಿದ್ದಾಳೆ. ನಂತರ ಮಹೇಶ ಸುಸ್ತಾಗಿ ಕೆಂಪಮ್ಮಳ ಪಕ್ಕದಲ್ಲಿಯೇ ಮಲಗಿದ್ದಾನೆ.

ಸ್ವಲ್ಪ ಹೊತ್ತಿನ ನಂತರ ಕೆಂಪಮ್ಮಳ ಮಗ ನಂಜಯ್ಯ ಬಂದು ಮಹೇಶ್‌ನನ್ನು ನೋಡಿ ಇಲ್ಲಿಗೇಕೆ ಬಂದಿದ್ದೀಯ ಎಂದು ಕೇಳಿದ್ದಾನೆ. ಅದಕ್ಕೆ ಆತ ಲೈಟ್ ಹಾಕಲು ಬಂದಿದ್ದೆ

☞ 10

# ಪರಪ್ಪನ ಅಗ್ರಹಾರ ಜೈಲ್ ಮೇಲೆ ಎನ್‌ಐಎ ದಾಳಿ.... ಉಗ್ರರಿಗೆ 'ಸ್ವರ್ಗ' ಸೃಷ್ಟಿಸಿದವರ್‍ಯಾರು?!



**ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದ ಮೇಲೆ ದಾಳಿ ನಡೆಸಿರುವ, ಎನ್‌ಐಎ ಪೊಲೀಸ್, ಅಲ್ಲಿದ್ದ ಉಗ್ರ ನಾಸಿರ್‌ನ ಉಗ್ರ ಚಟುವಟಿಕೆಗಳಿಗೆ ಸಹಾಯ ಮಾಡುತ್ತ, ಕೋಟಿ ಕೋಟಿ ಕೊಳ್ಳೆ ಹೊಡೆಯುತ್ತಿದ್ದ ಜೈಲು ಸಿಬ್ಬಂದಿ ಹಾಗೂ ಮೊಬೈಲ್ ಸಪ್ಲೈ ಮಾಡಿ ಲಕ್ಷಾಂತರ ರೂ. ಸಂಪಾದಿಸಿದ್ದ ಮನೋವೈದ್ಯರನ್ನು ಬಂಧಿಸಿದ್ದಾರೆ! ಇದೊಂತರ ಬೇಲಿಯೇ ಎದ್ದು ಹೊಲ ಮೇಯ್ದ ಕತೆ ಅಲ್ಲವೇ. ಇಷ್ಟಕ್ಕೂ ಇದಕ್ಕೆಲ್ಲ ಯಾರು ಹೊಣೆ? ಕಾರಾಗೃಹಗಳ ಮಹಾ ಅಧೀಕ್ಷಕರಲ್ಲವೇ??! ಅವರ ವಿರುದ್ಧ ಗೃಹಮಂತ್ರಿಗಳೇಕೆ ಕ್ರಮ ಜರುಗಿಸುತ್ತಿಲ್ಲ???!**

ರೇಣುಕಾ ಸ್ವಾಮಿ ಕೊಲೆ ಕೇಸ್ ಆರೋಪಿ 'ಡೆವಿಲ್' ದರ್ಶನ್ ಮತ್ತು ಕುಖ್ಯಾತ ರೌಡಿ ಶೀಟರ್ ವಿಲ್ಸನ್ ಗಾರ್ಡನ್ ನಾಗನಿಗೆ ಸಿಗುತ್ತಿದ್ದ ರಾಜಾತಿಥ್ಯದ ಫೋಟೋ ವೀಡಿಯೋ ವೈರಲ್ ಆಗಿ ಲಂಚಕೋರ ಅಧಿಕಾರಿಗಳ ತಲೆದಂಡವಾದ ನಂತರವೂ ಜೈಲು ಅಧಿಕಾರಿಗಳು ಬುದ್ಧಿ ಕಲಿಯುತ್ತಿಲ್ಲ!

ಮುಖ್ಯವಾಗಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯಸ್ಥರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ಬೇಜವಾಬ್ದಾರಿ ಮತ್ತು ಭ್ರಷ್ಟಾಚಾರ ಪ್ರವೃತ್ತಿಯಿಂದ, ಪರಪ್ಪನ ಅಗ್ರಹಾರ ಜೈಲಿನಲ್ಲಿ ಇರುವ ಅಪಾಯಕಾರಿ ಭಯೋತ್ಪಾದಕ ವ್ಯಕ್ತಿಗಳಿಗೆ ಎಲ್ಲಾ ರೀತಿಯ ಅನುಕೂಲ ಹಾಗೂ ಸಂಪರ್ಕ ಸೌಲಭ್ಯ ವ್ಯವಸ್ಥೆಗಳನ್ನು ಕಲ್ಪಿಸಿದ್ದ ವಿಚಾರಗಳು ಬಯಲಾಗಿ ಆತಂಕಕ್ಕೆ ದೂಡಿವೆ!!



ಕರ್ನಾಟಕ ರಾಜ್ಯ ಕಾರಾಗೃಹ ಮಹಾ ನಿರೀಕ್ಷಕರು ಶ್ರೀಮತಿ ಮಾಲಿನಿ ಕೃಷ್ಣಮೂರ್ತಿ

ಇದೀಗ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನೊಳಕ್ಕೆ ಎಂಟ್ರಿ ಕೊಟ್ಟಿದ್ದು, ಲಷ್ಕರ್-ಎ-ತೋಯ್ಬಾ ಉಗ್ರ ಸಂಘಟನೆಯ ಡೇಂಜರಸ್ ಉಗ್ರಗಾಮಿ ಟಿ. ನಾಸಿರ್‌ಗೆ ಎಲ್ಲಾ ರೀತಿಯ ಸೌಲಭ್ಯ ನೀಡಿ ಸಹಾಯ ಮಾಡಲು ನಿಂತಿದ್ದ ಎಎಸ್‌ಐ , ವೈದ್ಯ ಇಬ್ಬರ ಬಂಧನವಾಗಿದೆ. ಇವರ ಸಹಾಯದಿಂದ ಇಡೀ ದೇಶದಲ್ಲೇ ಮತ್ತೆ ಸರಣಿ ಬಾಂಬ್ ಸ್ಫೋಟ ನಡೆಸಲು ಭಯೋತ್ಪಾದಕ ಟಿ. ನಾಸಿರ್ ಸಂಚು ನಡೆಸಿದ್ದನಾ....?!

ಈ ಘಟನೆಯ ಬಳಿಕ ರಾಜ್ಯದ ಉಳಿದ ಜೈಲುಗಳಲ್ಲೂ ಇರುವ ಭದ್ರತಾ ವ್ಯವಸ್ಥೆಯ ಬಗ್ಗೆಯೂ ಭಾರೀ ಅನುಮಾನಗಳು ವ್ಯಕ್ತವಾಗುತ್ತಿವೆ. ಗೃಹ ಇಲಾಖೆ ಮಾತ್ರ ಜೈಲುಗಳಲ್ಲಿ ಏನೆಲ್ಲಾ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಾಮರ್ ಅಳವಡಿಸಲು ಎಷ್ಟು ಕೋಟಿ ಖರ್ಚು ಮಾಡಲಾಗಿದೆ? 2022ರಿಂದ 25 ರವರೆಗೆ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಮೊಬೈಲ್ ಹಾಗೂ ಗಾಂಜಾ ದೊರೆತಿರುವುದಕ್ಕೆ ಸಂಬಂಧಿಸಿದಂತೆ 69 ಪ್ರಕರಣಗಳನ್ನು ದಾಖಲಿಸಲಾಗಿದೆ! ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಮಾದಕ ವಸ್ತುಗಳನ್ನು ಪತ್ತೆಹಚ್ಚಲು ಶ್ವಾನದಳ ಸ್ಥಾಪನೆ ಮಾಡಲಾಗಿದೆ.

ಪ್ರತಿನಿತ್ಯ ಬಂಧಿಗಳನ್ನು ಹಾಗೂ ಬಂಧಿಗಳ ಕೊಠಡಿಗಳನ್ನು ಅನಿರೀಕ್ಷಿತವಾಗಿ ತಪಾಸಣೆಗೆ ಒಳಪಡಿಸಲಾಗುತ್ತಿದೆ.

ಅದಾಗಿದೆ... ಇದಾಗಿದೆ... ಎನ್ನುತ್ತಾ ತನ್ನದೇ ಆದ ಸಮರ್ಥನೆಯನ್ನು ನೀಡುತ್ತಿದೆ. ಹಾಗಾದರೇ ಇಷ್ಟೆಲ್ಲಾ ಭದ್ರತೆಗಳ ವ್ಯವಸ್ಥೆ ಇದ್ದರೂ ಜೈಲಿನಲ್ಲಿ ಉಗ್ರ ಚಟುವಟಿಕೆಗಳ ತರಬೇತಿ ನಡೆಯುತ್ತಿದೆ ಎಂಬುವುದೇ ಅಚ್ಚರಿಯಲ್ಲವೇ?!!

ಅಕ್ರಮಗಳ ಅಡ್ಡೆಯಾಗಿರುವ ಪರಪ್ಪನ ಅಗ್ರಹಾರ ಜಲಿನಲ್ಲಿ ಸಿಸಿಬಿ ಪೊಲೀಸ್ ದಾಳಿಯಲ್ಲಿ ಪ್ರತಿಬಾರಿಯೂ ಹಲವು ನಿಶೇಧಿತ ಮಾಧಕ ವಸ್ತುಗಳು, ಆಯುಧಗಳು, ಮೊಬೈಲ್ ಫೋನ್ ಸಿಗುವುದು ಸಾಮಾನ್ಯವಾಗಿದೆ. ಮೊನ್ನೆ ನಡೆದ ತಪಾಸಣಾ ದಾಳಿಯಲ್ಲಿ ಗಾಂಜಾ ಸೊಪ್ಪು ಹಾಕಿ ಸೇದುವ ಚಲ್ಲಂ, ಚಾಕು, ಗುಟ್ಕಾ, ಇನ್ನಿತರ ಮಾದಕ ವಸ್ತುಗಳು ಸಿಕ್ಕಿವೆ. ಬಂಧೀಖಾನೆಯ ಮುಖ್ಯಸ್ಥರಾಗಿರುವ ಮಾನ್ಯ ಮಾಲಿನಿ ಕೃಷ್ಣಮೂರ್ತಿ ಐಪಿಎಸ್‌ರವರು ಬಂಧಿಖಾನೆಗಳ ಡಿಜಿಯಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ನಟ ದರ್ಶನ್ ಪ್ರಕರಣದಿಂದಲೂ ಎಡವುತ್ತಲೇ ಇದ್ದಾರೆ! ಆದರೂ ಗೃಹ ಇಲಾಖೆಗೆ ಅವರನ್ನು ಗದರಿಕೊಳ್ಳಲು ಅಳುಕು ಭಯವೇಕೆ?!

## ಜೈಲು ಅಧಿಕಾರಿಗಳೇ ಕಾರಣ!

ಕಳೆದ ತಿಂಗಳು ಮೇನಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಬೆಂಗಳೂರು ಆಗ್ನೇಯ ವಿಭಾಗದ ಪೊಲೀಸರು ಏಕಾಏಕಿ ದಾಳಿ ನಡೆಸಿದ ವೇಳೆ ಕೈದಿಗಳು ಮೊಬೈಲ್, ಸ್ಟೌವ್ ಸೇರಿದಂತೆ ಇನ್ನಿತರೆ ನಿಷೇಧಿತ ವಸ್ತುಗಳನ್ನು



ಗೃಹ ಸಚಿವ ಜಿ. ಪರಮೇಶ್ವರ

ಬಳಸುತ್ತಿರುವುದು ಬೆಳಕಿಗೆ ಬಂದಿತ್ತು. ಇದಕ್ಕೆ ಜಲು ಸಿಬ್ಬಂದಿ ಹಾಗೂ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಅಧಿಕಾರಿಗಳ ಲೋಪವೇ ಕಾರಣ ಎಂಬುದು ಗೊತ್ತಾಗಿತ್ತು. ಡಿಸಿಪಿ ಸಾರಾ ಫಾತಿಮಾ ಐಪಿಎಸ್ ನೇತೃತ್ವದ 7 ಮಂದಿ ಇನ್‌ಸ್ಪೆಕ್ಟರ್‌ಗಳನ್ನೊಳಗೊಂಡ ತಂಡಗಳ ದಾಳಿ ವೇಳೆ ಕೈದಿಗಳ ಬ್ಯಾರಕ್‌ಗಳಲ್ಲಿ 16,500 ರೂ. ನಗದು, ಒಂದು ಮೊಬೈಲ್, ಒಂದು ಇಂಡಕ್ಷನ್ ಎಲೆಕ್ಟ್ರಿಕ್ ಸ್ಟೌವ್ ಹಾಗೂ ನಾಲ್ಕು ಚಾಕುಗಳು ಪತ್ತೆಯಾಗಿದ್ದವು. ಆಗಲೇ ಲಷ್ಕರ್ ತೋಯ್ಬಾ ಭಯೋತ್ಪಾದಕ ಟಿ. ನಾಸಿರ್ ಮೊಬೈಲ್ ಫೋನ್ ಬಳಸುತ್ತಿರುವುದು ಬೆಳಕಿಗೆ ಬಂದಿತ್ತೆನ್ನಲಾಗಿದೆ. ಜೈಲು ಸಿಬ್ಬಂದಿ ಹಾಗೂ ಕೆಎಸ್‌ಐಎಸ್‌ಎಫ್ ಅಧಿಕಾರಿಗಳು ಕೈದಿಗಳೊಂದಿಗೆ ಶಾಮೀಲಾಗಿರುವುದರಿಂದಲೇ ಜೈಲಿನಲ್ಲಿ ನಿಷೇಧಿತ ವಸ್ತುಗಳು ಬಳಕೆಯಾಗುತ್ತಿವೆ ಎಂದು ದಾಳಿ ಮಾಡಿದ್ದ ಪೊಲೀಸರು ಆರೋಪಿಸಿದ್ದರು.

ದಾಳಿ ಸಂಬಂಧ ಎಲೆಕ್ಟ್ರಾನಿಕ್‌ಸಿಟಿ ಉಪವಿಭಾಗದ ಎಸಿಪಿ ಕೆ.ಎಂ. ಸತೀಶ್ ನೀಡಿದ್ದ ದೂರಿನ ಅನ್ವಯ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಜೈಲು ಸಿಬ್ಬಂದಿ ಹಾಗೂ ಕೆಎಸ್‌ಐಎಸ್‌ಎಫ್ ಅಧಿಕಾರಿಗಳ ವಿರುದ್ಧವೂ ಪ್ರಕರಣ ದಾಖಲಿಸಲಾಗಿತ್ತು. ಪ್ರಕರಣದಲ್ಲಿ ಸಜಾ ಕೈದಿಗಳಾದ ಚಲುವ, ಇರ್ಷಾದ್, ಆಕಾಶ್ ಹಾಗೂ ಮಾರುತಿ ಎಂಬುವವರನ್ನು ಸಹ ಆರೋಪಿಗಳನ್ನಾಗಿ ಪರಿಗಣಿಸಲಾಗಿತ್ತು!




ನಾಸಿರ್‌ನಿಂದ ತರಬೇತಿ ಪಡೆದಿದ್ದ ಸಹಚರರು



ಎಎಸ್‌ಐ ಚಾಂದ್ ಪಾಷ

ಅದರೇ ಪ್ರತಿ ಬಾರಿಯೂ ಹಣ್ಣು ತಿಂದವರು ತಪ್ಪಿಸಿಕೊಂಡು ಸಿಪ್ಪೆ ನೆಕ್ಕಿದವರು ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಕೆಳ ಹಂತದ ಜೈಲು ಸಿಬ್ಬಂದಿಗಳನ್ನೆ ಬಲಿಪಶು ಮಾಡುವ ನಾಟಕ ನಿಲ್ಲಬೇಕು. ಮೆಲಧಿಕಾರಿಗಳೂ ಜೈಲು ದಂಧೆಯಲ್ಲಿ ಕೈಜೋಡಿಸಿದ್ದರೂ ಕಾಪಾಡಿ ಕೈ ತೊಳೆದುಕೊಳ್ಳುವ ಕಸರತ್ತು ಗೃಹ ಇಲಾಖೆಗೆ ಯಾಕೆ ಉಂಟಾಗುತ್ತಿದೆ. ನಟ ದರ್ಶನ್ ಹೋಂ ಮಿನಿಸ್ಟರ್ ಮುಂದೆಯೇ ಅಣ್ಣಾ ನನ್ನ ಹತ್ರ ಲಕ್ಷಾಂತರ ರೂಪಾಯಿ ದುಡ್ಡು ತಗೊಂಡಿದಾರೆ ನಂದೇನೂ ತಪ್ಪಿಲ್ಲ ಬಳ್ಳಾರಿಗೆ ವರ್ಗಾವಣೆ ಮಾಡಬೇಡಿ! ಎಂದು ದುಡ್ಡು ಕಿತ್ತಿರುವ ಹಿರಿಯ ಆಧಿಕಾರಿಗಳ ಮೇಲೆ ಆಪಾದನೆ ಮಾಡಿದರೂ ಕ್ರಮ ಕೈಗೊಳ್ಳದ ಕಾರಣ ಈ ಟೆರರಿಸ್ಟ್ ಪ್ರಕರಣ ಬೆಳಕಿಗೆ ಬಂದಿದೆ.




ಖೈದಿಗಳ ದುಡ್ಡಲ್ಲಿ ದೊಡ್ಡ ಅಧಿಕಾರಿಗಳ ಮನೆಮಹಲುಗಳು ಎದ್ದು ನಿಲ್ಲುತ್ತಿದ್ದರೂ, ಮಗುಮ್ಮಾಗಿರುವ ಮಂತ್ರಿಮಹೋದಯರು ಮೆಟಿಯೇ ಎದ್ದು ಹೊಲ ಮೇಯುತ್ತಿದ್ದರೂ ಪರಪ್ಪನ ಅಗ್ರಹಾರಕ್ಕೆ ಸರಿಯಾದ ಮುಖ್ಯ ಅಧೀಕ್ಷಕರನನ್ನು ತಂದು ಕೂರಿಸಲು ಮೀನಮೇಷ ಎಣಿಸುತ್ತಿರುವುದೇಕೆ?

## ನಟೋರಿಯಸ್ ಉಗ್ರ ನಾಸಿರ್!

ಆರ್.ಎಸ್.ಎಸ್. ವಿರೋಧಿ ಕೇರಳದ ಮದನಿ ಜೊತೆಗೂಡಿ ಬೆಂಗಳೂರಿನಲ್ಲಿ 2008ರಲ್ಲಿ ಸರಣಿ ಬಾಂಬ್ ಬ್ಲಾಸ್ಟ್ ಮಾಡಿಸಿ ಶಿಕ್ಷೆಗೆ ಗುರಿಯಾಗಿರುವ ಈ ಹಾರ್ಡ್ ಕೋರ್ ಟೆರರಿಸ್ಟ್ ಟಿ. ನಾಸಿರ್ ಈ ಹಿಂದೆ ಎಲ್.ಕೆ. ಆಡ್ವಾಣಿ ಮೇಲೆ ಬಾಂಬ್ ಹಾಕಲು ಹೋಗಿ ಅದು ಉಲ್ಟಾ ಬ್ಲಾಸ್ಟ್ ಆಗಿ ತನ್ನದೇ ಒಂದು ಕಾಲು ಕಳೆದುಕೊಂಡಿರುವ ಅಂಗವಿಕಲ! ಮುರಿದ ಕಾಲಿಗೆ ಮರದ ಕಾಲು ಜೋಡಿಸಿಕೊಂಡು ದಕ್ಷಿಣ ಭಾರತದಲ್ಲಿ ಲಷ್ಕರ್ ಎ ತೋಯ್ಬಾ ಮುಖಂಡತ್ವ ವಹಿಸಿಕೊಂಡು ವಿಧ್ವಂಸಕ ಕೃತ್ಯ ನಡೆಸುತ್ತಾ, ಕೇಸು ಮಾಡಿಕೊಂಡು ಜೈಲಿಗೆ ಬರುವ ಮುಸ್ಲಿಂ, ಹಿಂದೂ ಹುಡುಗರ ಬ್ರೈನ್‌ವಾಶ್ ಮಾಡಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲೇ ಭಯೋತ್ಪಾದಕ ಚಟುವಟಿಕೆಗಳ ಟ್ರೈನಿಂಗ್ ದೀಕ್ಷೆ ಎಲ್ಲಾ ಕೊಡುವ ಖತರ್ನಾಕ್ ಆದ್ಮಿ ಈತ.




ಈಗ ಡಿಐಜಿ ಆಗಿರುವ ಟಿ.ಪಿ. ಶೇಷರವರಿಂದ ಹಿಡಿದು ಅಸಿಸ್ಟೆಂಟ್ ಸೂಪರಿಂಡೆಂಟ್ ಪರಮೇಶ್, ಶ್ರೀಶೈಲ ಮೇಟಿ, ಮುಖ್ಯ ಅಧೀಕ್ಷಕರಾಗಿದ್ದ ರಂಗನಾಥ್ ಎಲ್ಲರೂ ಈತನಿಗೆ ಸಹಕಾರ, ಉಪಚಾರ ನೀಡಿ ಬೆಳೆಸಿದ್ದಾರೆಂಬ ಆಪಾದನೆಯ ಮೇರೆಗೆ ಬೆಂಗಳೂರು ಜೈಲಿನಿಂದಲೇ ಎತ್ತಂಗಡಿ ಮಾಡಲಾಗಿತ್ತು. ಕಸದ ಗಾಡಿಯಲ್ಲಿ ಮುಚ್ಚಿಟ್ಟು ಪ್ರತಿದಿನ 200 ಕೆ.ಜಿ ದನದ ಮಾಂಸ ತರಿಸಿಕೊಟ್ಟು ಆ ಮಾಂಸದೊಳಗೇ ಕೆಜಿಗಟ್ಟಲೆ ಗಾಂಜಾ ಹೂತಿಟ್ಟು ಜೈಲಿನ ಒಳಗೆ ಉಗ್ರ ನಾಸಿರ್ ಕೈಗೆ ತಂದು ಕೊಟ್ಟು ಆತನಿಂದ ದಿನಕ್ಕೊಂದು ಲಕ್ಷ ರೂಪಾಯಿ ಭಕ್ಷಿಸು ಪಡೆದ ದೇಶಪ್ರೇಮಿ ಅಧಿಕಾರಿಗಳು ಯಾರೆಂಬುದು



ಉಗ್ರ ಟಿ. ನಾಸಿರ್

## ಇಡೀ ಜೈಲಿನ ಗೋಡೆ ಗೋಡೆಗೂ ಗೊತ್ತಿದೆ!

ಅದೇ ಗಾಂಜಾ ಮಾರಿ ಕೋಟ್ಯಾಂತರ ರೂಪಾಯಿ ದುಡಿದ ಲಷ್ಕರ್ ತೋಯ್ಬಾ ಉಗ್ರ ನಾಸಿರ್ ಧನದ ಮಾಂಸದ ಬಿರಿಯಾನಿ ಮಾಡಿ ಡಿ.ಜೆ. ಹಳ್ಳಿ ಪೊಲೀಸ್ ಸ್ಟೇಷನ್ ಸುಟ್ಟು ಜೈಲಿಗೆ ಬಂದವರಿಗೆ, ಬಿರಿಯಾನಿ ಪ್ಲೇಟ್ ಗಿಷ್ಟು ರೂ. ಎಂದು ಮಾರಲು ಮಿನಿ ಕ್ಯಾಂಟೀನ್ ಮಾಡಿಕೊಟ್ಟು ಸಾಕಿ ಸಲುಹಿದ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳದೆ ಸರಕಾರ ಏಕೆ ಸುಮ್ಮನಿದೆ? ಗೃಹ ಇಲಾಖೆ ಯಾಕೆ ಕೈ ಕಟ್ಟಿಕೊಂಡು ಕುಳಿತಿದೆ?? ಈಗ ಕೋಟ್ಯಧಿಪತಿಯಾಗಿ ಕುಳಿತು ಅದೇ ದುಡ್ಡಲ್ಲಿ ಕ್ರಿಮಿನಲ್‌ಗಳನ್ನು ಭಯೋತ್ಪಾದಕರನ್ನಾಗಿಸಿ ಟ್ರೈನಿಂಗ್ ಕೊಟ್ಟು, ದೇಶದ ವಿರುದ್ಧ ಬಾಂಬ್ ಬ್ಲಾಸ್ಟ್ ಸಂಚು ರೂಪಿಸುತ್ತಿರುವ 'ಸ್ಲೀಫರ್ ಸೆಲ್'ಗಳನ್ನಿಟ್ಟು ಸಲಹುತ್ತಿರುವ ಉಗ್ರ ನಾಸಿರ್ ಇಷ್ಟು ಬೆಳೆಯಲು ಯಾರು ಕಾರಣ? ಅಧಿಕಾರಿಗಳಿಗೆ ಹಣವೆ ಮುಖ್ಯವೇ? ದೇಶ ಬೇಡವೇ? ಇಂತಹ ದೇಶದ್ರೋಹಿ ಜೈಲು ಅಧಿಕಾರಿಗಳಿಗೆ ಶಿಕ್ಷೆ ಬೇಡವೇ?

ಬೆಂಗಳೂರು ಪೊಲೀಸರು ಕೊಟ್ಟ ಟಿಪ್ಸ್ ಮೂಲಕ ಕಾರ್ಯಾಚರಣೆಗಿಳಿದಿರುವ ಎನ್‌ಐಎ ಈಗ ದಾಳಿಯ ಮುಂದುವರಿದ ಭಾಗವಾಗಿ ರಾಷ್ಟ್ರೀಯ ತನಿಖಾ ದಳವು ಭಯೋತ್ಪಾದಕ ಟಿ. ನಾಸಿರ್ ಸಾಮ್ರಾಜ್ಯಕ್ಕೆ ಲಗ್ಗೆ ಇಟ್ಟಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮನೋವೈದ್ಯ ಡಾ. ನಾಗರಾಜ್, ಉತ್ತರ ವಿಭಾಗದ ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಎಎಸ್‌ಐ ಚಾಂದ್ ಪಾಷಾ, ತಲೆಮರೆಸಿಕೊಂಡಿರುವ ಶಂಕಿತ ಉಗ್ರ ಜುನೈದ್ ಅಹಮ್ಮದ್‌ನ ತಾಯಿ ಅನೀಸ್ ಫಾತಿಮಾಳನ್ನು ಬಂಧಿಸಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಎಲ್‌ಇಟಿ ಉಗ್ರ ನಾಸಿರ್ ಹಾಗೂ ಎಲ್‌ಇಟಿ ಕಮಾಂಡರ್‌ಗಳು ವಾಟ್ಸ್ ಆ್ಯಪ್ ಸೇರಿದಂತೆ ಇಂಟರ್‌ನೆಟ್ ಮೂಲಕ ಸಂವಹನ ನಡೆಸಿದ್ದರು ಎಂಬ ಆತಂಕಕಾರಿ ವಿಷಯು ಸಿಸಿಬಿ ತನಿಖೆಯಲ್ಲಿ ಹೊರಬಂದಿದೆ.

ಜೈಲಿನಿಂದಲೇ ಪಾಕಿಸ್ತಾನದ ಎಲ್‌ಇಟಿ ಪ್ರಮುಖ ಕಮಾಂಡರ್‌ಗಳ ಜತೆ ನಾಸಿರ್ ನೇರ ಸಂಪರ್ಕದಲ್ಲಿದ್ದ. ಅಲ್ಲದೆ ವಾಟ್ಸ್‌ಆಪ್ ಸೇರಿದಂತೆ ಇತರೆ ಸಂವಹನ ಆ್ಯಪ್‌ಗಳನ್ನು ಬಳಸಿಕೊಂಡು ಆತ ಇಂಟರ್‌ನೆಟ್ ಕಾಲ್ ಮಾಡುತ್ತಿದ್ದ. ಈಗ ಬಂಧಿತನಾಗಿರುವ ಪೊಲೀಸ್ ಚಾಂದ್ ಪಾಷಾ ಉಗ್ರ ನಾಸಿರ್ ಹೈ ಸೆಕ್ಯೂರಿಟಿ ಸೆಲ್ ಬ್ಯಾರಕ್ಕಿನೊಳಗೆ ನುಗ್ಗಿ ತನ್ನದೇ ಮೊಬೈಲ್ ಕೊಟ್ಟು ಕತಾರ್‌ನಲ್ಲಿ ತಲೆ ಮರೆಸಿಕೊಂಡಿರುವ ಉಗ್ರ ಜುನೈದ್ ಜೊತೆಗೆ ಮಾತನಾಡಿಸಿರುವ ವಿಷಯ ಬೆಳಕಿಗೆ ಬಂದಿದೆ! ಭಯೋತ್ಪಾದಕನನ್ನು ಕೌನ್ಸಿಲಿಂಗ್ ಮಾಡಿ ಮನಪರಿವರ್ತನೆ ಮಾಡಲು ಹೋದ ಮನೋವೈದ್ಯನ ಮನಪರಿವರ್ತಿಸಿ ಟೆರರಿಸ್ಟ್‌ನನ್ನಾಗಿಸಿದ ಡೇಂಜರಸ್ ಈ ವ್ಯಕ್ತಿ ನಾಸಿರ್!

## ಸಿನಿಮಾ ಸ್ಟೈಲ್‌ನಲ್ಲಿ ಬಾಂಬ್ ಹಾಕುವ ಪ್ಲಾನ್

2008ರ ಬೆಂಗಳೂರು ಬಾಂಬ್ ಸ್ಫೋಟದ ಪ್ರಕರಣ ದಲ್ಲಿ ಜೈಲು ಶಿಕ್ಷೆಯಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಸಜಾ ಬಂಧಿಯಾಗಿರುವ ಉಗ್ರ ನಾಸಿರ್ ಸಧ್ಯದ ಪರಿಸ್ಥಿತಿಯಲ್ಲಿ ಹೊರಬರಲು ಸಾಧ್ಯವಿಲ್ಲ ಎಂಬುದನ್ನು ಅರಿತಿದ್ದ ನಾಸಿರ್ ಜೈಲಿನಲ್ಲೇ ಕುಳಿತು ಪರಾರಿಯಾಗುವ ಪ್ಲ್ಯಾನ್ ಮಾಡಿದ್ದ. ಹಲವು ಪ್ರಕರಣ ಸಂಬಂಧ ನಾಸಿರ್‌ನನ್ನು ಜೈಲಿನಿಂದ ಹಲವು ಬಾರಿ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಲಾಗುತ್ತಿತ್ತು. ಜೈಲಿನಿಂದ ನ್ಯಾಯಾಲಯಕ್ಕೆ ಹೋಗುವಾಗ ಬಾಂಬ್ ಸ್ಫೋಟಿಸಲು ಸಂಚು ರೂಪಿಸಿದ್ದ. ಬಾಂಬ್ ಸ್ಫೋಟಗೊಂಡಾಗ ಪೊಲೀಸರ ಗಮನ ಬೇರೆಡೆ ಹೋಗುತ್ತದೆ. ಈ ವೇಳೆ ಸಿನಿಮಾ ಸ್ಟೈಲ್‌ನಲ್ಲಿ ಪರಾರಿಯಾಗಬಹುದು ಎಂಬ ಲೆಕ್ಕಾಚಾರವನ್ನು ನಾಸಿರ್ ಹಾಕಿಕೊಂಡಿದ್ದ. ಅದಕ್ಕಾಗಿಯೇ ಜೈಲಿನಲ್ಲಿದ್ದ ಐವರಿಗೆ ಲಷ್ಕರ್ ತೋಯ್ಬಾ






ಉಗ್ರ ಜುನೈದ್ ತಾಯಿ ಫಾತಿಮಾ ಹಾಗೂ ಭ್ರಷ್ಟ ವೈದ್ಯ ನಾಗರಾಜ್

ಉಗ್ರ ಕೇರಳ ಮೂಲದ ಟಿ. ನಾಸಿರ್ ಭಯೋತ್ಪಾದಕ ಚಟುವಟಿಕೆಗಳ ಬಗ್ಗೆ ತರಬೇತಿ ನೀಡಿ ಹೊರಗೆ ಬಿಡಿಸಿ ಕಳುಹಿಸಿದ್ದ ಬೆಂಗಳೂರಿನಲ್ಲಿ ವಿಧ್ವಂಸಕ ಕೃತ್ಯ ನಡೆಸಿ, ಭಾರಿ ಅನಾಹುತ ಎಸಗಲು ಸಂಚು ರೂಪಿಸಿದ್ದ ಖಚಿತ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸರು ಜುಲೈ 23, 2023ರಲ್ಲಿ ಸುಲ್ತಾನ್‌ಪಾಳ್ಯ, ಡಿ.ಜೆ. ಹಳ್ಳಿ, ಆರ್.ಟಿ.ನಗರ, ಕೊಡಿಗೇಹಳ್ಳಿಯಲ್ಲಿ ಕಾರ್ಯಾಚರಣೆ ನಡೆಸಿ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಸ್, ಸೈಯದ್ ಮುದಾಸೀರ್ ಪಾಷಾ, ಮಹಮದ್ ಫೈಸಲ್, ಮಹಮದ್ ಉಮರ್‌ನನ್ನು ಪೊಲೀಸ್ ಬಂಧಿಸಿದ್ದರು. ಆಗ 7 ನಾಡ ಬಂಧೂಕು, 45 ಗುಂಡುಗಳು, ಸ್ಯಾಟ್‌ಲೈಟ್ ಫೋನ್ ಮಾದರಿಯ ವಾಕಿಟಾಕಿಗಳು, 12 ಮೊಬೈಲ್, ಡ್ರ್ಯಾಗರ್ ಸೇರಿದಂತೆ ವಿವಿಧ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿತ್ತು. ಪ್ರಕರಣದ ಪ್ರಮುಖ ಸೂತ್ರಧಾರ ಜುನೈದ್ ಅಹಮದ್ ದುಬೈಗೆ ಪರಾರಿಯಾಗಿದ್ದ. ಆಗ ನಾಸಿರ್‌ನನ್ನು ಎಸ್ಕೇಪ್ ಮಾಡಿ ಕರೆದೊಯ್ಯುವ ಸಂಚು ಮೊದಲ ಬಾರಿಗೆ ಬೆಂಗಳೂರು ಸಿಸಿಬಿ ಪೊಲೀಸರಿಂದ ವಿಫಲವಾಗಿತ್ತು.

ನಾಸಿರ್ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದರಿಂದ ಎಎಸ್‌ಐ ಚಾನ್ ಪಾಷಾಗೆ ವಾಹನದ ರೂಟ್ ಮ್ಯಾಪ್ ಎಲ್ಲವೂ ಚೆನ್ನಾಗಿ ಗೊತ್ತಿತ್ತು. ನಾಸಿರ್ ಜೀಪ್ ಹತ್ತಿಸಿ ವಾಹನ ಬರುತ್ತಿದ್ದಂತೆ ಬಾಂಬ್ ಸ್ಫೋಟಿಸಬೇಕು. ಪ್ರತಿ ಮಾಹಿತಿ ನಾನು ನೀಡುತ್ತೇನೆ ಎಂದು ಜುನೈದ್ ಅಹಮದ್ ಟೀಂಗೆ ಚಾಂದ್ ಪಾಷಾ ಹೇಳಿದ್ದ. ಈ ಪ್ಲ್ಯಾನ್‌ನಂತೆ ಎರಡನೇ ಬಾರೀ ಜುನೈದ್ ತಂಡ ಟಿ. ನಾಸಿರ್‌ನನ್ನು ಕೋರ್ಟ್‌ಗೆಂದು ಕರೆತರುವಾಗ ಬಾಂಬ್ ಸ್ಫೋಟಿಸಿ ಎಸ್ಕೇಪ್ ಮಾಡಿಸಲು ಸಂಚು ಮಾಡುತ್ತಿತ್ತು.

ಈ ಸಂಚು ರೂಪಿಸಲು ಎಎಸ್‌ಐ ಚಾಂದ್ ಪಾಷಾ ನೆರವು ನೀಡುವುದಾಗಿ ಹೇಳಿದ್ದ. ಸಿಎಆರ್ ಉತ್ತರ ವಿಭಾಗದಲ್ಲಿರುವ ಚಾಂದ್ ಪಾಷಾ ನಾಸಿರ್‌ನನ್ನು ಬೆಂಗಳೂರು, ಕೇರಳ ಹಾಗೂ ಇತರೇ ರಾಜ್ಯಗಳ ಕೋರ್ಟ್ ಗೆ ಕರೆದೊಯ್ಯುವ ಮಾಹಿತಿಯನ್ನು ಸಂಘಟನೆಯ ಕೆಲವು ವ್ಯಕ್ತಿಗಳು ಹಾಗೂ ಮುಂಗಡವಾಗಿ ಟಿ. ನಾಸಿರ್‌ಗೂ ನೀಡುತ್ತಿದ್ದ. ಇದಕ್ಕಾಗಿ ಚಾಂದ್ ಪಾಷಾಗೆ ನಾಸಿರ್ ಕಡೆಯಿಂದ ಹಣ ಸಂದಾಯವಾಗುತ್ತಿತ್ತು. ಉಗ್ರ ನಾಸಿರ್ ಮೂಲಕ ಜುನೈದ್‌ಗೆ ಎಲ್‌ಇಟಿ ಕಮಾಂಡರ್‌ಗಳ ಪರಿಚಯವಾಗಿದೆ. ಈ ಸಂಪರ್ಕ ಜಾಲವನ್ನು ಬಳಸಿಕೊಂಡು 2021ರಲ್ಲಿ ದೇಶ ತೊರೆದು ಆತ ಅಫ್ಘಾನಿಸ್ತಾನ ಸೇರಿದ್ದಾನೆ ಎಂಬ ಶಂಕೆ ಇದೆ. ಪ್ರಸ್ತುತ ವಿದೇಶದಲ್ಲೇ ನೆಲೆಸಿರುವ ಆತ, ಅಲ್ಲಿಂದಲೇ ತನ್ನ ಸಹಚರರ ಮೂಲಕ ನಗರದಲ್ಲಿ ವಿಧ್ವಂಸಕ ಕೃತ್ಯಕ್ಕೆ ತಯಾರಿ ನಡೆಸಿದ್ದ. ಈಗಾಗಲೇ ಜುನೈದ್ ಕುರಿತು ಇಂಟರ್‌ಪೋಲ್‌ಗೆ ಸಹ ಮಾಹಿತಿ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ ತಲೆಮರೆಸಿಕೊಂಡಿರುವ ಶಂಕಿತ ಉಗ್ರ ಜುನೈದ್ ಅಹಮ್ಮದ್ ತಾಯಿ ಅನೀಸ್ ಫಾತಿಮಾ ಜೈಲಿನಲ್ಲಿರುವ ಶಂಕಿತ ಉಗ್ರ ಟಿ. ನಾಸಿರ್ ಸೂಚನೆ ಮೇರೆಗೆ ಉಗ್ರ ಚಟುವಟಿಕೆಗಳಿಗೆ ನಿಧಿ ಸಂಗ್ರಹಿಸಲು ಮಗನಿಗೆ ಸೂಚಿಸಿರುವುದು ಬೆಳಕಿಗೆ ಬಂದಿದೆ.




ಉಗ್ರರ ರಹಸ್ಯ ಚಕ್ರ

## ಕುರಿ ವ್ಯಾಪಾರಿ ಈಗ ಕುಖ್ಯಾತ ಟೆರರಿಸ್ಟ್!

ಮೊದಲು ಕುರಿ ವ್ಯಾಪಾರಿ ಆಗಿದ್ದ ಮಹಮ್ಮದ್ ಜುನೈದ್ ಈಗ ಮೋಸ್ಟ್ ವಾಟೆಂಡ್ ಉಗ್ರನಾಗಿ ಬೆಳೆದು ದೇಶಾದ್ಯಂತ ಆತಂಕ ಮೂಡಿಸಿದ್ದಾನೆ. ಬೆಂಗಳೂರಿನ ಹೆಬ್ಬಾಳದ ಸುಲ್ತಾನ್‌ಪಾಳ್ಯದಲ್ಲಿ ತನ್ನ ಕುಟುಂಬದ ಜತೆ ಜುನೈದ್ ವಾಸವಾಗಿದ್ದ. ಹಣಕಾಸು ವಿಚಾರವಾಗಿ ಜೆ.ಸಿ. ನಗರದ ನೂರ್ ಅಹಮ್ಮದ್ ಹಾಗೂ ಜುನೈದ್ ಮಧ್ಯೆ ಜಗಳವಾಗಿತ್ತು.

2017ರ ಸೆಪ್ಟೆಂಬರ್ 30ರಂದು ತನ್ನ ಸಹಚರರ ಜತೆ ಸೇರಿ ನೂರ್‌ನನ್ನು ಅಪಹರಿಸಿ ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲೂಕಿಗೆ ಕರೆದೊಯ್ದು ಹತ್ಯೆ ಮಾಡಿದ್ದ. ಈ ಪ್ರಕರಣದಲ್ಲಿ ಜುನೈದ್ ಹಾಗೂ ಆತನ 21 ಮಂದಿ ಸಹಚರರನ್ನು ಆರ್.ಟಿ. ನಗರ ಪೊಲೀಸರು ಬಂಧಿಸಿದ್ದರು. ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಸೇರಿದ ಜುನೈದ್ ಹೊರ ಬರುವ ವೇಳೆಗೆ ಜಿಹಾದಿಯಾಗಿ ಬದಲಾಗಿದ್ದ. ಜೈಲಿನಲ್ಲಿ ಆತನಿಗೆ ಶಂಕಿತ ಉಗ್ರ ನಾಸಿರ್‌ನ ಸಂಪರ್ಕವಾಗಿತ್ತು. ಈತನ ಬ್ರೈನ್ ವಾಶ್ ಮಾಡಿದ್ದ ಉಗ್ರ ನಾಸಿರ್ ಭಯೋತ್ಪಾದಕನನ್ನಾಗಿಸಿದ್ದಾನೆ.

## ಮೂರು ಹೋಳಾಗಲಿದೆ ಪರಪ್ಪನ ಅಗ್ರಹಾರ ಜೈಲು

ಇತ್ತೀಚಿನ ವರ್ಷಗಳಲ್ಲಿ ವಿವಿಧ ಕಾರಣಗಳಿಗಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಅಕ್ರಮ ಚಟುವಟಿಕೆಗಳ ಬಗ್ಗೆ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಆಡಳಿತಾತ್ಮಕವಾಗಿ ಜೈಲನ್ನು ಮೂರು ಭಾಗವಾಗಿ ವಿಭಜಿಸಬೇಕೆಂದು ಕಾರಾಗೃಹ ಹಾಗೂ ಸುಧಾರಣೆ ಸೇವೆ ಇಲಾಖೆಯು ಪ್ರಸ್ತಾವನೆ ಸಲ್ಲಿಸಿತ್ತು. ಆಗಲೇ ಪರಪ್ಪನ ಅಗ್ರಹಾರ ಕಾರಾಗೃಹ ವಿಭಜನೆಗೆ ರಾಜ್ಯ ಸರ್ಕಾರ ಗ್ರೀನ್ ಸಿಗ್ನಲ್ ನೀಡಿತ್ತು. ಆಡಳಿತದಲ್ಲಿ ಪಾರದರ್ಶಕತೆ ತರುವ ಜೊತೆಗೆ ಅಕ್ರಮ ಚಟುವಟಿಕೆಗೆ ಶಾಶ್ವತ ಕಡಿವಾಣ ಹಾಕಲು ಸರ್ಕಾರ ಮುಂದಾಗಿದ್ದು ಶೀಘ್ರದಲ್ಲಿ ಪರಪ್ಪನ ಅಗ್ರಹಾರ ಜೈಲು ಮೂರು ಭಾಗಗಳಾಗಿ ವಿಭಜನೆಯಾಗಲಿದೆ.

☞ 12




ಜೈಲು ಅಧಿಕಾರಿಗಳಿಂದ ಖರೀದಿಯಲ್ಲಿ ಕೋಟ್ಯಾಂತರ ರೂ. ಅವ್ಯವಹಾರ....

# ಕಾಮುಕ ಮಹೇಶ್ ಪೊಲೀಸರ ಬಲೆಗೆ!

7 ☞

ಎಂದಿದ್ದಾನೆ. ಕೂಡಲೆ ನಂಜಯ್ಯ ಮಹೇಶನನ್ನು ಮನೆಯಿಂದ ಎಳೆದುಕೊಂಡು ಹೋಗಿ ಹೊರಗೆ ಬಿಟ್ಟು ಬಂದು ತಾಯಿಯನ್ನು ಎದ್ದೇಳಿಸಲು ಹೋಗಿದ್ದಾನೆ. ಆದರೆ ಆಕೆಯ ಪ್ರಾಣಪಕ್ಷಿ ಅದಾಗಲೇ ಹಾರಿ ಹೋಗಿದ್ದರಿಂದ ಅವಳು ಮಾತನಾಡುವುದಿಲ್ಲ, ಇದರಿಂದ ಗಾಬರಿಗೊಂಡ ಮಗ ಅವಳ ಬಾಯಿಗೆ ನೀರು ಬಿಟ್ಟು ನೋಡಿದ್ದಾನೆ. ಆದರೆ ಕೆಂಪಮ್ಮ ಉಸಿರು ಚೆಲ್ಲಿದ್ದರಿಂದ ಮಾತನಾಡುವುದಿಲ್ಲ, ಅಲ್ಲಿಗೆ ತಾಯಿ ಸತ್ತು ಹೋಗಿರುವುದು ನಂಜಯ್ಯನಿಗೆ ದೃಢವಾಗಿದೆ. ಕೂಡಲೆ ಮನೆಯ ಹೊರಗೆ ಎತ್ತಿಕೊಂಡು ಬಂದು ಜಗುಲಿಯ ಮೇಲೆ ಮಲಗಿಸಿದ್ದಾನೆ.

ಆಗ ಅಕ್ಕಪಕ್ಕದ ಮನೆಯವರಾದ ಕಮಲಮ್ಮ, ಪುಟ್ಟನಂಜಮ್ಮ, ಚಂದ್ರಮ್ಮ ಹಾಗೂ ಇತರರು ಬಂದಿದ್ದಾರೆ. ಈ ವೇಳೆ ಪಕ್ಕದ ಮನೆಯ ಜವರಯ್ಯನ ಮಗ ಪ್ರಸನ್ನ ಎಂಬಾತ ಬಂದು ನೀನೇ ಅಜ್ಜಿಯನ್ನು ಸಾಯಿಸಿದ್ದೀಯ ಎಂದು ಹೇಳಿ ಮಹೇಶನ ಜೊತೆ ಗಲಾಟೆ ಮಾಡಿ ಕಲ್ಲಿನಿಂದ ತಲೆಯ ಮುಂಭಾಗಕ್ಕೆ ಹೊಡೆದಿದ್ದಾನೆ. ಅಷ್ಟರಲ್ಲಾಗಲೇ ಗಲಾಟೆ ವಿಚಾರ ತಿಳಿದು ಸ್ಥಳಕ್ಕೆ ಪೊಲೀಸರು ಬಂದು ಮಹೇಶ್‌ನನ್ನು ಯಳಂದೂರಿಗೆ ಕರೆದುಕೊಂಡು ಹೋಗಿ ತಲೆಯಲ್ಲಿ ರಕ್ತ ಬರುತ್ತಿದ್ದರಿಂದ ಯಳಂದೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಾರೆ. ಚಿಕಿತ್ಸೆ ಪಡೆದ ಮಹೇಶ ಮೊದಲೇ ಭಯಗೊಂಡಿದ್ದರಿಂದ ಅಲ್ಲಿಂದ ಕೆಸ್ತೂರಿಗೆ ಹೋಗಿ ಮನೆಯಲ್ಲಿ ಹಾಕಿಕೊಂಡಿದ್ದ ಬಟ್ಟೆಯು (ಶರ್ಟ್) ರಕ್ತವಾಗಿದ್ದರಿಂದ ಅದನ್ನು ಬಿಚ್ಚಿಟ್ಟು ಬೇರೆ ಶರ್ಟ್ ಹಾಕಿಕೊಂಡು ಹೊರಬಂದಾಗ ಕೆಂಪಮ್ಮ ಮೃತಪಟ್ಟಿರುವುದು ತಿಳಿದಿದೆ. ಇದರಿಂದ ಭಯಗೊಂಡ ಹಂತಕ ಮಹೇಶ ಅಲ್ಲಿಂದ ಪರಾರಿಯಾಗಿದ್ದಾನೆ.


ಆರೋಪಿ ಮಹೇಶ

ವಿಷಯ ತಿಳಿದ ಕೂಡಲೆ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಚಾಮರಾಜನಗರ ಡಿವೈಎಸ್ಪಿ ಲಕ್ಷ್ಮಯ್ಯ, ಯಳಂದೂರು ವೃತ್ತ ನಿರೀಕ್ಷಕ ಶ್ರೀಕಾಂತ್, ಪಿಎಸ್‌ಐ ಆಕಾಶ್ ಭೇಟಿ ನೀಡಿ ಪರಿಶೀಲನೆ ನಡೆಸಿ ಗ್ರಾಮಸ್ಥರಿಂದ ಮಾಹಿತಿ ಪಡೆದು ಕೊಳ್ಳುತ್ತಾರೆ.

ಈ ವೇಳೆ ಮೃತಳ ಮಗ ನಂಜಯ್ಯ ನಮ್ಮ ತಾಯಿಯವರ ಮೈಮೇಲೆ ಮೇಲ್ನೋಟಕ್ಕೆ, ಯಾವುದೇ ಕುರುಹುಗಳ ಕಂಡು ಬಂದಿಲ್ಲವಾದ್ದರಿಂದ ನಮ್ಮ ತಾಯಿಯವರ ಸಾವಿನಲ್ಲಿ ನನಗೆ ಅನುಮಾನವಿದೆ ಎಂದು ನೀಡಿದ ದೂರಿನ ಮೇರೆಗೆ ಮೊದಲಿಗೆ ಯುಡಿಆರ್ ಸಂಖ್ಯೆ 09/2025 ಕಲಂ 194 ಬಿಎನ್‌ಎಸ್ ಕಾಯ್ದೆ ರಿತ್ಯಾ ದೂರು ದಾಖಲಿಸಿಕೊಳ್ಳುವ ಯಳಂದೂರು ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಕೈಗೊಂಡು ಕೆಂಪಮ್ಮಳ ಶವವನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ರವಾನಿಸುತ್ತಾರೆ. ಮಾರನೆಯ ದಿನ (10-07-2025ರಂದು) ಪೊಲೀಸರು ಮೃತಳ ಮಗ ನಂಜಯ್ಯ ಮತ್ತು ಸಂಬಂಧಿಕರು ಹಾಗೂ ಗ್ರಾಮಸ್ಥರನ್ನು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಕರೆಯಿಸಿಕೊಂಡು ಅವರ ಸಮ್ಮುಖದಲ್ಲೇ ಕೆಂಪಮ್ಮಳ ಶವ ತನಿಖೆ ನಡೆಸುತ್ತಾರೆ.

ಪೊಲೀಸರು ನಡೆಸಿದ ತನಿಖೆಯಲ್ಲಿ ಕೆಂಪಮ್ಮಳ ಶವವನ್ನು ಕೂಲಂಕುಶವಾಗಿ ನೋಡಿದಾಗ ಶವದ ಎರಡು ಕಾಲಿನ ತೊಡೆಯಲ್ಲಿ ಒತ್ತಿದಂತಹ ಸಣ್ಣ ಸಣ್ಣ ಗಾಯದ ಗುರುತುಗಳು ಹಾಗೂ ಮರ್ಮ ಸ್ಥಾನದಲ್ಲಿ ರಕ್ತ ಸ್ರಾವವಾಗಿ ಕಲೆಯಾಗಿರುವ ಗುರುತು ಇರುವುದು ಕಂಡು ಬರುತ್ತದೆ ಅಲ್ಲಿಗೆ ಪೊಲೀಸರ ಅನುಮಾನ ಬಲವಾಗುತ್ತದೆ. 75ರ ಇಳಿ ವಯಸ್ಸಿನ ವೃದ್ಧೆ ಕೆಂಪಮ್ಮನ ಮೇಲೆ ಅತ್ಯಾಚಾರ ವೆಸಗಲಾಗಿದೆ ಎಂಬುದು ಸಾಬೀತಾಗುತ್ತದೆ. ಅಲ್ಲಿಗೆ ಕೆಂಪಮ್ಮನನ್ನು ಅತ್ಯಾಚಾರ ನಡೆಸಿ ಕೊಂದು ಹಾಕಲಾಗಿದೆ ಎಂಬುದನ್ನು ದೃಢಪಡಿಸಿಕೊಂಡ ಯಳಂದೂರು ಠಾಣೆಯ ವೃತ್ತ ನಿರೀಕ್ಷಕ ಶ್ರೀಕಾಂತ್‌ರವರು ವೃದ್ಧೆ ಕೆಂಪಮ್ಮನ ವಾರಸುದಾರರು ನೀಡುವ ದೂರಿನ ಪ್ರಕರಣ ದಾಖಲಿಸಲು ನಿರ್ಧಾರ ಮಾಡಿದ್ದಾರೆ. ನಂತರ ಶವ ತನಿಖೆ ಮುಗಿಸುವ ಪೊಲೀಸರು ಅಲ್ಲಿನ ವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕೆಂಪಮ್ಮಳ ಶವವನ್ನು ವಾರಸುದಾರರಿಗೆ ನೀಡುತ್ತಾರೆ. ಸಂಬಂಧಿಕರು ಕೆಂಪಮ್ಮಳ ಶವವನ್ನು ಊರಿಗೆ ತಂದು ಗ್ರಾಮದ ಕುಲಪದ್ಧತಿಯಂತೆ ಸಂಸ್ಕಾರ ಮಾಡಿ ಮುಗಿಸುತ್ತಾರೆ.


ಅದರಂತೆ ದಿನಾಂಕ 11-07-2025 ರಂದು ರಾತ್ರಿ 9-15ರ ಸಮಯದಲ್ಲಿ ಮೃತಳ ಮಗ ನಂಜಯ್ಯ ಯಳಂದೂರು ಪೊಲೀಸ್ ಠಾಣೆಗೆ ಹಾಜರಾಗಿ ಲಿಖಿತ ದೂರೊಂದನ್ನು ನೀಡುತ್ತಾನೆ. ದೂರಿನಲ್ಲಿ ನಮ್ಮ ತಾಯಿ ಕೆಂಪಮ್ಮನವರು ದಿನಾಂಕ 09-07-2025ರಂದು ಮೃತಪಟ್ಟಿದ್ದ ಬಗ್ಗೆ ಅನುಮಾನ ವ್ಯಕ್ತಪಡಿಸಿ ಠಾಣೆಗೆ ದೂರು ನೀಡಿದ್ದು ದೂರಿನಲ್ಲಿ ನಮ್ಮ ಪಕ್ಕದ ಮನೆಯವರಾದ ಈಶ್ವರ ಗೌಡನಹಳ್ಳಿ ಗ್ರಾಮದ ನಮ್ಮ ಜನಾಂಗದ ಮಹೇಶ ಬಿನ್ ಲೇಟ್ ಮಾದಯ್ಯ ಎಂಬುವವರು ಮನೆಯ ಜಾಗದ ವಿಚಾರವಾಗಿ ಈ ಹಿಂದಿನಿಂದಲೂ ನಮ್ಮ ಜೊತೆ ಗಲಾಟೆ ಮಾಡುತ್ತಿದ್ದರು. ಮಹೇಶನು ಕುಡಿದು ಬೀದಿಯಲ್ಲಿ ಎಲ್ಲರೊಂದಿಗೆ ಗಲಾಟೆ ಮಾಡುವುದು ಬಯ್ಯುವುದು ಮಾಡುತ್ತಿದನು. ಆತನ ನಡವಳಿಕೆಯಿಂದ ಯಾರು ಸಹ ಆವರ ಮನೆಯವರ ಜೊತೆ ಮಾತನಾಡುತ್ತಿರಲಿಲ್ಲ.

ನಮ್ಮ ತಾಯಿ ಕೆಂಪಮ್ಮರವರಿಗೆ ನಾನು ಒಬ್ಬನೇ ಮಗನಾಗಿರುತ್ತೇನೆ, ನಮ್ಮ ತಾಯಿಗೆ 70 ವರ್ಷ ವಯಸ್ಸಾಗಿದ್ದು ಅವರಿಗೆ ಎರಡು ಕಣ್ಣು ಸಹ ಕಾಣಿಸುತ್ತಿರಲಿಲ್ಲ, ಆದ್ದರಿಂದ ಓಡಾಡಲು ಆಗದೆ ಮನೆಯಲ್ಲಿ ಮಲಗಿದ್ದಲ್ಲಿಯೇ ಇದ್ದು ಅವರಿಗೆ ದಿನನಿತ್ಯ ಕರ್ಮಗಳನ್ನು ಮಾಡಿಸಿ ಊಟ ತಿಂಡಿ ಕೊಡುತ್ತಿದ್ದೆ, ನಾನು ಕೆಲಸಕ್ಕೆ ಹೊರಗಡೆ ಹೋದಾಗ ನಮ್ಮ ಪಕ್ಕದ ಮನೆಯವರಿಗೆ ತಿಳಿಸಿ ಹೋಗುತ್ತಿದ್ದೆ, ಈ ದಿನ ದಿನಾಂಕ 09-07-2025 ರಂದು ಮಧ್ಯಾಹ್ನ 3:00 ಗಂಟೆಯಲ್ಲಿ ನಮ್ಮ ತಾಯಿಯವರಿಗೆ ಊಟ ಮಾಡಿಸಿ ಅವರನ್ನು ಮಲಗಿಸಿ, ನಾನು ಟೀ ಕುಡಿದು ಬರಲು ಅಂಗಡಿ ಕಡೆಗೆ ಹೋಗಿದ್ದೆ, ಸಂಜೆ 5:00 ಗಂಟೆಯಲ್ಲಿ ವಾಪಸ್ ಮನೆಗೆ ಬಂದು ಒಳಗೆ ಹೋಗಿ ನೋಡಿದಾಗ ನಮ್ಮ ತಾಯಿ ಮಲಗಿದ್ದ ಜಾಗದಿಂದ ಸರಿಸಿ ನಮ್ಮ ತಾಯಿಯ ಸಮೀಪದಲ್ಲಿ ಪಕ್ಕದ ಮನೆಯ ಮಹೇಶ ಮಲಗಿದ್ದನು. ಮಹೇಶನನ್ನು ನಾನು ಏಕೆ ನಮ್ಮ ಮನೆಗೆ ಬಂದು ಮಲಗಿದ್ದೀಯಾ ಎಂದು ಕೇಳಿದಾಗ ಮಹೇಶನು ಮದ್ಯಪಾನ ಮಾಡಿದ್ದು ಲೈಟ್ ಹಾಕಲು ಬಂದಿದೆ ಎಂದು ಹೇಳಿದನು. ಆಗ ಆತನನ್ನು ಹೊರಗೆ ಎಳೆದುಕೊಂಡು ಬಂದು ಬಿಟ್ಟು ಬಂದು ನಮ್ಮ ತಾಯಿಯನ್ನು ನೋಡಲಾಗಿ ಅವರು ಏನು ಮಾತನಾಡದ ಸ್ಥಿತಿಯಲ್ಲಿದ್ದು ಅವರನ್ನು ಮುಟ್ಟಿದಾಗ ಉಸಿರಾಡುತ್ತಿರಲಿಲ್ಲ, ಅವರಿಗೆ ನೀರು ಕುಡಿಸಿ ನೋಡಿದಾಗ ಅವರು ಮೃತಪಟ್ಟಿದ್ದರು. ತಕ್ಷಣ ನಮ್ಮ ಅಕ್ಕಪಕ್ಕದ ಮನೆಯವರಾದ ಕಮಲಮ್ಮ, ಪುಟ್ಟನಂಜಮ್ಮ ಚಂದ್ರಮ್ಮರವರುಗಳಿಗೆ ತಿಳಿಸಿದಾಗ ಅವರುಗಳು ಬಂದು ನಮ್ಮ ತಾಯಿಯವರನ್ನು ನೋಡಿ ನನ್ನನ್ನು ವಿಚಾರ ಮಾಡಿದಾಗ ಮಹೇಶ ನಮ್ಮ ತಾಯಿಯವರ ಹತ್ತಿರ ಮಲಗಿದ್ದನು ಎಂದು ತಿಳಿಸಿದೆ. ಆಗ ಅಕ್ಕಪಕ್ಕದವರು ಮಹೇಶನನ್ನು ಕೇಳಿದಾಗ ಅವರನ್ನು ಸಹ ಬೈದು ಹೊರಟು ಹೋದನು. ನಂತರ ನಮ್ಮ ತಾಯಿಯ ಶವವನ್ನು ಮನೆಯ ಹೊರಗೆ ತಂದು ಮಲಗಿಸಿದೆವು. ಈ ವಿಚಾರವನ್ನು ನಮ್ಮ ಗ್ರಾಮದ ಯಜಮಾನರುಗಳಿಗೆ ತಿಳಿಸಿರುತ್ತೇನೆ. ನಮ್ಮ ತಾಯಿಯವರ ಮೈಮೇಲೆ ಮೇಲ್ನೋಟಕ್ಕೆ ಯಾವುದೇ ಕುರುಹುಗಳು ಕಂಡು ಬಂದಿಲ್ಲವಾದ್ದರಿಂದ ನಮ್ಮ ತಾಯಿಯವರ ಸಾವಿನಲ್ಲಿ ನನಗೆ ಅನುಮಾನವಿದೆ ಎಂದು ನೀಡಿದ ದೂರಿನ ಮೇರೆಗೆ ಯಳಂದೂರು ಪೊಲೀಸ್ ಠಾಣೆ ಯುಡಿ.ಆರ್ ಸಂಖ್ಯೆ 09/2025 ಕಲಂ 194 ಬಿಎನ್‌ಎಸ್‌ಎಸ್ ರಿತ್ಯಾ ದೂರು ದಾಖಲಾಗಿತ್ತು.

ನಾನು ಮೇಲ್ಕಂಡಂತೆ ನೀಡಿದ ದೂರಿನ ಮೇರೆಗೆ ಪೊಲೀಸರು ನಮ್ಮ ಮನೆಯ ಬಳಿಗೆ ಭೇಟಿ ನೀಡಿ ತನಿಖೆ ಕೈಗೊಂಡು ಮೃತಪಟ್ಟಿದ್ದ ನಮ್ಮ ತಾಯಿಯ ಶವವನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದ್ದರು. ದಿನಾಂಕ: 10-07-2025ರಂದು ನಾನು ಮತ್ತು ನನ್ನ ಸಂಬಂಧಿಕರು ಹಾಗೂ ನಮ್ಮ ಗ್ರಾಮದವರು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಪೊಲೀಸರು ನಡೆಸಿದ ಶವ ತನಿಖೆಯಲ್ಲಿ ಭಾಗಿಯಾಗಿ ನಮ್ಮ ತಾಯಿಯವರ ಶವವನ್ನು ಕೂಲಂಕುಶವಾಗಿ ನೋಡಿದಾಗ ಅವರ ಎರಡು ಕಾಲಿನ ತೊಡೆಯಲ್ಲಿ ಒತ್ತಿದಂತ ಸಣ್ಣ ಸಣ್ಣ ಗಾಯದ ಗುರುತುಗಳು ಹಾಗೂ ಮರ್ಮ ಸ್ಥಾನದಲ್ಲಿ ರಕ್ತಸ್ರಾವವಾಗಿ ಕಲೆಯಾಗಿರುವ ಗುರುತು ಇರುವುದು ಕಂಡು ಬಂದಿರುತ್ತದೆ. ಶವ ತನಿಖೆ ಮುಗಿಸಿ ವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ನಮ್ಮ ತಾಯಿಯವರ ಶವವನ್ನು ನಮ್ಮ ಕುಲಪದ್ಧತಿಯಂತೆ ಸಂಸ್ಕಾರ ಮಾಡಿರುತ್ತೇವೆ.

ನಮ್ಮ ತಾಯಿಯವರ ದೇಹದ ಮೇಲೆ ಆಗಿರುವ ಗಾಯದ ಗುರುತುಗಳು ಹಾಗೂ ರಕ್ತಸ್ರಾವವಾಗಿರುವುದನ್ನು ನೋಡಿದಾಗ ದಿನಾಂಕ: 09-07-2025ರಂದು ಮಧ್ಯಾಹ್ನ 3-00 ಗಂಟೆಯಲ್ಲಿ ನಮ್ಮ ತಾಯಿ ಕೆಂಪಮ್ಮರವರಿಗೆ ನಾನು ಊಟ ಮಾಡಿಸಿ ಮನೆಯಲ್ಲಿ ಮಲಗಿಸಿ ಟೀ ಕುಡಿಯಲು ಮನೆಯಿಂದ ಹೊರಗೆ ಹೋದ ನಂತರ ನಮ್ಮ ಪಕ್ಕದ ಮನೆಯ ಮಹೇಶ ಮದ್ಯಪಾನ ಮಾಡಿಕೊಂಡು ಯಾರು ಇಲ್ಲದಿರುವುದನ್ನು ಗಮನಿಸಿ ನಮ್ಮ ಮನೆಗೆ ಬಂದು ಮನೆಯಲ್ಲಿ ಮಲಗಿದ್ದ ನಮ್ಮ ತಾಯಿಯವರನ್ನು ಅತ್ಯಾಚಾರ ನಡೆಸಿ, ಕೊಲೆ ಮಾಡಿ ತಲೆಮರೆಸಿಕೊಂಡಿರುವುದು ಕಂಡು ಬಂದಿರುತ್ತದೆ, ಆದ್ದರಿಂದ ನಮ್ಮ ತಾಯಿಯವರನ್ನು ಅತ್ಯಾಚಾರ ಮಾಡಿ, ಕೊಲೆ ಮಾಡಿರುವ ಮಹೇಶನ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ನಂಜಯ್ಯ ನೀಡಿರುವ ದೂರಿನ ಮೇರೆಗೆ ಮತ್ತೆ ಠಾಣಾ ಮೊಕದ್ದಮೆ ಸಂಖ್ಯೆ 135/2025 ಬಿಎನ್‌ಎಸ್ 2023 (ಯು/ಎಸ್ 64, 103(1)) ರಡಿ ಪ್ರಕರಣ ದಾಖಲಿಸಿಕೊಳ್ಳುತ್ತಾರೆ.

ಪ್ರಕರಣ ದಾಖಲಿಸಿಕೊಂಡ ಯಳಂದೂರು ಪೊಲೀಸರು ಸುಮ್ಮನೆ ಕೂರುವುದಿಲ್ಲ, ಕೂಡಲೆ ಕಾರ್ಯಪ್ರವೃತ್ತರಾದ ವೃತ್ತ ನಿರೀಕ್ಷಕ ಶ್ರೀಕಾಂತ್‌ರವರು ವೃದ್ಧೆಯ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಯ ಪತ್ತೆಗಾಗಿ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾರವರ ಮಾರ್ಗದರ್ಶನದಲ್ಲಿ ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರರವರ ನೇತೃತ್ವದಲ್ಲಿ ಪಿಎಸ್‌ಐ ಆಕಾಶ್‌ರವರ ನೇತೃತ್ವದ ತಂಡವೊಂದನ್ನು ರಚಿಸುತ್ತಾರೆ. ಈ ತಂಡ ವೃದ್ಧೆಯ ಕೊಲೆಯ ನಂತರ ಭಯಗೊಂಡು ಕೆಸ್ತೂರಿನಿಂದ ಪರಾರಿಯಾಗಿ ಮೈಸೂರಿಗೆ ಹೋಗಿ ಅಲ್ಲಿಯೇ ಸುತ್ತಾಡಿಕೊಂಡು ಕಾಲ ಕಳೆಯುತ್ತಿದ್ದ ಮಹೇಶ ಮಾರನೆಯ ದಿನ (ಜುಲೈ 12 ರಂದು) ತಿ. ನರಸೀಪುರಕ್ಕೆ ಬಂದಿರುವ ಬಗ್ಗೆ ಮಾಹಿತಿ ಕಲೆ ಹಾಕುತ್ತದೆ. ಅಂದು ಸುಮಾರು 5-15 ಗಂಟೆ ಸಮಯದಲ್ಲಿ ಆರೋಪಿ ಮಹೇಶ ಊರಿನ ಕಡೆ ಹೋಗಲು ಖಾಸಗಿ ಬಸ್ ನಿಲ್ದಾಣದಲ್ಲಿ ನಿಂತಿದ್ದಾಗ ವಶಕ್ಕೆ ಪಡೆದು ಯಳಂದೂರು ಪೊಲೀಸ್ ಠಾಣೆಗೆ ಕರೆದು ತಂದು ವೃತ್ತ ನಿರೀಕ್ಷಕ ಶ್ರೀಕಾಂತ್‌ರವರ ಮುಂದೆ ನಿಲ್ಲಿಸುತ್ತದೆ.


ಮಾಹಿತಿ ಪಡೆಯುತ್ತಿರುವ ಸಿಪಿಐ ಶ್ರೀಕಾಂತ್

ವೃತ್ತ ನಿರೀಕ್ಷಕ ಶ್ರೀಕಾಂತ್‌ರವರು ವಿಚಾರಣೆ ನಡೆಸಿದಾಗ ಆರೋಪಿ ಮಹೇಶ್ ನಾನು ವಯಸ್ಸಾದ ಕೆಂಪಮ್ಮಳ ಮೇಲೆ ಲೈಂಗಿಕ ಸಂಭೋಗ ಮಾಡಿರುವುದು ನನ್ನ ತಪ್ಪಾಗಿರುತ್ತದೆ ಎಂದು ಒಪ್ಪಿಕೊಂಡಿದ್ದಾನೆ. ಆದರೆ ಕೆಂಪಮ್ಮಳು ಯಾವ ಕಾರಣಕ್ಕಾಗಿ ಸತ್ತು ಹೋಗಿರುತ್ತಾಳೆ ಎಂಬುದು ನನಗೆ ಗೊತ್ತಿರುವುದಿಲ್ಲ, ನಾನು ಆಕೆಯನ್ನು ಸಾಯಿಸಿರುವುದಿಲ್ಲ, ಆದರೆ ಊರಿನಲ್ಲಿ ನಾನೇ ಕೆಂಪಮ್ಮಳನ್ನು ಸಾಯಿಸಿರುವುದಾಗಿ ಮಾತನಾಡಿಕೊಳ್ಳುತ್ತಿದ್ದರಿಂದ ಕೆಸ್ತೂರಿನಿಂದ ಪರಾರಿಯಾಗಿ ಮೈಸೂರಿಗೆ ಹೋಗಿ ಅಲ್ಲಿಯೇ ಸುತ್ತಾಡಿಕೊಂಡು ಕಾಲ ಕಳೆಯುತ್ತಿದ್ದೆ ಎಂದು ಪೊಲೀಸರ ಹೇಳಿಕೆಯಲ್ಲಿ ತಿಳಿಸಿದ್ದಾನೆ. ಆಗಿದ್ದರೆ ಕೆಂಪಮ್ಮಳ ಕೊಂದವರು ಯಾರು ಎಂದು ಪೊಲೀಸರ ತನಿಖೆಯಿಂದ ಬಯಲಾಗಬೇಕಿದೆ. ವಿಚಾರಣೆಯ ಬಳಿಕ ಆರೋಪಿಯನ್ನು ಜೈಲಿಗೆ ಇಟ್ಟು ಬಂದಿರುವ ಯಳಂದೂರು ಠಾಣೆಯ ವೃತ್ತ ನಿರೀಕ್ಷಕ ಶ್ರೀಕಾಂತ್‌ರವರು ಪ್ರಕರಣದ ತನಿಖೆ ಕೈಗೊಂಡಿದ್ದು ಸತ್ಯಾಸತ್ಯತೆ ಬಯಲಿಗೆಳೆಯಲಿದ್ದಾರೆ.

# ಕೊಡಗಿಗೆ ಬರ್ತಿರೋರು ಅಸ್ಸಾಂನವರಾ? ಬಾಂಗ್ಲಾ ನುಸುಳುಕೋರರಾ?

**ಕೊಡಗಿನಲ್ಲಿ ತೋಟದ ಕೆಲಸಕ್ಕೆ ಸ್ಥಳೀಯ ಕಾರ್ಮಿಕರು ಸಿಗದ ಕಾರಣದಿಂದಾಗಿ ಇವತ್ತು ವಲಸೆ ಕಾರ್ಮಿಕರನ್ನು ಆಶ್ರಯಿಸಲಾಗುತ್ತಿದೆ. ಸದ್ಯ ಅಸ್ಸಾಂನವರು ಎಂದು ಹೇಳಿಕೊಂಡು ಬರುತ್ತಿರುವ ಕಾರ್ಮಿಕರನ್ನು ಅವರ ಪೂರ್ವಾಪರ ಅರಿಯದೆ ಮಾಲೀಕರು ತಮ್ಮ ತೋಟದೊಳಗೆ ಸೇರಿಸಿಕೊಂಡು ಕೆಲಸ ಮಾಡಿಸುತ್ತಿದ್ದಾರೆ. ವಲಸೆ ಕಾರ್ಮಿಕರನ್ನು ತೋಟದಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಬೇಕಾದರೆ ಪೊಲೀಸ್ ಇಲಾಖೆ ಕೆಲವೊಂದು ನಿಬಂಧನೆಗಳನ್ನು ಮಾಡಿದ್ದು ಅದೆಷ್ಟು ತೋಟದ ಮಾಲೀಕರು ಪಾಲಿಸುತ್ತಿದ್ದಾರೋ ಗೊತ್ತಿಲ್ಲ. ಆದರೆ ವಲಸೆ ಕಾರ್ಮಿಕರ ಬಗ್ಗೆ ಎಚ್ಚರ ವಹಿಸಿ ಪೊಲೀಸ್ ಇಲಾಖೆಯ ನಿಯಮ ಪಾಲಿಸದೆ ಹೋದರೆ ಸಂಕಷ್ಟ ತಪ್ಪಿದಲ್ಲ...**

**ಕೊಡಗು**

✍ ಬಿ.ಎಂ. ಲವಕುಮಾರ್

ಹೊಟ್ಟೆಪಾಡಿಗಾಗಿ ದೂರದ ಉತ್ತರ ಭಾರತದಿಂದ ಕೊಡಗು, ಹಾಸನ, ಚಿಕ್ಕಮಗಳೂರು ಕಾಫಿ ತೋಟಗಳಿಗೆ ಕೆಲಸಕ್ಕಾಗಿ ಬರುವುದು ಕಳೆದ ಒಂದೂವರೆ ದಶಕದಿಂದ ಹೆಚ್ಚಾಗಿದೆ. ಅದರಲ್ಲೂ ಕೊಡಗಿಗೆ ಆಗಮಿಸುವವರ ಸಂಖ್ಯೆ ಜಾಸ್ತಿ ಅಂತಲೇ ಹೇಳಬೇಕಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಇವರ ಅನಿವಾರ್ಯತೆ ಇದೆ. ಏಕೆಂದರೆ ಸ್ಥಳೀಯವಾಗಿ



ಕೂಲಿ ಕಾರ್ಮಿಕರ ಕೊರತೆ ಎದ್ದು ಕಾಣಿಸುತ್ತಿದೆ. ಮೊದಲಿನಂತೆ ಈಗ ತೋಟದ ಕೆಲಸಕ್ಕೆ ಜನ ಬರುತ್ತಿಲ್ಲ ಹೀಗಾಗಿ ತೋಟ ಹೊಂದಿರುವ ಮಾಲೀಕರು ಕೆಲಸಕ್ಕೆ ಜನ ಸಿಕ್ಕಿದರೆ ಸಾಕು ಎಂಬ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಕೆಲಸಕ್ಕೆ ಬಂದವರ ಬಗ್ಗೆ ವಿಚಾರಣೆ ಮಾಡುವುದಕ್ಕಿಂತ ಹೆಚ್ಚಾಗಿ ಆಯಾಯ ಸಮಯಕ್ಕೆ ಕೆಲಸ ಮುಗಿದರೆ ಸಾಕೆಂಬ ಪರಿಸ್ಥಿತಿಗೆ ಬಂದಿದ್ದಾರೆ.

ಇದನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ವಲಸೆ ಕಾರ್ಮಿಕರು ಅಸ್ಸಾಂನಿಂದ ಬಂದಿರುವುದಾಗಿ ಹೇಳುತ್ತಾ ಕೆಲಸಕ್ಕೆ ಸೇರಿಕೊಳ್ಳುತ್ತಿದ್ದಾರೆ. ಹೀಗೆ ಬರುವವರು ನಿಜವಾಗಿಯೂ ಅಸ್ಸಾಂನವರಾ? ಅಥವಾ ಬಾಂಗ್ಲಾದವರು ಇದ್ದಾರಾ? ಹೀಗೊಂದು ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿದೆ. ಈ ಹಿಂದೆ ಕಾಫಿಕೊಯ್ಲು ಸಮಯದಲ್ಲಿ ಕೊಡಗಿಗೆ ಬಂದು ಅದಾದ ನಂತರ ಹೊರಟು ಹೋಗುತ್ತಿದ್ದರು. ಇತ್ತೀಚೆಗೆ ಅವರು ವರ್ಷಪೂರ್ತಿ ಇಲ್ಲಿದ್ದುಕೊಂಡೇ ಕೆಲಸಗಳನ್ನು ಮಾಡುತ್ತಿದ್ದಾರೆ. ಹೀಗಾಗಿ ಅವರಿಗೆ ಕೊಡಗಿನ ಬಗ್ಗೆ ಚೆನ್ನಾಗಿ ಗೊತ್ತಿದೆ. ಅಷ್ಟೇ ಅಲ್ಲದೆ ಬಹುತೇಕ ಗ್ರಾಮಗಳಲ್ಲಿ ಒಂಟಿ ಮನೆಗಳು ಜಾಸ್ತಿಯಿದ್ದು, ಮಕ್ಕಳು ಹೊರಗೆ ಕೆಲಸ ಮಾಡುತ್ತಿರುವುದರಿಂದ ವಯಸ್ಸಾದವರು ಮಾತ್ರ ಮನೆಯಲ್ಲಿರುತ್ತಾರೆ.

ಇದೀಗ ಎಲ್ಲಿಂದಲೋ ಬಂದ ಅಪರಿಚಿತ ಕಾರ್ಮಿಕರನ್ನು ತಮ್ಮ ತೋಟದಲ್ಲಿಟ್ಟುಕೊಳ್ಳುವುದು ಎಷ್ಟು ಸುರಕ್ಷಿತ ಎಂಬ ಪ್ರಶ್ನೆಗಳು ಎದುರಾಗುತ್ತಿವೆ. ಈಗಾಗಲೇ ಕೊಡಗಿನಲ್ಲಿ ಕೊಲೆ, ಕಳ್ಳತನ ಪ್ರಕರಣಗಳಲ್ಲಿ ವಲಸೆ ಕಾರ್ಮಿಕರು ಭಾಗಿಯಾಗಿರುವುದು ಗೊತ್ತಿರುವ ವಿಚಾರವೇ ಹೀಗಿದ್ದರೂ ಕಾರ್ಮಿಕರ ಪೂರ್ವಾಪರ ಅರಿಯದೆ ಅವರನ್ನು ಕೆಲಸಕ್ಕಿಟ್ಟುಕೊಳ್ಳುವುದೆಷ್ಟು ಸರಿ ಎಂಬ ಪ್ರಶ್ನೆಗಳು ಮೂಡುತ್ತಿವೆ. ಈ ನಡುವೆ ಕೊಡಗಿನವರು ಹೊರಗಿನಿಂದ ಬಂದವರನ್ನು ಅಸ್ಸಾಂನವರು ಎಂದೇ ಭಾವಿಸಿದ್ದಾರೆ. ಆದರೆ ಅಸ್ಸಾಂನವರು ಎಂದು ಹೇಳಿಕೊಂಡು ಬರುತ್ತಿರುವ ಕಾರ್ಮಿಕರು ನಿಜವಾಗಿಯೂ ಅಸ್ಸಾಂನವರಾ? ಎಂಬ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳು ಸಿಗುತ್ತಿಲ್ಲ.

ಬಾಂಗ್ಲಾದಿಂದ ಬಂದಿರುವ ಶಂಕೆ ಜಾಸ್ತಿಯೇ ಇದೆ. ಹೀಗಾಗಿ ಇವರ ನಡುವೆ ಯಾರು ಇದ್ದಾರೆ? ಅವರು ಹೊಟ್ಟೆಪಾಡಿಗಾಗಿ ಬಂದಿದ್ದಾರಾ? ಹೊಟ್ಟೆಪಾಡು ನೆಪದಲ್ಲಿ ಬೇರೆನೋ ಚಟುವಟಿಕೆ ನಡೆಸುತ್ತಿದ್ದಾರಾ? ಎಂಬಿತ್ಯಾದಿ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಾ ಹೋಗುತ್ತಿವೆ. ನಿಜ ಹೇಳಬೇಕೆಂದರೆ ಕೊಡಗಿಗೆ ವಲಸೆ ಕಾರ್ಮಿಕರು ಇವತ್ತು ನಿನ್ನೆಯಿಂದ ಬರುತ್ತಿಲ್ಲ. ಹಿಂದಿನಿಂದಲೂ ಬರುತ್ತಿದ್ದಾರೆ. ಬಹಳಷ್ಟು ವರ್ಷಗಳ ಹಿಂದೆ ದಕ್ಷಿಣ ಕನ್ನಡದಿಂದ ಕೆಲಸ ಮಾಡಲೆಂದು ಬಂದವರು ಇಲ್ಲಿ ನೆಲೆಯೂರಿ ಕೊಡಗಿನವರೇ ಆಗಿದ್ದಾರೆ.

ಆ ನಂತರ ತಮಿಳುನಾಡಿನಿಂದ ಕಾಫಿ, ಟೀ ಎಸ್ಟೇಟ್‌ಗಳಿಗೆ ಬಂದು ಅವರು ಇಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ. ಇನ್ನು ಕೇರಳದಿಂದಲೂ ದೊಡ್ಡ ಸಂಖ್ಯೆಯಲ್ಲಿ ಇಲ್ಲಿಗೆ ಬಂದು ನೆಲೆಯೂರಿದ್ದಾರೆ. ಆದರೆ ಇದುವರೆಗೆ ಕೊಡಗಿಗೆ ಬೇರೆ ಜಿಲ್ಲೆ, ಬೇರೆ ರಾಜ್ಯಗಳಿಂದ ಬಂದು ನೆಲೆಯೂರಿದ್ದಾರೆ. ಆದರೆ ಅಸ್ಸಾಂ ಹೆಸರಿನಲ್ಲಿ ಬರುತ್ತಿರುವವರ ಮೇಲೆ ಸಾಕಷ್ಟು ಅನುಮಾನಗಳು ಮೂಡುತ್ತಿವೆ.

ಎರಡ್ಮೂರು ದಶಕಗಳ ಹಿಂದಕ್ಕೆ ಹೋದರೆ ಕೇರಳದಿಂದ ಶುಂಠಿ ಕೃಷಿ ಮಾಡಲೆಂದು ದೊಡ್ಡ ಮಟ್ಟದಲ್ಲಿಯೇ ಕಾರ್ಮಿಕರು ಬಂದಿದ್ದರು. ಇವರು ಇಲ್ಲಿ ಪಾಳು ಬಿದ್ದಿದ್ದ ಜಾಗಗಳನ್ನು ಭೋಗ್ಯಕ್ಕೆ ಪಡೆದು ಅಲ್ಲಿ ಶುಂಠಿ ಕೃಷಿ ಮಾಡಿದ್ದರು. ಅಷ್ಟೇ ಅಲ್ಲದೆ ಶುಂಠಿ ಕೃಷಿ ಜತೆಗೆ ಗಾಂಜಾದಂತಹ ಬೆಳೆಗಳನ್ನು ಬೆಳೆದು ತಿಜೋರಿ ತುಂಬಿಸಿಕೊಂಡು ಹೋಗಿದ್ದರು. ಆದರೆ ಅನಂತರ ಅಲ್ಲಲ್ಲಿ ಗಾಂಜಾ ಬೆಳೆದ ಪ್ರಕರಣಗಳು ಪತ್ತೆಯಾಗ ತೊಡಗಿದವು. ಅವತ್ತು ಅವರು ಅಂಟಿಸಿದ ಗಾಂಜಾದಿಂದ ಇವತ್ತಿಗೂ ಇಲ್ಲಿನ ಕೆಲವರು ಹೊರಗೆ ಬಂದಿಲ್ಲ. ಆಗಾಗ್ಗೆ ಗಾಂಜಾ ಪ್ರಕರಣಗಳು ಪತ್ತೆಯಾಗುತ್ತಲೇ ಇವೆ. ಹಲವು ಯುವಕರು ಗಾಂಜಾಕ್ಕೆ ಬಲಿಯಾಗಿ ಬದುಕನ್ನೇ ಕಳೆದು ಕೊಂಡಿದ್ದಾರೆ.



ಮೊದಲೆಲ್ಲ ಕೊಡಗಿಗೆ ತೋಟದ ಕೆಲಸಕ್ಕಾಗಿ ಮೈಸೂರು, ಚಾಮರಾಜನಗರ ಮಂಡ್ಯ ಮೊದಲಾದ ಕಡೆಗಳಿಂದ ಕಾರ್ಮಿಕರು ಬರುತ್ತಿದ್ದರು ಒಂದಷ್ಟು ಸಮಯವಿದ್ದು ಕೆಲಸ ಮುಗಿಸಿಕೊಂಡು ತಮ್ಮೂರಿಗೆ ತೆರಳುತ್ತಿದ್ದರು. ಆದಾದ ನಂತರ ಆ ಕಡೆಗಳಿಂದ ಕೆಲಸಕ್ಕೆ ಬರುವವರ ಸಂಖ್ಯೆ ಕಡಿಮೆಯಾಯಿತು. ಹೀಗಾಗಿ ಕಾರ್ಮಿಕರ ಕೊರತೆ ಬೆಳೆಗಾರರನ್ನು ಕಾಡತೊಡಗಿತು. ಕೂಲಿ ಕೈತುಂಬಾ ಕೊಡ್ತೀನಿ ಎಂದರೂ ಯಾರೂ ಬಾರದೆ ಇದ್ದಾಗ ಬೆಳೆಗಾರರಿಗೂ ಯಾರಾದರೂ ಸಿಕ್ಕರೆ ಸಾಕಪ್ಪಾ ಎಂಬ ಆಲೋಚನೆ ಬಂದಿತ್ತು. ಇದೇ ವೇಳೆಗೆ ಅಸ್ಸಾಂನ ಒಂದಷ್ಟು ಮಂದಿ ಕೊಡಗಿಗೆ ಎಂಟ್ರಿ ಕೊಟ್ಟಿದ್ದರು. ಮಾಮೂಲಿ ಕೂಲಿಗಿಂತ ಕಡಿಮೆ ಕೂಲಿಗೆ ದುಡಿಯಲು ತಯಾರಿದ್ದರು. ಜಿಲ್ಲೆಯ ಯಾವುದೇ ಮೂಲೆಯಲ್ಲಿಯೂ ಇವರು ವಾಸ ಮಾಡಲು ತಯಾರಿದ್ದರು.

ಇವರನ್ನು ಹಿಂದೆಮುಂದೆ ನೋಡದೆ ಹಲವು ಬೆಳೆಗಾರರು ತಮ್ಮ ತೋಟದಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಲು ಮುಂದಾದರು. ತದ ನಂತರ ಅಸ್ಸಾಂನಿಂದ ಸಾವಿರಾರು ಸಂಖ್ಯೆಯಲ್ಲಿ ಬರಲು ಆರಂಭಿಸಿದರು. ಈ ವೇಳೆ ಅಲ್ಲಲ್ಲಿ ಅಪರಾಧ ಚಟುವಟಿಕೆಗಳು ನಡೆಯಲು ಶುರುವಾದಾಗ ಪೊಲೀಸ್ ಇಲಾಖೆ ಇಲ್ಲಿನ ಬೆಳೆಗಾರರಿಗೆ ಕಠಿಣ ಸೂಚನೆ ನೀಡಿತು. ಯಾವುದೇ ವಲಸೆ ಕಾರ್ಮಿಕನನ್ನು ಕೆಲಸಕ್ಕೆ ಸೇರಿಸುವ ಮುನ್ನ ಆತನ ಆಧಾರ್ ಕಾರ್ಡ್ ಪರಿಶೀಲಿಸಬೇಕು, ಅಷ್ಟೇ ಅಲ್ಲದೆ ಆತನ ಭಾವಚಿತ್ರ ಸಹಿತ ಮಾಹಿತಿಯನ್ನು ಸ್ಥಳೀಯ ಪೊಲೀಸ್ ಠಾಣೆಗೆ ನೀಡುವಂತೆ ತಿಳಿಸಲಾಯಿತು. ಆದರೆ ಇದರ ಪಾಲನೆ ಎಷ್ಟರ ಮಟ್ಟಿಗೆ ಆಗುತ್ತಿದೆ ಎಂಬುದೇ ನಿಗೂಢವಾಗಿದೆ.



ಈ ಹಿಂದೆ ಡಿಸೆಂಬರ್ ಸಮಯದಲ್ಲಿ ಜಿಲ್ಲೆಗೆ ಆಗಮಿಸುತ್ತಿದ್ದ ಅಸ್ಸಾಂನ ಕಾರ್ಮಿಕರು ಕಾಫಿ ಕೊಯ್ಲು ಮುಗಿಯುತ್ತಿದ್ದಂತೆಯೇ ತಮ್ಮೂರಿಗೆ ಹೊರಟು ಬಿಡುತ್ತಿದ್ದರು. ಆದರೀಗ ಎಲ್ಲ ಸಮಯದಲ್ಲಿಯೂ ಇಲ್ಲಿ ಕಾಣಸಿಗುತ್ತಾರೆ. ಹೀಗಾಗಿ ಇವರು ನಿಜವಾಗಿ ಅಸ್ಸಾಂ ನವರೇ? ಅಥವಾ ಬಾಂಗ್ಲಾದ ನುಸುಳು ಕೋರರೇ ಎಂಬ ಅನುಮಾನಗಳು ಹುಟ್ಟುತ್ತಿವೆ. ಅದರಲ್ಲೂ ದಿನದಿಂದ ದಿನಕ್ಕೆ ಉತ್ತರ ಭಾರತದ ಕಾರ್ಮಿಕರು ಅಲ್ಲಲ್ಲಿ ಕಾಣಿಸುತ್ತಿದ್ದು, ಇವರೆಲ್ಲರೂ ಉತ್ತರ ಭಾರತದವರೇ ಆಗಿದ್ದರೆ ಯಾವುದೇ ತೊಂದರೆ ಇಲ್ಲ. ಆದರೆ ಬೇರೆ ಉದ್ದೇಶವನ್ನಿಟ್ಟುಕೊಂಡು ಬಂದಿರುವ ನುಸುಳುಕೋರರಾದರೆ ಮುಂದೇನು ಗತಿ ಎಂಬ ಪ್ರಶ್ನೆಗಳನ್ನು ಜನ ಕೇಳುತ್ತಿದ್ದಾರೆ.



ಸದ್ಯ ಕೊಡಗು ಜಿಲ್ಲೆಯ ಮಡಿಕೇರಿ, ಸುಂಟಿಕೊಪ್ಪ, ಕುಶಾಲನಗರ, ವಿರಾಜಪೇಟೆ, ಗೋಣಿಕೊಪ್ಪಲು, ನಾಪೋಕ್ಲು ಸೇರಿದಂತೆ ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ನಡೆಯುವ ವಾರದ ಸಂತೆಗಳಲ್ಲಿ ಹೊಸ ಮುಖಗಳೇ ಹೆಚ್ಚಾಗಿ ಕಂಡು ಬರುತ್ತಿವೆ. ಸಂತೆಗಳಲ್ಲಿ ವ್ಯಾಪಾರ ಮಾಡುವುದರಿಂದ ಆರಂಭಿಸಿ ಹೋಂ ಸ್ಟೇ, ರೆಸಾರ್ಟ್‌ಗಳಲ್ಲಿ ರೂಮ್ ಬಾಯ್ ತನಕವೂ ಹೊರ ರಾಜ್ಯದ ಕಾರ್ಮಿಕರೇ ಹೆಚ್ಚಾಗಿ ಕಾಣಸಿಗುತ್ತಿದ್ದಾರೆ. ಅಷ್ಟೇ ಆಗಿದ್ದರೆ ತಲೆಕೆಡಿಸಿಕೊಳ್ಳಬೇಕಾಗಿರಲಿಲ್ಲ ಆದರೆ ಇತ್ತೀಚೆಗೆ ಕೆಲವು ಅಪರಾಧ ಪ್ರಕರಣಗಳಲ್ಲೂ ಹೊರ ರಾಜ್ಯದವರು ಭಾಗಿಯಾಗುತ್ತಿರುವುದು ಜಿಲ್ಲೆಯ ಜನ ಎಚ್ಚೆತ್ತುಕೊಳ್ಳುವಂತೆ ಮಾಡಿದೆ.

ಕೊಡಗಿಗೆ ಬರುವ ವಲಸೆ ಕಾರ್ಮಿಕರು ಜಿಲ್ಲಾದ್ಯಂತ ಚದುರಿ ಹೋಗುತ್ತಿದ್ದಾರೆ. ಇದರಿಂದ ಅಕ್ರಮ ವಲಸಿಗರನ್ನು ಪತ್ತೆ ಮಾಡುವುದು ಕಷ್ಟವಾಗುತ್ತಿದೆ. ಹೀಗಾಗಿ ಕೆಲಸ ನೀಡುವ ಕಾಫಿ ತೋಟದ ಮಾಲೀಕರು, ಕಾರ್ಮಿಕರನ್ನು ಕರೆ ತರುವ ದಲ್ಲಾಳಿಗಳು ಆಯಾ ಕಾರ್ಮಿಕರ ಪೂರ್ವಾಪರ



ವಿಚಾರಿಸಿ ಬಳಿಕ ಕೆಲಸಕ್ಕೆ ನೇಮಿಸಿಕೊಳ್ಳುವಂತೆ ಪೊಲೀಸರು ಹೇಳುತ್ತಿದ್ದಾರೆ. ಒಂದು ವೇಳೆ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ಕೂಡಲೇ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡುವಂತೆ ಕೊಡಗು ಎಸ್ಪಿ ರಾಮರಾಜನ್ ಮನವಿ ಮಾಡುತ್ತಾ ಬಂದಿದ್ದಾರೆ. ಆದರೆ ತೋಟದ ಮಾಲೀಕರು ರಿಸ್ಕ್ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಅವರಿಗೆ ತಮ್ಮ ತೋಟದ ಕೆಲಸ ಆದರೆ ಸಾಕು.. ನಮಗೇಕೆ ಆ ಉಸಾಬರಿ ಎಂಬಂತೆ ಮೌನ ತಾಳುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ..

ಹೊಟ್ಟೆಪಾಡಿಗೆ ಕೆಲಸ ಹುಡುಕಿಕೊಂಡು ಬಂದಿರುವ ಕಾರ್ಮಿಕರೆಲ್ಲರೂ ಅಪರಾಧ ಹಿನ್ನಲೆಯವರು ಎಂದು ಹೇಳಲಾಗದು. ಆದರೆ ಜಿಲ್ಲೆ, ರಾಜ್ಯವನ್ನು ಹೊರತುಪಡಿಸಿ ದೂರದ ಉತ್ತರ ಭಾರತದಿಂದ ಬರುವ ಕೆಲಸಗಾರರನ್ನು ಅವರ ಪೂರ್ವಾಪರ ಅರಿಯದೆ ಕೆಲಸಕ್ಕೆ ಸೇರಿಸಿಕೊಳ್ಳುವುದು, ಅವರ ಮೇಲೆ ನಂಬಿಕೆಯಿಡುವುದು ಒಳ್ಳೆಯದಲ್ಲ. ಆದ್ದರಿಂದ ವಲಸೆ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಮುನ್ನ ಅವರ ಬಗ್ಗೆ ದಾಖಲೆಗಳನ್ನು ಕಲೆ ಹಾಕುವುದು ಮತ್ತು ಅವು ಅಸಲಿಯೋ? ನಕಲಿಯೋ? ಎಂಬುದನ್ನು ಪರಿಶೀಲಿಸುವುದು ಕೂಡ ಬಹುಮುಖ್ಯವೇ. ಅಷ್ಟಕ್ಕೆ ನಿಲ್ಲಿಸದೆ ತಾವು ಕೆಲಸಕ್ಕಿಟ್ಟುಕೊಂಡಿರುವ ಕಾರ್ಮಿಕರ ಮಾಹಿತಿಯನ್ನು ಸ್ಥಳೀಯ ಪೊಲೀಸ್ ಠಾಣೆಗೆ ನೀಡುವುದು ಅಗತ್ಯವಾಗಿದೆ. ಇಲ್ಲದೇ ಹೋದರೆ ಮುಂದಿನ ದಿನಗಳಲ್ಲಿ ಕೊಡಗಿಗೆ ಸಂಕಷ್ಟ ಎದುರಾಗುವುದರಲ್ಲಿ ಎರಡು ಮಾತಿಲ್ಲ. ☯

# ಪೊದೆಯಲ್ಲಿ ಉರುಳಾಟ; ಮನೆ ಬಾಗಿಲಲ್ಲೇ ಹತ್ಯೆ!

**ಗಂಡ ಹೆಂಡತಿಯ ಮಧ್ಯೆ ಅನುಮಾನದ ಹುತ್ತ ಬೆಳೆದಿತ್ತು. ಪತ್ನಿಯ ಪರಪುರುಷನೊಂದಿಗಿನ ಸಂಬಂಧ ಪತಿಯ ಸಂಶಯಕ್ಕೆ ಕಾರಣವಾಗಿತ್ತು. ಇದರಿಂದಾಗಿಯೇ ಅವರಿಬ್ಬರ ಮಧ್ಯೆ ದಿನನಿತ್ಯ ಗಲಾಟೆಗಳು ನಡೆಯುತ್ತಿತ್ತು. ಊರವರು ಮತ್ತು ಸಂಬಂಧಿಕರು ಸೇರಿ ಹಲವು ಬಾರಿ ಮಾತುಕತೆ ನಡೆಸಿ ಗಂಡ ಹೆಂಡಿರ ಮಧ್ಯದ ಬಿರುಕನ್ನು ತೇಪೆ ಹಚ್ಚಲು ಪ್ರಯತ್ನಿಸಿದ್ದರು. ಆದರೆ ಆಕೆ ತನ್ನ ಹಗ್ಗ ಕಡಿಯುವ ಚಾಳಿಯನ್ನು ಬಿಡಲಿಲ್ಲ. ಪರಿಣಾಮವಾಗಿ ತನ್ನ ಮಕ್ಕಳ ಎದುರೇ ಕೈ ಹಿಡಿದ ಪತಿಯಿಂದಲೇ ಧಾರುಣವಾಗಿ ಹತ್ಯೆಗೀಡಾಗಿದ್ದಾಳೆ. ಇಂತಹ ಘಟನೆ ನಡೆದದ್ದು ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳ್ತಂಗಡಿ ತಾಲೂಕಿನ ತೆಕ್ಕಾರು ಗ್ರಾಮದ ಬಾಜಾರು ಎಂಬಲ್ಲಿ. ಜುಲೈ 17ರಂದು ಮಧ್ಯಾಹ್ನದ ವೇಳೆಗೆ ಈ ಘಟನೆ ನಡೆದಿದೆ. ಸ್ಥಳೀಯವಾಗಿ ಸಾಕಷ್ಟು ಕುತೂಹಲ ಕೆರಳಿಸಿರುವಂತಹ ಈ ಪ್ರಕರಣದ ಆರೋಪಿಯನ್ನು ಉಪ್ಪಿನಂಗಡಿ ಠಾಣಾ ಪೊಲೀಸರು ಬಂಟ್ವಾಳದ ಸರಕಾರಿ ಆಸ್ಪತ್ರೆಯಿಂದಲೇ ಎತ್ತಾಕಿಕೊಂಡು ಹೋಗಿ ಬಂಧಿಸಿ ಜೈಲಿಗೆ ಅಟ್ಟಿದ್ದಾರೆ. ಈ ಪ್ರಕರಣದಲ್ಲಿ ಶಾಮೀಲಾಗಿದ್ದಾನೆ ಎನ್ನಲಾಗಿದ್ದಂತಹ ಸ್ಥಳೀಯ ಗ್ರಾಮ ಪಂಚಾಯತ್‌ನ ಅಧ್ಯಕ್ಷೆಯ ಪತಿಯ ಕುರಿತಾಗಿ ತನಿಖೆ ನಡೆಯುತ್ತಿದೆ.**

**ಮಂಗಳೂರು**

**✍ ಮೋಹನ್ ಬೋಳಂಗಡಿ**



ಕೊಲೆಯಾದ ಝೀನತ್

ಜುಲೈ 17 ಬೆಳಿಗ್ಗೆಸುಮಾರು 10 ಗಂಟೆಯ ವೇಳೆ. ತೆಕ್ಕಾರು ಗ್ರಾಮದ ಬಾಜಾರಿನ ಕೂಲಿ ಕಾರ್ಮಿಕ ರಫೀಕ್ ಎಂಬವರ ಪತ್ನಿ ಝೀನತ್ (40)ಎಂಬಾಕೆ ಹಿಂದಿನ ದಿನ ಕಟ್ಟಿದ್ದ ಬೀಡಿಯನ್ನು ಬ್ರಾಂಚಿಗೆ ಕೊಡಲು ಹೋಗಿದ್ದರು. ಮನೆಯಲ್ಲಿ ಮಕ್ಕಳಿಬ್ಬರೇ ಇದ್ದರು. ಅಷ್ಟರಲ್ಲಿ ಆ ಮಕ್ಕಳ ತಂದೆ ರಫೀಕ್ ಬೈಕಿನಲ್ಲಿ ಮನೆಗೆ ಬಂದಿದ್ದ. ಆತ ಆ ದಿನ ಬೆಳಿಗ್ಗೆ ಕೆಲಸಕ್ಕೆಂದು ಹೋಗಿದ್ದ. ಆದರೆ ಕೆಲಸ ಸಿಗದೇ ಇದ್ದುದರಿಂದ ಮನೆಗೆ ಬಂದಿದ್ದ. ಮಕ್ಕಳನ್ನು ಕೇಳಿದಾಗ ತಾಯಿ ಬೀಡಿ ಬ್ರಾಂಚಿಗೆ ಬೀಡಿ ಕೊಡಲು ಹೋಗಿದ್ದಾರೆ ಎಂಬ ಉತ್ತರ ಸಿಕ್ಕಿದೆ. ಮೊದಲೇ ಸಂಶಯದ ಪಿಶಾಚಿಯಾಗಿದ್ದಂತಹ ರಫೀಕ್ ನೇರವಾಗಿ ಬೀಡಿ ಬ್ರಾಂಚ್‌ಗೆ ಹೋಗಿದ್ದಾನೆ. ಅಲ್ಲಿ ಪತ್ನಿ ಝೀನತ್ ಇರಲಿಲ್ಲ. ವಿಚಾರಿಸಿದಾಗ ಬರಲಿಲ್ಲ ಎಂಬ ಉತ್ತರ ಸಿಕ್ಕಿದೆ. ಮನೆಯಿಂದ ಹೊರಟ ಝೀನತ್ ಎಲ್ಲಿಗೆ ಹೋಗಿದ್ದಾಳೆ ಎಂದು ರಸ್ತೆಯ ಬದಿಯಲ್ಲಿ ಹುಡುಕಿ ಕೊಂಡು ಬಂದಾಗ ರಸ್ತೆಯ ಪಕ್ಕದಲ್ಲಿದ್ದಂತಹ ಪೊದೆಯೊಳಗೆ ಏನೋ ಸರಿದಾಡಿದಂತಹ ಶಬ್ದ ಕೇಳಿದೆ. ಕುತೂಹಲದಿಂದ ಬೈಕ್‌ನಿಲ್ಲಿಸಿ ಪೊದೆಯತ್ತಕ್ಕೆ ಓಡಿದಾಗ ಪೊದೆಯೊಳಗಿನಿಂದ ಝೀನತ್ ಬಟ್ಟೆಸರಿಮಾಡಿಕೊಂಡು ಹೊರಗೆ ಬಂದಿದ್ದಳು. ಎದುರಿಗೆ ಗಂಡನನ್ನು ನೋಡಿದವಳೇ ಹೆದರಿಕೆಯಿಂದ ಮನೆಯತ್ತ ಓಡಿದ್ದಳು. ಆ ಸಂದರ್ಭದಲ್ಲಿ ಪೊದೆಯೊಳಗಿನಿಂದ ಸ್ಥಳೀಯ ಪಂಚಾಯತ್ ಅಧ್ಯಕ್ಷೆಯ ಗಂಡ ಹ್ಯಾರಿಸ್ ಹೊರ ಬಂದಿದ್ದ. ಆತ ಕೂಡಾ ಝೀನತ್‌ಳ ಮನೆಯತ್ತಲೇ ಓಡಿದ್ದ. ಮನೆಯಂಗಳದಲ್ಲಿ ಝೀನತ್ ಗಂಡ ರಫೀಕ್‌ನ ಕೈಗೆ ಸಿಕ್ಕಿಬಿದ್ದಳು. ಆಗ ಆಕೆ ತನ್ನ ಗಂಡನನ್ನು ಬಲವಾಗಿ ದೂಡಿದಳು. ಅದೇ ಸಂದರ್ಭದಲ್ಲಿ ಹ್ಯಾರಿಸ್ ಅಲ್ಲಿಗೆ ಬಂದುಬಿಟ್ಟಿದ್ದ. ಆತನನ್ನು ರಫೀಕ್ ಹಿಡಿಯಲು ಹೋದಾಗ ಹ್ಯಾರಿಸ್ ತಳ್ಳಿದ. ಕೆಳಗೆ ಬಿದ್ದ ಆತನ ತಲೆಗೆ ಗಾಯವಾಯಿತು. ನೋವುಂಟಾದಾಗ ಕೆರಳಿದ ರಫೀಕ್ ಮನೆಯೊಳಗೆ ಹೋಗಿ ಚೂರಿ ಹಿಡಿದುಕೊಂಡು ಹೊರಗೆ ಬಂದಾಗ ಹ್ಯಾರಿಸ್ ಕಾಲು ಕಿತ್ತಿದ್ದ. ಬೊಬ್ಬೆ ಹೊಡೆಯುತ್ತಾ ನಿಂತಿದ್ದ ಝೀನತ್‌ಳ ಎದೆಗೆ ಚೂರಿಯಿಂದ ಇರಿದಿದ್ದ. ಗಂಭೀರ ಗಾಯಗೊಂಡ ಆಕೆ ನೆಲಕ್ಕೆ ಬಿದ್ದಾಗ ಬೆದರಿದ ರಫೀಕ್ ಬೈಕಿನಲ್ಲಿ ಪರಾರಿಯಾಗಿದ್ದಾನೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಝೀನತ್‌ಳನ್ನು ಸ್ಥಳೀಯರು ಮೊದಲಿಗೆ ಉಪ್ಪಿನಂಗಡಿ ಆಸ್ಪತ್ರೆಗೆ ಮತ್ತೇ ಪುತ್ತೂರು ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿ ಯಾಗದೆ ಮೃತಪಟ್ಟಳು.


ಹ್ಯಾರಿಸ್

**ಬಂದರು ಪೊಲೀಸರು**

ಘಟನೆಯ ಬಗ್ಗೆ ಮಾಹಿತಿ ತಿಳಿಯುತ್ತಲೇ ಉಪ್ಪಿನಂಗಡಿ ಠಾಣಾ ಎಸ್‌ಐ ಅವಿನಾಶ್ ಘಟನಾಸ್ಥಳಕ್ಕೆ ಬಂದಿದ್ದರು. ಸ್ಥಳೀಯರು ನೀಡಿದ ಮಾಹಿತಿಯಂತೆ ಆರೋಪಿ ರಫೀಕ್‌ನನ್ನು ಪತ್ತೆ ಹಚ್ಚಲು ಮುಂದಾದಾಗ ಆತ ಗಾಯಗೊಂಡು ಬಂಟ್ವಾಳ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾನೆ ಎಂಬ ಮಾಹಿತಿ ಲಭ್ಯವಾಗಿತ್ತು. ತಕ್ಷಣ ಆಸ್ಪತ್ರೆಗೆ ಹೋದ ಎಸ್‌ಐ ಅವಿನಾಶ್ ರಫೀಕ್‌ನನ್ನು ಆಸ್ಪತ್ರೆಯಿಂದಲೇ ಎತ್ತಾಕಿಕೊಂಡು ಠಾಣೆಗೆ ಕರೆತಂದಿದ್ದರು. ತದನಂತರ ಹಿರಿಯ ಅಧಿಕಾರಿಗಳಾದ ಎಸ್ಪಿ ಕೆ. ಅರುಣ್, ಎಡಿಷನಲ್ ಎಸ್ಪಿ ರಾಜೇಂದ್ರ, ಡಿವೈಎಸ್ಪಿ ಅರುಣ್ ನಾಗೇಗೌಡ, ಉಪ್ಪಿನಂಗಡಿ ವೃತ್ತ ನಿರೀಕ್ಷಕ ರವಿ. ಬಿ.ಎಸ್. ಅವರಿಗೆ ಮಾಹಿತಿ ನೀಡಿದ್ದರು. ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತನಿಖೆಗೆ ಮಾರ್ಗದರ್ಶನ ನೀಡಿದ್ದಾರೆ.


ಎಸ್ಪಿ ಕೆ. ಅರುಣ್

**16 ವರ್ಷಗಳ ದಾಂಪತ್ಯ**


ರಫೀಕ್ ಮತ್ತು ಝೀನತ್‌ರದ್ದು 16 ವರ್ಷಗಳ ದಾಂಪತ್ಯ. ರಫೀಕ್ ಕೂಲಿ ಕೆಲಸ ಮಾಡುತ್ತಿದ್ದರೆ ಝೀನತ್ ಮನೆಯಲ್ಲಿಯೇ ಬೀಡಿ ಸುತ್ತುತ್ತಿದ್ದಳು. ಬಡತನ ಇದ್ದರೂ ನೆಮ್ಮದಿಯ ಜೀವನ ಇತ್ತು. ಅವರಿಬ್ಬರಿಗೆ 10 ಮತ್ತು 9ನೇ ತರಗತಿಯಲ್ಲಿ ಕಲಿಯುತ್ತಿರುವ ಗಂಡು ಮಕ್ಕಳಿದ್ದಾರೆ. ಬಡತನದ ಬೇಗೆಯಿಂದ ಹೊರಬರಲು ರಫೀಕ್ ಕೆಲವು ವರ್ಷಗಳ ಹಿಂದೆ ಸೌದಿ ಅರೇಬಿಯಾಕ್ಕೆ ಹೆಂಡತಿ ಮಕ್ಕಳನ್ನು ಬಿಟ್ಟು ಕೆಲಸಕ್ಕೆ ಹೋಗಿದ್ದ. ಅಲ್ಲೇ ದುಡಿಯುತ್ತಿದ್ದ ಮನೆಗೆ ಹಣ ಕಳುಹಿಸುತ್ತಿದ್ದ. ಈ ಹಣದಲ್ಲಿ ಮತ್ತು ತಾನು ಬೀಡಿ ಕಟ್ಟಿದ ಮಜೂರಿಯ ಹಣದಲ್ಲಿ ಝೀನತ್ ಸಂಸಾರವನ್ನು ತೂಗಿಸಿಕೊಂಡು ಹೋಗುತ್ತಿದ್ದಳು. ಇಂತಹ ಸಂದರ್ಭದಲ್ಲೇ ಆಕೆಗೆ ಪರಿಚಯವಾದವನೇ ತನ್ನದೇ ಊರಿನ ಹ್ಯಾರಿಸ್ ಎಂಬಾತ. ಆತನ ಪತ್ನಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ವಿಜಯಿಯಾಗಿದ್ದಳು. ಕಾಂಗ್ರೆಸ್ ಪಕ್ಷದ ಬೆಂಬಲಿಗಳಾಗಿದ್ದಳು. ಆ ಪಂಚಾಯತ್‌ನಲ್ಲಿ ಕಾಂಗ್ರೆಸ್ ಬಹುಮತ ಬಂದಿದ್ದರಿಂದ ಆಕೆಗೆ ಅಧ್ಯಕ್ಷಗಾದಿ ಒಲಿದು ಬಂದಿತ್ತು. ಆಕೆಯ ಗಂಡ ಹ್ಯಾರಿಸ್ ಪತ್ನಿಯ ಅಧಿಕಾರದ ದೌಲತ್ತನ್ನು ನಡೆಸುತ್ತಿದ್ದ. ಆ ಗ್ರಾಮಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗಿತ್ತು. ಗ್ರಾಮದ ನಲ್ಲಿಗಳಿಗೆ ಕಾಲ ಕಾಲಕ್ಕೆ ಸಮಯಕ್ಕೆ ಸರಿಯಾಗಿ ನೀರು ಬಿಡುವ ಕಾಯಕವನ್ನೂ ನಡೆಸುತ್ತಿದ್ದ. ಈ ಸಂದರ್ಭದಲ್ಲಿ ಆತನಿಗೆ ಝೀನತ್‌ಳ ಪರಿಚಯವಾಗಿತ್ತು. ಗಂಡನ ಸಖ್ಯಯಿಲ್ಲದೆ ಕೊರಗುತ್ತಿದ್ದ ಆಕೆಗೆ ಹ್ಯಾರಿಸ್ ಹತ್ತಿರನಾದ. ಈ ಸಂಬಂಧ ಅವರ ದೈಹಿಕ ಸಂಬಂಧದವರೆಗೂ ಮುಂದುವರೆದಿತ್ತು. ಝೀನತ್‌ಳ ಮಕ್ಕಳು ಶಾಲೆಗೆ ಹೋದ ಸಂದರ್ಭದಲ್ಲಿ ಯಾವುದಾದರೂ ಕಾರಣ ಹಿಡಿದುಕೊಂಡು ಮನೆಗೆ ಬರುತ್ತಿದ್ದ ಹ್ಯಾರಿಸ್ ಆಕೆಯೊಂದಿಗೆ ದೈಹಿಕ ಸಂಪರ್ಕ ಬೆಳೆಸುತ್ತಿದ್ದ. ಈ ವಿಚಾರ ಊರಿಡಿ ಹರಡಿತ್ತು. ಹ್ಯಾರಿಸ್‌ನ ಪತ್ನಿಗೂ ಗೊತ್ತಾಗಿತ್ತು. ಈ ವಿಷಯ ಸೌದಿಯಲ್ಲಿದ್ದ ರಫೀಕ್‌ನ ಗಮನಕ್ಕೆ ಬಂದಿತ್ತು. ಆತ ಇದರಿಂದ ಕಂಗೆಟ್ಟು ಊರಿಗೆ ಎರಡು ವರ್ಷದ ಹಿಂದೆ ಮರಳಿದ್ದ. ತದನಂತರ ಹ್ಯಾರಿಸ್ ಆತನ ಮನೆಗೆ ಬರುವುದು ನಿಂತು ಹೋಗಿತ್ತು. ಆದರೆ ಅವರಿಬ್ಬರ ಸಂಬಂಧ ಮುರಿದುಹೋಗಿರಲಿಲ್ಲ. ಕಳ್ಳಬೆಕ್ಕು ಹಾಲು ಕುಡಿಯಲು ಬೇರೆ ಬೇರೆ ತಂತ್ರ ಹೂಡುವಂತೆ ಹ್ಯಾರಿಸ್ ರಸ್ತೆಯ ಬದಿಯಲ್ಲಿದ್ದ ಪೊದೆಯೊಂದನ್ನು ಆಯ್ಕೆ ಮಾಡಿದ್ದ. ಮನೆಯಿಂದ ಬೀಡಿ ಕೊಂಡೊಯ್ಯಲೆಂದು ಹೊರಟು ಬರುತ್ತಿದ್ದ ಝೀನತ್ ಆ ಪೊದೆಯೊಳಗೆ ತೂರುತ್ತಿದ್ದಳು. ಹ್ಯಾರಿಸ್ ಅಲ್ಲಿಯೇ ಕಾಯುತ್ತಿದ್ದ. ಇಬ್ಬರೂ ಒಟ್ಟಿಗೆ ಸೇರುತ್ತಿದ್ದರು. ಇದು ದಿನಂಪ್ರತಿ ನಡೆಯುತ್ತಿತ್ತು. ಈ ವಿಚಾರ ರಫೀಕ್‌ನ ಗಮನಕ್ಕೆ ಬಂದು ಅವರಿಬ್ಬರನ್ನು ಪೊದೆಯಲ್ಲಿ ಒಟ್ಟಿಗೆ ಇರುವಾಗಲೇ ಹಿಡಿಯಬೇಕೆಂದು ಹೊಂಚು ಹಾಕುತ್ತಿದ್ದ. ಅದಕ್ಕೆ ದಿನ ಕೂಡಿ ಬಂದದ್ದು ಜುಲೈ 17ರಂದು. ಅವರು ಸಿಕ್ಕಿಬಿದ್ದರೂ ನುಣುಚಿಕೊಂಡಿದ್ದರು. ಕೊನೆಗೆ ಈ ಆಟ ದುರಂತದಲ್ಲಿ ಅಂತ್ಯವಾಯಿತು. ಝೀನತ್ ತನ್ನ ಕೆಟ್ಟ ಚಾಳಿಯಿಂದ ಇಹಲೋಕ ತ್ಯಜಿಸಿದರೆ ರಫೀಕ್ ಆಕೆಯನ್ನು ಕೊಂದು ಜೈಲು ಪಾಲಾಗಿದ್ದಾನೆ. 10ನೇ ಮತ್ತು 9ನೇ ತರಗತಿಯಲ್ಲಿ ಕಲಿಯುತ್ತಿರುವ ಇಬ್ಬರು ಮಕ್ಕಳು ಮಾತ್ರ ಅನಾಥರಾಗಿದ್ದಾರೆ. ಇದು ದುರಂತ.


ಆರೋಪಿ ರಫೀಕ್


ಕೃತ್ಯ ನಡೆದ ಮನೆ ಮುಂದೆ ಪೊಲೀಸರು



ಘಟನೆ ನಡೆದ ಊರು


ಘಟನೆ ನಡೆದ ಮನೆ

# ಬುರುಡೆ ಬಿಚ್ಚಿಡುತ್ತಾ ಧರ್ಮಸ್ಥಳದ ರಹಸ್ಯ?!

**ದಕ್ಷಿಣ ಕನ್ನಡ**

**✍ ಮೋಹನ್ ಬೋಳಂಗಡಿ**

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಇಂದು ಕೇವಲ ಪವಿತ್ರ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿಲ್ಲ, ಬದಲಾಗಿ ಆ ಕ್ಷೇತ್ರದ ಪಾವಿತ್ರ್ಯತೆಯನ್ನು ಹಾಳುಗೆಡವುವ ಸಂಚಿನ ಫಲವಾಗಿ ರಾಜ್ಯದಾದ್ಯಂತ ಸುದ್ದಿಯಾಗಿ ಸದ್ದು ಮಾಡುತ್ತಿದೆ. ನಾಲ್ಕು ದಶಕಗಳ ಹಿಂದಿನಿಂದ ನಡೆಯುತ್ತಿರುವಂತಹ ಈ ಸಂಚು ಇದೀಗ ಬೃಹದಾಕಾರವಾಗಿ ಬೆಳೆದು ಬಂದಿದೆ. ಸಾಮಾಜಿಕ ಮಾಧ್ಯಮಗಳ ದೆಸೆಯಿಂದ ಪ್ರತಿಯೊಬ್ಬರ ಬಾಯಲ್ಲಿಯೂ ಧರ್ಮಸ್ಥಳ ಎಂಬ ಗ್ರಾಮದ ಹೆಸರು ನಲಿದಾಡುವಂತಾಗಿದೆ. ಈ ಹಿಂದೆ ಕೇವಲ ಕ್ಷೇತ್ರದ ಹೆಸರು, ಮಂಜುನಾಥ ಸ್ವಾಮಿಯ, ಅಣ್ಣಪ್ಪ ಸ್ವಾಮಿಯ ಹೆಸರುಗಳು ಮಾತ್ರ ಗೊತ್ತಿದ್ದವು. ಇದೀಗ ಪ್ರತಿಯೊಬ್ಬರೂ ಧರ್ಮಸ್ಥಳದ ಹೆಸರು ಎತ್ತಿಕೊಂಡು ಹಲವು ರೀತಿಯ ಕಪೋಲಕಲ್ಪಿತ ರೀತಿಯಲ್ಲಿ ವೀಡಿಯೋಗಳನ್ನು ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟು ಒಟ್ಟಾರೆಯಾಗಿ ಗೋಜಲುಗಳನ್ನು ಸೃಷ್ಟಿಸಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರಕಾರ ದಿಟ್ಟ ನಿರ್ಧಾರವೊಂದನ್ನು ಕೈಗೊಂಡು ಧರ್ಮಸ್ಥಳಕ್ಕೆ ಸಂಬಂಧಪಟ್ಟ ಎಲ್ಲಾ ಕ್ರಿಮಿನಲ್ ಪ್ರಕರಣಗಳ ಸಮಗ್ರ ತನಿಖೆ ನಡೆಸಿ ವರದಿ ಒಪ್ಪಿಸಲು ಮತ್ತು ನೈಜ ಅಪರಾಧಿಗಳು ಯಾರೆಂದು ಗುರುತಿಸಲು ರಾಜ್ಯ ಪೊಲೀಸ್ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಡಾ. ಪ್ರಣವ್ ಮೊಹಂತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಿದೆ. ಈ ತಂಡಕ್ಕೆ ಡಿಐಜಿ



ಎಂ.ಎನ್ ಅನುಚೇತ್ ಹಾಗೂ ಬೆಂಗಳೂರು ಸಿಎಆರ್ ಎಸ್ಪಿ ಸೌಮ್ಯಲತ, ಆಂತರಿಕ ಬದ್ರತಾ ಪಡೆಯ ಎಸ್ಪಿ ಜಿತೇಂದ್ರ ಕುಮಾರ್ ದಯಾಮ ಹಾಗೂ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಂತಹ 20 ಮಂದಿ ಅಧಿಕಾರಿಗಳನ್ನು ನೇಮಿಸಿ ಆದೇಶ ಹೊರಡಿಸಿದೆ. ಈ ತಂಡ ಈಗಾಗಲೇ ಆಂತರಿಕ ಸಬೆ ನಡೆಸಿದ್ದು, ಬೆಳ್ತಂಗಡಿಯನ್ನು ಕಾರ್ಯಸ್ಥಾನವಾಗಿಟ್ಟುಕೊಂಡು ತನಿಖೆಯನ್ನು ನಡೆಸಲಿದೆ. ಈ ತಂಡದಲ್ಲಿ ಮಂಗಳೂರು ಡಿಸಿಆರ್ಇ ಎಸ್ಪಿ ಸಿ.ಎ ಸೈಮನ್, ಉಡುಪಿ ಸಿಇಎನ್ ಡಿವೈಎಸ್ಪಿ ಎಸಿ ಲೋಕೇಶ್ ದಕ್ಷಿಣ ಕನ್ನಡ ಸಿಇಎನ್ ಡಿಎಸ್ಪಿ ಮಂಜುನಾಥ್, ಕರಾವಳಿ ಕಾವಲು ಪಡೆಯ ಇನ್ಸ್ಪೆಕ್ಟರ್‌ಗಳಾದ ಮಂಜುನಾಥ್, ಇ.ಸಿ. ಸಂಪತ್, ಕೆ. ಕುಸುಮಾಧರ್, ಶಿರಸಿ ಗ್ರಾಮಾಂತರ ಠಾಣಾ ಇನ್ಸ್ಪೆಕ್ಟರ್ ಮಂಜುನಾಥ್ ಗೌಡ, ಬೈಂದೂರು ಇನ್ಸ್ಪೆಕ್ಟರ್ ಸವಿತ್ರ ತೇಜ, ಸಿಎಸ್ಪಿ ಸಬ್ ಇನ್ಸ್ಪೆಕ್ಟರ್ ಕೋಕಿಲಾ ನಾಯಕ್, ವೈಲೆಟ್ ಪೆಮಿನಾ, ಶಿವಶಂಕರ್, ಶಿರಸಿ ಎನ್ಎಂ ಪೊಲೀಸ್ ಠಾಣೆಯ ಎಸ್ಐ ರಾಜ್ ಕುಮಾರ್ ಉಕ್ಕಳ್ಳಿ, ಅಂಕೊಲ ಪಿಎಸ್ಐ ಆರ್. ಸುಹಾಸ್, ಮುಂಡಗೋಡು ಪಿಎಸ್ಐ ವಿನೋದ್ ಎಸ್ ಕಾಳಪ್ಪನವರ್, ಮಂಗಳೂರು ಮೆಸ್ಕಾಂ ಎಸ್ಐ ಜೆ. ಗೋಪಾಲ್, ಉಡುಪಿ ನಗರ ಠಾಣಾ ಎಎಸ್ಐ ಸುಬಾಷ್ ಕಾಮತ್, ಕಾಪು ಠಾಣೆಯ ಎಚ್‌ಸಿ ಹರೀಶ್ ಬಾಬು, ಮಲ್ಪೆ ವೃತ್ತ ನಿರೀಕ್ಷಕರ ಕಚೇರಿಯ ಎಚ್‌ಸಿ ಪ್ರಕಾಶ್, ಕುಂದಾಪುರ ನಗರ ಠಾಣೆಯ ಎಚ್ ಸಿ ನಾಗರಾಜ್ ಮತ್ತು ಚಿಕ್ಕಮಗಳೂರಿನ ಪಾರೆನ್ಸಿಕ್ ಮೆಡಿಸಿನ್ ಸೈಯನ್ಸ್‌ನ ಹೆಡ್ ಕಾನ್ಸ್‌ಸ್ಟೇಬಲ್ ದೇವರಾಜ್ ಅವರನ್ನು ನಿಯೋಜಿಸಲಾಗಿದೆ.

**ಜಂಬೋ ಟೀಮ್**

ನಾಲ್ವರು ಐಪಿಎಸ್ ಅಧಿಕಾರಿಗಳು, 20 ಮಂದಿ ಅಧಿಕಾರಿಗಳು ಒಳಗೊಂಡಂತಹ ಜಂಬೋ ತನಿಖಾ ಟೀಮ್ ಇದಾಗಿದೆ. ರಾಜೀವ್‌ಗಾಂಧಿ ಹತ್ಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ನಿರ್ದೇಶಕ ಡಿಆರ್ ಕಾರ್ತಿಕೇಯನ್ ನೇತೃತ್ವದಲ್ಲಿ ರಚಿಸಲಾಗಿದ್ದ ವಿಶೇಷ ತನಿಖಾ ತಂಡವನ್ನೇ ಹೋಲುವಂತಹ ಟೀಮ್ ಇದಾಗಿದೆ. ಕೇವಲ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಸೆಕ್ಷನ್ 211/1 ರ ಅಡಿಯಲ್ಲಿ ದಾಖಲಾಗಿದ್ದಂತಹ ಬುರುಡೆ ಪ್ರಕರಣದ ತನಿಖೆಗೆ ಇಂತಹ ಜಂಬೋ ಟೀಮನ್ನು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ. ಸಲೀವ್ ಅವರು ರಚಿಸಿಲ್ಲ, ಬದಲಾಗಿ ಕಳೆದ 13 ವರ್ಷಗಳಲ್ಲಿ ಯಾವ ರೀತಿಯಲ್ಲಿ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆಸಲಾಗಿದೆ? ಅದರಲ್ಲಿ ಯಾರೆಲ್ಲಾ ಸೇರಿದ್ದಾರೆ? ಈ ಹೋರಾಟಕ್ಕೆ ಎಲ್ಲೆಲ್ಲಿಂದ ಪಂಡ್ ಕಲೆಕ್ಷನ್ ಆಗಿದೆ? ಯಾವ್ಯಾವ ಅಂಶಗಳನ್ನು ಇಟ್ಟುಕೊಂಡು ವ್ಯವಸ್ಥಿತ ಪಿತೂರಿ ನಡೆಸಲಾಗಿದೆ? ಸೌಜನ್ಯ ಪ್ರಕರಣ ನ್ಯಾಯಾಲಯದಲ್ಲಿ ಖುಲಾಸೆಗೊಳ್ಳಲು ಮೂಲ ಕಾರಣಗಳೇನು? ಈ ಹಿಂದೆ ನಡೆದಿದ್ದಂತಹ ವೇದವಲ್ಲಿ ಹಾಗೂ ಪದ್ಮಲತಾ ಪ್ರಕರಣದ ಅಸಲಿಯತ್ತೇನು? ಕಮ್ಯೂನಿಷ್ಟ್ ಪಕ್ಷದ ಪ್ರಮುಖರು ಧರ್ಮಸ್ಥಳದ ವಿರುದ್ಧದ ಹೋರಾಟದಲ್ಲಿ ಬಾಗಿಯಾಗಲು ಕಾರಣಗಳೇನು? ಪೊಲೀಸ್ ಇಲಾಖೆಯಿಂದ ದುರ್ವತನೆಗಾಗಿ ವಜಾಗೊಂಡಿರುವಂತಹ ಸಬ್‌ಇನ್ಸ್ಪೆಕ್ಟರ್ ಗಿರೀಶ್ ಮಟ್ಟಣ್ಣನವರ್ ಈ ಹೋರಾಟಕ್ಕೆ ಕೈ ಜೋಡಿಸಲು ಕಾರಣವೇನು? ಈ ಹೋರಾಟದಲ್ಲಿ ಭಾಗಿಗಳಾದ ಪ್ರಮುಖರ ಹಿನ್ನೆಲೆಗಳೇನು? ಸುಮಾರು ಇನ್ನೂರಕ್ಕೂ ಹೆಚ್ಚು ಯೂಟ್ಯೂಬರ್‌ಗಳು ಜಿದ್ದಿಗೆ ಬಿದ್ದಂತೆ ಧರ್ಮಸ್ಥಳದ ವಿರುದ್ಧ ವೀಡಿಯೋ ಮಾಡಿ ಹರಿಯಬಿಟ್ಟಿರುವುದರ ಹಿಂದಿನ ರಹಸ್ಯವೇನು? ಈ ಯೂಟ್ಯೂಬರ್‌ಗಳಿಗೆ ಫೈನಾನ್ಸ್ ಮಾಡಿದವರ್ಯಾರು? ಅವರನ್ನು ಈ ಸಂಘಟಿತ ಅಪಪ್ರಚಾರಕ್ಕೆ ಜೋಡಿಸಿದವರ್ಯಾರು? ಹಾಗು ಇತರ ಕೆಲವು ಮೂಲಗಳು ಈ ಹೋರಾಟದ ಬೆನ್ನೆಲುಬಾಗಿ ನಿಂತಿದ್ಯಾಕೆ? ಎಂಬ ಸಮಗ್ರ ಅಂಶಗಳ ಬಗ್ಗೆ ತನಿಖೆ ನಡೆಯಲಿದೆ.

ಅಜ್ಞಾತ ವ್ಯಕ್ತಿಯೊಬ್ಬ ತನ್ನ ವಕೀಲರೊಂದಿಗೆ ಬೆಳ್ತಂಗಡಿ ನ್ಯಾಯಾಲಯಕ್ಕೆ ಮಾನವ ಬುರುಡೆ ಸಹಿತ ಹಾಜರಾಗಿ ಬಿಎನ್‌ಎಸ್‌ಎಸ್ ಸೆಕ್ಷನ್ 183 ರಂತೆ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದ. ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ರಕ್ಷಣೆ ನೀಡಬೇಕು ಎಂದು ಕೋರಿಕೊಂಡಿದ್ದ. ಈ ಅಜ್ಞಾತ ವ್ಯಕ್ತಿ ತನ್ನ ವಕೀಲರ ಮೂಲಕ ಧರ್ಮಸ್ಥಳ ಪೊಲೀಸ್ ಠಾಣೆಗೆ ನೀಡಿದ ದೂರಿನಂತೆ ಎಫ್‌ಐಆರ್ ದಾಖಲಾಗಿ ತನಿಖೆಯಲ್ಲಿತ್ತು. ಈ ಪ್ರಕರಣವನ್ನು ಪ್ರಧಾನವಾಗಿಟ್ಟುಕೊಂಡು ರಾಜ್ಯದ ವಿವಿಧೆಡೆಗಳಲ್ಲಿ ಧರ್ಮಸ್ಥಳ ಕ್ಷೇತ್ರದ ವಿರುದ್ಧ ದಾಖಲಾಗಿರುವಂತಹ ಎಲ್ಲಾ ಪ್ರಕರಣಗಳ ತನಿಖೆಯನ್ನು ನಡೆಸುವಂತೆ ಎಸ್‌ಐಟಿ ರಚಿಸಿ ರಾಜ್ಯ ಸರಕಾರ ನೀಡಿದ್ದ ಆದೇಶದಂತೆ ಇದೀಗ ಎಸ್‌ಐಟಿ ತನಿಖೆ ಆರಂಭಗೊಂಡಿದೆ. ಎಸ್‌ಐಟಿ ಎಸ್ಪಿ ಜಿತೇಂದ್ರ ಕುಮಾರ್ ದಯಾಮ ಅವರು ಜುಲೈ 25ರಂದು ರಾತ್ರಿ ಧರ್ಮಸ್ಥಳ



ಧರ್ಮಸ್ಥಳ ಠಾಣೆಗೆ ಬಂದ ಎಸ್‌ಐಟಿ ಅಧಿಕಾರಿಗಳು

ಠಾಣೆಗೆ ಹೋಗಿ ಈ ಪ್ರಕರಣದ ಸಂಬಂಧಿತ ಕಡತವನ್ನು ತೆಗೆದುಕೊಂಡು ಈವರೆಗೆ ತನಿಖೆ ನಡೆಸಿದ್ದ ಎಸ್‌ಐ ಸಮರ್ಥ್ ಆರ್. ಗಾಣಿಗೇರ ಅವರೊಂದಿಗೆ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಇದೇ ಠಾಣೆಯಲ್ಲಿ ಸುಜಾತಾ ಭಟ್ ಎಂಬವರು 2003ರಲ್ಲಿ ಎಂಬಿಬಿಎಸ್ ಕಲಿಯುತ್ತಿದ್ದ ತನ್ನ ಮಗಳು ಅನನ್ಯಾಬಟ್ ಧರ್ಮಸ್ಥಳದಲ್ಲಿ ಕಾಣೆಯಾಗಿದ್ದಾಳೆ, ಆಕೆಯ ಅಸ್ಥಿಪಂಜರ ಏನಾದರೂ ಸಿಕ್ಕಿದರೆ ತನಗೆ ಕೊಡಬೇಕು ನಾನು ಅದಕ್ಕೆ ಗೌರವಯುತ ಅಂತ್ಯಸಂಸ್ಕಾರ ಮಾಡುತ್ತೇನೆ ಎಂದು ಹೇಳಿ ನೀಡಿದ್ದ ದೂರು ಅರ್ಜಿಯ ಬಗ್ಗೆಯೂ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಈ ಹಿಂದೆ ಧರ್ಮಸ್ಥಳ ಮತ್ತು ಬೆಳ್ತಂಗಡಿ ಠಾಣೆಯಲ್ಲಿ ಹೋರಾಟಗಳಿಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ಮಾಹಿತಿಗಳು ಮತ್ತು ಆ ಪ್ರಕರಣಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮಗಳ ಬಗ್ಗೆಯೂ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಸೌಜನ್ಯಪರ ಹೋರಾಟದಲ್ಲಿ ಗುರುತಿಸಿಕೊಂಡಿದ್ದಂತಹ ಕೆಲವರ ಹೆಸರುಗಳನ್ನು ಎಸ್‌ಐಟಿ ತಂಡ ಪಟ್ಟಿ ಮಾಡಿದ್ದು, ಅವರ ಮೇಲಿರುವಂತಹ ಕ್ರಿಮಿನಲ್ ಪ್ರಕರಣಗಳ ಮಾಹಿತಿಗಳನ್ನು ಸಂಗ್ರಹಿಸಲು ಮುಂದಾಗಿದೆ. ಒಟ್ಟಾರೆಯಾಗಿ ಈ ಪ್ರಕರಣದ ತನಿಖೆಯು ಹಲವರ ಬುರುಡೆಗಳಿಗೆ ಬಿಸಿನೀರು ಒಯ್ಯುವುದಂತೂ ನಿಶ್ಚಿತ. ☯




ಬೆಳ್ತಂಗಡಿ ಪೊಲೀಸ್ ವಸತಿಗೃಹದ ಎಸ್‌ಐಟಿ ಕಚೇರಿಗೆ ಐಜಿಪಿ ಪ್ರಣವ್ ಮೊಹಂತಿ

---

4 ☞

## ಮತ್ತೆ ಜೈಲಿಗೆ ಹೋದರೆ ಸಿನಿಮಾಗಳ ಕಥೆಯೇನು?

ಮೊದಲೇ ಹೇಳಿದಂತೆ ಬೇಲ್ ಕ್ಯಾನ್ಸಲ್ ಆಯ್ತು ಅಂತಾ ಆದ್ರೆ, ದರ್ಶನ್ ಮತ್ತೆ ಸುಪ್ರೀಂ ಕೋರ್ಟ್‌ಲ್ಲೇ ಬೇಲ್‌ಗೆ ಅಪ್ಲೈ ಮಾಡಬಹುದು. ಆದ್ರೆ, ಮತ್ತೆ ಜೈಲಿನಲ್ಲಿದ್ದುಕೊಂಡೇ ಅಪ್ಲೈ ಮಾಡಬೇಕು. ಹಿಂದೆ ಬಳ್ಳಾರಿ ಜೈಲಿನಲ್ಲಿ ಇದ್ದುಕೊಂಡು ಜಾಮೀನಿಗೆ ಪರದಾಡಿದಂತೆ ಪರದಾಡಬೇಕು! ಹಾಗೇನಾದ್ರೂ ಆಯ್ತು ಅಂದ್ರೆ, ದಾಸ ಜೈಲಿಗೆ ಹೋದ್ರೆ ಆತ ಒಪ್ಪಿಕೊಂಡಿರೋ ಹೊಸ ಸಿನಿಮಾಗಳ ಕಥೆಯೇನು ಅನ್ನೋದು! ಸದ್ಯ, ಕೋರ್ಟ್‌ನಿಂದ ಅನುಮತಿ ಪಡೆದೇ 'ಡೆವಿಲ್' ಸಿನಿಮಾ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ ದರ್ಶನ್. ಇತ್ತೀಚೆಗೆ ಡೆವಿಲ್ ಚಿತ್ರದ ಟೀಸರ್ ಕೂಡ ಬಿಡುಗಡೆಯಾಗಿತ್ತು. ದರ್ಶನ್ ಡೆವಿಲ್ ಚಿತ್ರದಲ್ಲಿ ತಮ್ಮ ಪಾತ್ರದ ಎಲ್ಲಾ ಕೆಲಸ ಮುಗಿಸಿದ್ದಾರೆ. ಇಡೀ ಸಿನಿಮಾ ಕಂಪ್ಲೀಟ್ ಆಗಿ, ದರ್ಶನ್ ತನ್ನ ಪಾಲಿನ ಡಬ್ಬಿಂಗ್ ಮುಗಿಸಿದ್ದಾರೆ ಅನ್ನೋ ಮಾಹಿತಿ ಇದೆ. ಹೀಗಾಗಿ, ಡೆವಿಲ್ ನಿರ್ಮಾಪಕ, ನಿರ್ದೇಶಕ ಮಿಲನ ಪ್ರಕಾಶ್ ಸೇಫ್!



ಇನ್ನು, ಡೆವಿಲ್ ಬಿಟ್ರೆ ಸದ್ಯಕ್ಕೆ ದರ್ಶನ್ ಕೈಯಲ್ಲಿ ಯಾವ ಸಿನಿಮಾನೂ ಇಲ್ಲ ಅನ್ನೋದೂ ಗಾಂಧಿನಗರದಿಂದ ಸಿಕ್ಕಿರೋ ಇನ್ಫಾರ್ಮೇಷನ್... ರಕ್ಷಿತಾ ಪತಿ 'ಪ್ರೇಮ್ಸ್' ಮಾತ್ರ ಅಲ್ಲಲ್ಲಿ ಡಿ ಬಾಸ್ ಕಾಲ್ ಶೀಟ್ ಸಿಕ್ಕಿದೆ ಅಂತ ಹೇಳಿಕೊಂಡು ತಿರುಗುತ್ತಿದ್ದಾರೆ! ನಿಜವೇ ಇದ್ದರು ಸದ್ಯಕ್ಕೆ ಪ್ರೇಮ್ಸ್ ಮಲೆ ಮಾದಪ್ಪನ ಮೇಲೆ ಭಾರ ಹಾಕೋ ಪರಿಸ್ಥಿತಿ ಉದ್ಭವ ಆಗಿರೋದು ಸುಳ್ಳಲ್ಲ!! ನಿಮಗೆ ಗೊತ್ತಿರಬಹುದು, ದರ್ಶನ್ ಜೈಲಿನಿಂದ ರಿಲೀಸ್ ಆದಾಗ ಕೆಲ ನಿರ್ಮಾಪಕರು ಕೊಟ್ಟಿದ್ದ ಅಡ್ವಾನ್ಸ್‌ಗಳನ್ನ ವಾಪಸ್ ಮಾಡಿದ್ದರು. ಮತ್ತು ಡೆವಿಲ್ ಚಿತ್ರದ ಚಿತ್ರೀಕರಣದಲ್ಲಿ ಮಾತ್ರ ಭಾಗಿಯಾಗಿದ್ದರು. ಬಿಟ್ರೆ ತರುಣ್ ಸುಧೀರ್ ಜೊತೆಗೆ ಸಿಂಧೂರ ಲಕ್ಷ್ಮಣ ಸಿನಿಮಾ ಮಾಡ್ತಾರೆ ಎಂಬ ಮಾಹಿತಿ ಕೂಡ ಇತ್ತು. ಈ ಹಿನ್ನಲೆಯಲ್ಲಿ ತರುಣ್ ಸುಧೀರ್ ಸ್ಕ್ರಿಪ್ಟ್ ಕೆಲಸ ಮಾಡ್ತಾ ಇದ್ದಾರೆ ಎನ್ನುವ ಮಾಹಿತಿ ಇದೆ. ಬಟ್, ದರ್ಶನ್ ಆಗ್ಲಿ ತರುಣ್ ಆಗ್ಲಿ ಈ ಬಗ್ಗೆ ಎಲ್ಲೂ ಹೆಚ್ಚಿಗೆ ಹೇಳಿಕೊಂಡಿಲ್ಲ. ಇವೆಲ್ಲದರ ಜೊತೆಗೆ ದರ್ಶನ್‌ಗೆ ಈಗ ಮತ್ತೊಂದು ಸಂಕಷ್ಟ ಕೂಡ ಎದುರಾಗೋ ಸಾಧ್ಯತೆ ಕಾಣ್ತಿದೆ.

### ಉಗ್ರರ ವೈದ್ಯನಿಗೂ, ದರ್ಶಿಗೂ ಇತ್ತಾ ಪರಿಚಯ?

ದರ್ಶನ್‌ಗೆ ಸುಪ್ರೀಂ ಕೋರ್ಟ್‌ಲ್ಲಿ ಬೇಲ್ ಸಿಗುತ್ತೋ, ಇಲ್ವೋ ಅನ್ನೋದೇ ಅವರ ಅಭಿಮಾನಿಗಳಲ್ಲಿ ಸದ್ಯಕ್ಕಿರೋ ದೊಡ್ಡ ಆತಂಕ. ಹೀಗಿರೋವಾಗಲೇ ಮತ್ತೊಂದು ಸ್ಫೋಟಕ ವಿಚಾರ ಚರ್ಚೆಯಾಗುತ್ತಿದೆ. ಕೆಲ ದಿನಗಳ ಹಿಂದಷ್ಟೇ NAI (ರಾಷ್ಟ್ರೀಯ ತನಿಖಾ ದಳ) ಒಂದು ಸ್ಫೋಟಕ ಪ್ರಕರಣ ಭೇದಿಸಿದ್ದರು. ರಾಜ್ಯವೂ ಸೇರಿ ದೇಶದ ಹಲವೆಡೆ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣ ಅದು. ಆ ಕೇಸ್‌ಗೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಕೋಲಾರದಲ್ಲಿ ಶೋಧ ನಡೆಸಿ, ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ, ಸಶಸ್ತ್ರ ಮೀಸಲು ಪಡೆಯ ಪೊಲೀಸ್ ಅಧಿಕಾರಿ ಸೇರಿ ಮೂವರನ್ನು ಬಂಧಿಸಿದ್ದರು. ಅಲ್ಲಿ ಅರೆಸ್ಟ್ ಆದ್ನಲ್ಲ, ಮನೋವೈದ್ಯ ನಾಗರಾಜನಿಗೂ ದರ್ಶನ್‌ಗೂ ಜೈಲಿನಲ್ಲಿದ್ದಾಗ ಪರಿಚಯ ಇತ್ತು ಅನ್ನೋ ವಿಚಾರವೀಗ ಬಯಲಾಗಿದೆ! ದರ್ಶನ್ ಜೈಲಿನಲ್ಲಿದ್ದ ವೇಳೆ ಸಾಕಷ್ಟು ಬಾರಿ ಡಾ. ನಾಗರಾಜನನ್ನು ಭೇಟಿಯಾಗಿದ್ರಂತೆ. ಕೈದಿಗಳಿಗೆ ಮೊಬೈಲ್‌ಗಳನ್ನ ಪೂರೈಕೆ ಮಾಡುತಿದ್ದ ಡಾ.ನಾಗರಾಜ್, ದರ್ಶನ್‌ಗೆ ರಾಜಾತಿಥ್ಯ ಕೊಟ್ಟ ಪ್ರಕರಣದಲ್ಲಿ ಭಾಗಿಯಾಗಿರುವ ಶಂಕೆಯೂ ಇದೆ! ಆ ಶಂಕೆಯ ಮೇರೆಗೆ ಪರಪ್ಪನ ಅಗ್ರಹಾರ ಪೊಲೀಸರು, ಡಾ. ನಾಗರಾಜ್ ವಿಚಾರಣೆಗೆ ಮುಂದಾಗಿದ್ದರು ಮತ್ತು ವಿಚಾರಣೆಗೆ ಅನುಮತಿ ಕೋರಿ ಸಕ್ಷಮ ಪ್ರಾಧಿಕಾರದ ಮೊರೆ ಹೋಗಿದ್ದರು. ಅಷ್ಟರಲ್ಲಿ ಭ್ರಷ್ಟ ಮನೋವೈದ್ಯ ನಾಗರಾಜ್ ಎನ್‌ಐಎ ಬಲೆಗೆ ಬಿದ್ದು, ಅದೇ ಜೈಲಿನಲ್ಲಿದ್ದಾನೆ! ಉಗ್ರ ಟಿ. ನಾಸಿರ್‌ಗೆ ನೆರವು ನೀಡಿದ ಆರೋಪ ಇವನ ಮೇಲಿದ್ದು, ಈಗ ದರ್ಶನ್‌ಗೂ ಇವನಿಗೂ ಪರಿಚಯ ಇತ್ತಾ... ಅನ್ನೋದರ ಬಗ್ಗೆಯೂ ತನಿಖೆ ನಡೆದರೂ ಅಚ್ಚರಿಯಿಲ್ಲ!! ☯




# ಸರಿಯಾದ ವಯಸ್ಸಿನಲ್ಲಿ...

ಒಂದಾಗುವಿಕೆಯು ಮಹಿಳೆಯ ದೇಹವನ್ನು ಪೂರ್ಣಗೊಳಿಸುತ್ತದೆ. ಸರಿಯಾದ ವಯಸ್ಸಿನಲ್ಲಿ ಲೈಂಗಿಕ ಕ್ರಿಯೆ ನಡೆಸದಿದ್ದರೆ, ಮಹಿಳೆಯ ದೇಹವು ಬೆಳವಣಿಗೆಯಾಗುವುದಿಲ್ಲ, ಏಕೆಂದರೆ ಭೋಗದ ಸಮಯದಲ್ಲಿ, ಮಹಿಳೆ ತೃಪ್ತಿಯನ್ನು ಪಡೆದಾಗ, ಅವಳ ದೇಹದಲ್ಲಿ ಕೆಲವು ಹಾರ್ಮೋನುಗಳು ಉತ್ಪತ್ತಿಯಾಗುತ್ತವೆ, ಅದು ಮುಟ್ಟಿನ ಸಮಸ್ಯೆಗಳನ್ನು ಪರಿಹರಿಸುತ್ತದೆ, ಮುಖವನ್ನು ಹೊಳೆಯುವಂತೆ ಮಾಡುತ್ತದೆ ಮತ್ತು ಹೊಟ್ಟೆಯ ಸಮಸ್ಯೆಗಳನ್ನು ಸಹ ಮಾಡುತ್ತದೆ. ಕಾಲೇಜು ನಂತರ, ನನಗೆ ಕೇವಲ 23 ವರ್ಷ. ತಂದೆ, ಚಿಕ್ಕಪ್ಪ, ಎಲ್ಲರೂ ನನಗೆ ಜೋಡಿಯನ್ನು ಹುಡುಕುತ್ತಿದ್ದರು. ಹುಡುಗರಿಂದ ಅನೇಕ ಪ್ರಸ್ತಾಪಗಳು ಬಂದವು, ಆದರೆ ಯಾವುದೂ ಸರಿ ಎಂದು ಪರಿಗಣಿಸಲಾಗಲಿಲ್ಲ, ಕಾರಣ ಸರ್ಕಾರಿ ಕೆಲಸ. ಮನೆಯಲ್ಲಿ, ನನ್ನ ತಾಯಿ ಬೇಗನೆ ಮದುವೆ ಮಾಡಲು ವಿವಿಧ ತಂತ್ರಗಳನ್ನು ಮಾಡುತ್ತಿದ್ದರು. ಒಂದು ದಿನ ನಾನು ತಾಯಿಗೆ, ಅಮ್ಮಾ, ಈ ತಂತ್ರಗಳಿಂದ ಏನಾಗುತ್ತದೆ? ಮದುವೆ ಎಲ್ಲಿ ನಡೆಯಬೇಕೋ ಅಲ್ಲಿಯೇ ನಡೆಯುತ್ತದೆ ಎಂದು ಹೇಳಿದೆ. ತಾಯಿ ಉತ್ತರಿಸಿದಳು, ನೀವು ಸುಮ್ಮನಿರಿ. ಮದುವೆ ಸಮಯಕ್ಕೆ ಸರಿಯಾಗಿ ನಡೆದರೆ ಪರವಾಗಿಲ್ಲ, ನಾನು ಅವಳ ಮಾತನ್ನು ಕೇಳಿ ದೂರ ಸರಿದೆ. ಸುಮಾರು ಆರು ತಿಂಗಳ ನಂತರ, ನಾನು ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹುಡುಗನನ್ನು ಭೇಟಿಯಾದೆ. ಅವನಿಗೆ 37 ವರ್ಷ, ನನಗಿಂತ ಸುಮಾರು 14 ವರ್ಷ ದೊಡ್ಡವನು. ಸರ್ಕಾರಿ ಕೆಲಸವನ್ನು ನೋಡಿ, ತಂದೆ ಮತ್ತು ಚಿಕ್ಕಪ್ಪ ಹೌದು ಎಂದು ಹೇಳಿದರು, ತಾಯಿ ಕೂಡ ಹೌದು ಎಂದು ಹೇಳಿದರು. ನನಗೆ ಹುಡುಗ ಇಷ್ಟವಾಯಿತೇ ಅಥವಾ ಇಲ್ಲವೇ ಎಂದು ನನ್ನನ್ನು ಕೇಳಲಿಲ್ಲ.

ನಂತರ ಅವರ ಮನೆಯವರು ನನ್ನ ಮನೆಗೆ ಬಂದು ನನ್ನನ್ನು ನೋಡಿದ ನಂತರ ನನ್ನನ್ನು ಇಷ್ಟಪಟ್ಟರು. ನಾನು ಅವರನ್ನು ನೋಡಿದೆ, ಅವರು ವಯಸ್ಸಿನಲ್ಲಿ ಸಾಕಷ್ಟು ದೊಡ್ಡವರಾಗಿದ್ದರು, ಆದರೆ ಈ ಬಗ್ಗೆ ಯಾವುದೇ ಪ್ರಶ್ನೆ ಕೇಳಲು ನನಗೆ ಧೈರ್ಯ ಬರಲಿಲ್ಲ. ನಾವಿಬ್ಬರೂ ಮಾತನಾಡಲು ಕೋಣೆಯಲ್ಲಿಯೇ ಇದ್ದೆವು, ಆದರೆ ನನಗೆ ಏನನ್ನೂ ಕೇಳುವ ಧೈರ್ಯವಿರಲಿಲ್ಲ.

ಎಲ್ಲರೂ ಹೋದಾಗ, ನಾನು ತುಂಬಾ ಕಡಿಮೆ ಮನಸ್ಸಿನಲ್ಲಿ ತಾಯಿಗೆ ಅವರು ವಯಸ್ಸಿನಲ್ಲಿ ತುಂಬಾ ದೊಡ್ಡವರು ಎಂದು ಹೇಳಿದೆ. ತಾಯಿ ನನ್ನನ್ನು ಗದರಿಸಿ ನನ್ನನ್ನು ಕೂರಿಸಿ, ಇಷ್ಟು ವಯಸ್ಸಿನ ವ್ಯತ್ಯಾಸ ಸ್ವೀಕಾರಾರ್ಹ ಎಂದು ಹೇಳಿದರು. ನಾನು ನನ್ನ ಹೆತ್ತವರ ಆಸೆಯನ್ನು ಆಶೀರ್ವಾದವಾಗಿ ಸ್ವೀಕರಿಸಿದೆ ಮತ್ತು ನಾವು ಮದುವೆಯಾದೆವು.

ಮದುವೆಯ ಮೊದಲ ರಾತ್ರಿ ನಮ್ಮ ನಡುವೆ ಏನೂ ಆಗಲಿಲ್ಲ, ಬಹುಶಃ ಒತ್ತಡದಿಂದಾಗಿ ಇರಬಹುದು ಎಂದು ನಾನು ಭಾವಿಸಿದೆ. ನಿಧಾನವಾಗಿ ಎರಡು ವಾರಗಳು ಕಳೆದವು. ನಾನು ಅವರನ್ನು ಕೇಳಿದೆ, ನೀವು ನನ್ನ ಹತ್ತಿರ ಬರಲು ಬಯಸುವುದಿಲ್ಲ ಎಂದು ನೀವು ನನ್ನನ್ನು ಇಷ್ಟಪಡುವುದಿಲ್ಲವೇ? ಅವರು ನನ್ನ ಕೈ ಹಿಡಿದು ಅದು ಹಾಗಲ್ಲ ಎಂದರು.

ನಂತರ, ಅವಕಾಶವನ್ನು ನೋಡಿ, ನಾನು ಅವರ ಹತ್ತಿರ ಬಂದು ಹುಡುಗಿಯ ಹಕ್ಕನ್ನು ಮಾಡಲು ಪ್ರಯತ್ನಿಸಿದೆ. ನಾವು ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಾಗ ನನ್ನ ಗಂಡನಿಗೆ ಪರಾಕಾಷ್ಠೆ ಬಂದಿತು. ಅವರು ನಾಚಿಕೆಯಿಂದ ಕೊಠಡಿಯಿಂದ ಹೊರಟುಹೋದರು. ನಾನು ಅವನಿಗೆ ಸಾಕಷ್ಟು ಸಮಯ ನೀಡಿ, ಒಂದು ವಾರದ ನಂತರ, ಈ ಸಮಸ್ಯೆಗೆ ವೈದ್ಯರನ್ನು ಸಂಪರ್ಕಿಸಿದ್ದೀರಾ ಎಂದು ಕೇಳಿದೆ.

ಅವರು ಹೇಳಿದರು, ನಾನು ಕಳೆದ 2 ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದೇನೆ, ಆದರೆ ಯಾವುದೇ ಪ್ರಯೋಜನವಾಗಲಿಲ್ಲ, ನಾನು ನಿರಾಶೆಗೊಂಡೆ. ಒಬ್ಬ ಮಹಿಳೆ ಲೈಂಗಿಕ ಆನಂದವನ್ನು ಪಡೆಯದಿದ್ದಾಗ, ಅವಳು ಪೂರ್ಣವಾಗಿ ಭಾವಿಸುವುದಿಲ್ಲ ಮತ್ತು ಅವಳು ತಾಯಿಯಾಗಲು ಸಾಧ್ಯವಿಲ್ಲ, ನಿಧಾನವಾಗಿ, ನಮ್ಮ ನಡುವಿನ ಅಂತರವು ಹೆಚ್ಚಾಗಲು ಪ್ರಾರಂಭಿಸಿತು. ನಾನು ವೈದ್ಯರ ಬಳಿಗೆ ಹೋದಾಗ, ವೃದ್ಧಾಪ್ಯದ ಕಾರಣ, ನರಗಳು ಒಣಗಿ ಹೋಗಿವೆ ಮತ್ತು ಈ ವಯಸ್ಸಿನಲ್ಲಿ, ಕೆಲಸದ ಒತ್ತಡದೊಂದಿಗೆ, ಹುಡುಗರು ಸಹ ತಮ್ಮ ಕಾಮಾಸಕ್ತಿಯನ್ನು ಕಳೆದುಕೊಳ್ಳಲು ಪ್ರಾರಂಭಿಸುತ್ತಾರೆ, ಇದರಿಂದಾಗಿ ಸಮಸ್ಯೆ ಬೇಗನೆ ಗುಣವಾಗುವುದಿಲ್ಲ ಎಂದು ನನಗೆ ತಿಳಿಯಿತು.

ನನಗೆ 24 ವರ್ಷ, ನನ್ನ ದೇಹವು ಲೈಂಗಿಕ ಆನಂದವನ್ನು ಬಯಸುತ್ತಿತ್ತು, ಮತ್ತು ಮತ್ತೊಂದೆಡೆ, ನನ್ನ 38 ವರ್ಷದ ಪತಿ, ಅವರ ಕಾಮಾಸಕ್ತಿ ಬಹುತೇಕ ಸತ್ತುಹೋಗಿತ್ತು. ಇದು ನನಗಾಗಿ ಬದುಕುತ್ತಿರುವಾಗ ಸಾಯುವಂತೆಯೇ ಇತ್ತು. ನನ್ನ ಪತಿ ನನಗೆ ದೈಹಿಕ ಆನಂದವನ್ನು ನೀಡಲು ಸಾಧ್ಯವಿಲ್ಲ, ಆದರೆ ಅವರು ಒಳ್ಳೆಯ ವ್ಯಕ್ತಿ. ನಾನು ಅವರನ್ನು ಪ್ರೀತಿಸುತ್ತೇನೆ ಮತ್ತು ಅವರು ನನ್ನನ್ನು ಪ್ರೀತಿಸುತ್ತಾರೆ.

ಆದರೆ ಸರ್ಕಾರಿ ಕೆಲಸದ ಬಯಕೆ ನನ್ನ ಜೀವನವನ್ನು ಹಾಳುಮಾಡಿದೆ. ನನ್ನ ವಯಸ್ಸಿನ ಹುಡುಗನನ್ನು ಮದುವೆಯಾದರೆ, ಅವನು ಕಡಿಮೆ ಹಣ ಸಂಪಾದಿಸಿದ್ದರೂ ಸಹ, ಅವನು ನನ್ನನ್ನು ಸಂತೋಷವಾಗಿರಿಸುತ್ತಿದ್ದನೆಂದು ನನಗೆ ಅನಿಸುತ್ತದೆ. ಇಂದಿನ ಪರಿಸ್ಥಿತಿ ಹೇಗಿದೆ ಎಂದರೆ ಎಲ್ಲಾ ಸೌಕರ್ಯಗಳು ಮರೆಯಾಗುತ್ತಿವೆ.

ಸರ್ಕಾರಿ ಉದ್ಯೋಗವನ್ನು ಹುಡುಕುತ್ತಾ ನಿಮ್ಮ ಮಗುವಿನ ಜೀವನದ ಜೊತೆ ಆಟವಾಡಬೇಡಿ ಎಂದು ಹುಡುಗಿಯರ ಎಲ್ಲಾ ಪೋಷಕರಿಗೆ ನಾನು ಹೇಳಲು ಬಯಸುತ್ತೇನೆ. ಜೀವನದಲ್ಲಿ ಸಂತೋಷವಾಗಿರಲು ಹಣವೇ ಸರ್ವಸ್ವವಲ್ಲ, ಸರಿಯಾದ ಸಮಯದಲ್ಲಿ ಸರಿಯಾದ ವಯಸ್ಸಿನ ಹುಡುಗನನ್ನು ಮದುವೆಯಾಗು.

ಇಂದಿನ ಕಾಲದಲ್ಲಿ, 50 ವರ್ಷದ ಪುರುಷನಿಗೂ 25 ವರ್ಷದ ಹುಡುಗನ ಶಕ್ತಿ ಇಲ್ಲ, ಇಂದು ಜನರು 30 ವರ್ಷಕ್ಕೆ ವಯಸ್ಸಾಗುತ್ತಿದ್ದಾರೆ. ಜೀವನವನ್ನು ಒಮ್ಮೆ ಮಾತ್ರ ನೀಡಲಾಗುತ್ತದೆ, ಅದನ್ನು ಚೆನ್ನಾಗಿ ಬದುಕಿ ಮತ್ತು ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಿ.... ಆಲ್ ದ ಬೆಸ್ಟ್.

☯

# ಆಟೋ ಚಾಲಕ ದರ್ಶನ್ ಕಗ್ಗೊಲೆ!

5 ☞ ಮೊದಲೇ ಕುಡಿದು ತೇಲಾಡ್ತಾ ಇದ್ದ 'ಮಂಡ್ಯದ ಗಂಡು' ಜಯಸೂರ್ಯ ದರ್ಶನ್ ಕೈಲಿದ್ದ ಅದೇ ಮಚ್ಚನ್ನು ಕಿತ್ತುಕೊಂಡು ಅವನ ಕುತ್ತಿಗೆಗೆ ಬೀಸಿದ್ದಾನೆ! ಕುತ್ತಿಗೆ ಕಚಕ್!! ಕೆಲವೇ ಕ್ಷಣಗಳ ಹಿಂದೆ ಕ್ಷುಲ್ಲಕ ವಿಷಯಕ್ಕೆ ಎಗರಾಡ್ತಾ ಇದ್ದ ದರ್ಶನ್, ಈಗ ಕುತ್ತಿಗೆ ಕತ್ತರಿಸಿಕೊಂಡು ರಕ್ತದ ಮಡುವಿನಲ್ಲಿ ಬಿದ್ದು ವಿಲವಿಲನೆ ಒದ್ದಾಡ್ತಾ ಇದ್ದ!!


ಇನ್ಸ್‌ಪೆಕ್ಟರ್ ಜಿ. ಸೋಮಶೇಖರ್

ಯಾವಾಗ ಅವನ ಹೆಣ ಬಿತ್ತೋ, ಮಂಡ್ಯದ ಹೈದ ಜಯಸೂರ್ಯ, ಅವನ ಜತೆಗಿದ್ದ ಸ್ನೇಹಿತ ಕರಿಯ ಇಬ್ಬರೂ ಅಲ್ಲಿಂದ ಜೂಟ್ ಆಗಿದ್ದಾರೆ. ಗಮನೀಯ ಅಂಶವೇನೆಂದರೆ, ಈ ಕೊಲೆಯ ಭೀಕರತೆಯನ್ನು ನೋಡಿದ ಜನ ಹೆಣ್ಣಿನ ವಿಚಾರದಲ್ಲೋ ಅಥವಾ ಹಳೆಯ ದ್ವೇಷಕ್ಕೋ ಇಷ್ಟು ಭೀಕರವಾಗಿ ಕೊಂದಿರಬಹುದು ಎಂದು ಭಾವಿಸಿದ್ದರು. ಆದರೆ ಇದು ಎಣ್ಣೆ ಏಟಿನಲ್ಲಿ ನಡೆದ ಕೊಲೆ! ಎಂತಹ ವಿಚಿತ್ರ ಅಲ್ವಾ. ಈಗಿನ ಕಾಲ ಹುಡುಗರು ನೈಂಟಿ ಹಾಕಿಬಿಟ್ಟರೆ ಹಿಂದೆ-ಮುಂದೆ ಯೋಚಿಸದೆ ಕೊಲೆ ಮಾಡುವ ಹಂತ ತಲುಪಿದ್ದಾರೆ! ಜೈಲು ಪಾಲಾಗಿ ತಮ್ಮ ಭವಿಷ್ಯವನ್ನು ತಮ್ಮ ಕೈಯಾರೇ ಹಾಳು ಮಾಡಿಕೊಳ್ಳುತ್ತಾರೆ. ಇಂತಹ ಘಟನೆಗಳನ್ನು ನೋಡಿದ ಮೇಲಾದರೂ ಇಂದಿನ ಯುವಕರು ಬದಲಾಗಬೇಕಿದೆ.

ಹೆಬ್ಬಗೋಡಿಯ ಖಡಕ್ ಪೊಲೀಸ್ ಇನ್ಸ್‌ಪೆಕ್ಟರ್ ಜಿ. ಸೋಮಶೇಖರ್ ಅವರು ಈಕೊಲೆ ನಡೆದ ಒಂದೇ ರಾತ್ರಿಯಲ್ಲಿ ಇಬ್ಬರನ್ನೂ ಪತ್ತೆಹಚ್ಚಿ ಎಡಮುರಿಕಟ್ಟಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ತಳ್ಳಿದ್ದಾರೆ. ಡಿಸಿಪಿ ಸಾರಾ ಫಾತಿಮಾ, ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಎಸಿಪಿ ಹೆಚ್.ಎಸ್. ಸತೀಶ್ ನೇತೃತ್ವದಲ್ಲಿ ಈ ಭೀಕರ ಕೊಲೆ ಪ್ರಕರಣವನ್ನು ಭೇದಿಸಿ ಆರೋಪಿಗಳನ್ನು ಪತ್ತೆಹಚ್ಚಿದ ಹೆಬ್ಬಗೋಡಿ ಪೊಲೀಸ್ ಇನ್ಸ್‌ಪೆಕ್ಟರ್ ಜಿ. ಸೋಮಶೇಖರ್‌ರವರನ್ನು ಸಾರ್ವಜನಿಕರು ಅಪಾರವಾಗಿ ಪ್ರಶಂಸಿಸಿದ್ದಾರೆ.

☯


ಘಟನಾ ಸ್ಥಳದಲ್ಲಿ ಜನಸ್ತೋಮ

# ಜೆ. ಬ್ಯಾಡರಹಳ್ಳಿ ಗ್ರಾ.ಪಂ.ಯಲ್ಲಿ ಭಾರೀ ಅವ್ಯವಹಾರ!

2 ☞

### ಅಕ್ರಮ ಇ-ಖಾತೆ ಪಿಡಿಓ ವಿರುದ್ಧ ಸಿದ್ದರಾಜು ಆರೋಪ

ಜೆ. ಬ್ಯಾಡರಹಳ್ಳಿ ಗ್ರಾ.ಪಂ.ಯ ಹೊನ್ನಿಗನಹಳ್ಳಿ ಗ್ರಾಮದಲ್ಲಿ ನಮ್ಮ ಪಿತ್ರಾರ್ಜಿತ ಆಸ್ತಿಯನ್ನು ನಮ್ಮ ಅಣ್ಣ-ಅತ್ತಿಗೆ ಇಬ್ಬರು ಸೇರಿಕೊಂಡು ನಮ್ಮ ಗಮನಕ್ಕೆ ಬರದಂತೆ ಗ್ರಾ.ಪಂ.ಯಲ್ಲಿ ಪಿಡಿಓ ಬಸವರಾಜು ಕೂಡ ನಮ್ಮಗಳಿಗೆ ಯಾವುದೇ ನೋಟಿಸ್ ನೀಡದೆ ಅವರಿಗೆ ಇ-ಖಾತೆಯನ್ನು ಮಾಡಿಕೊಟ್ಟು ನಮಗೆ ಅನ್ಯಾಯ ಮಾಡಿದ್ದಾರೆ. ಈ ಗ್ರಾಮದಲ್ಲಿ ನಾವು ಪೂರ್ವಿಕರ ಕಾಲದಿಂದಲೂ ವಾಸ ಮಾಡಿಕೊಂಡಿದ್ದು, ನಮ್ಮ ತಂದೆ ತೀರಿಕೊಂಡ ಮೇಲೆ ನಮ್ಮ ಅಣ್ಣ ಮತ್ತು ಅತ್ತಿಗೆ ಇಬ್ಬರೂ ಸೇರಿ ನಮ್ಮ ಗಮನಕ್ಕೆ ಬಾರದಂತೆ ನಮ್ಮ ಮನೆಗೆ ಸಂಬಂಧಿಸಿದ ಆಸ್ತಿಯನ್ನು ದಾನಪತ್ರವನ್ನೂ ಮಾಡಿಕೊಂಡಿದ್ದು, ಜೆ. ಬ್ಯಾಡರಹಳ್ಳಿ ಗ್ರಾ.ಪಂ. ಪಿಡಿಓ ಬಸವರಾಜು ಯಾರ ಗಮನಕ್ಕೂ ತರದಂತೆ ಇ-ಖಾತೆಯನ್ನು ಮಾಡಿಕೊಟ್ಟಿದ್ದಾರೆ. ಈತ ಮಾಡಿಕೊಟ್ಟಿರುವ ಇ-ಖಾತೆ ಆಸ್ತಿ ಪಿತ್ರಾರ್ಜಿತವಾಗಿದ್ದು, ಅದರಲ್ಲಿ ನಮಗೂ ಸಹ ಭಾಗ ಬರಬೇಕಿದೆ. ನಮ್ಮ ಅತ್ತಿಗೆ ಹೆಸರಿಗೆ ಇ-ಖಾತೆಯಾಗಿದೆ ಎಂದು ನಮ್ಮ ಗಮನಕ್ಕೆ ಬಂದ ಕೂಡಲೇ ನಾವು ಗ್ರಾಮ ಪಂಚಾಯಿತಿ ಪಿಡಿಓರನ್ನು ಕೇಳಿದ್ದೇವೆ. ಆದರೆ ಇಲ್ಲಿ ನಮಗೆ ಯಾವುದೇ ನ್ಯಾಯ ದೊರಕಲಿಲ್ಲ. ಈ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದರೂ ಈ ಪಿಡಿಓ ಇ-ಖಾತೆಯನ್ನು ಮಾಡಿಕೊಟ್ಟಿದ್ದಾನೆ. ಇಂತಹ ಭ್ರಷ್ಟ ಅಧಿಕಾರಿ ಬಸವರಾಜುಗೆ ಕಾನೂನು ರೀತಿ ಸೂಕ್ತ ಕ್ರಮವಾಗಬೇಕು. ಮುಂದಿನ ದಿನದಲ್ಲಿ ಈ ಪಿಡಿಓ ವಿರುದ್ಧ ಲೋಕಾಯುಕ್ತ ಕಚೇರಿಗೆ ತೆರಳಿ ದೂರು ಸಲ್ಲಿಸುವುದಾಗಿ ಹೇಳಿದ್ದಾರೆ.


ಗ್ರಾ.ಯಪಂ.ಗೆ ಬೀಗ ಜಡಿದು ಪ್ರತಿಭಟಿಸುತ್ತಿರುವುದು

ಏನೇ ಆದರೂ ಗ್ರಾಮ ಪಂಚಾಯಿತಿಗಳು ಇರುವುದು ಗ್ರಾಮಗಳ ಅಭಿವೃದ್ಧಿಗಾಗಿ, ಇಲ್ಲಿ ಕೆಲಸ ಮಾಡುವ ಪಿಡಿಓ ಬಸವರಾಜುವಿನಂತಹ ಭ್ರಷ್ಟ ಅಧಿಕಾರಿಗಳು ಇದ್ದರೆ ಆ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಎಲ್ಲಿ ಕಾಣುತ್ತದೆ. ಈತನಿಗೆ ಬೇರೊಂದು ಚಕ್ಕರೆ ಗ್ರಾ.ಪಂ.ಗೂ ಸಹ ಅಧಿಕಾರ ವಹಿಸಿಕೊಂಡಿದ್ದಾನೆ. ಆ ಗ್ರಾ.ಪಂ. ಹಾಲಿ ಶಾಸಕ ಸಿ.ಪಿ. ಯೋಗೇಶ್ವರ್‌ರ ಪಂಚಾಯಿತಿ ಆಗಿದ್ದು, ಈ ಪಿಡಿಓ ಬಸವರಾಜು ಕಾರ್ಯ ಅವರೇ ಗಮನಿಸಿ ಈ ಭ್ರಷ್ಟ ಪಿಡಿಓಗೆ ಕಾನೂನು ರೀತಿ ಕ್ರಮ ಜರುಗಿಸಿ, ಸೇವೆಯಿಂದ ವಜಾಗೊಳಿಸಿದರೆ ಒಳ್ಳೆಯದು ಎನ್ನುತ್ತಾರೆ ಸಾರ್ವಜನಿಕರು.

☯




# ಎಕ್ಕ ಮಾರ್ ಮಾರ್ ಮಾರ್!


'ನಮ್ಮ ಕೈ ಯಾವತ್ತೂ ಕೊಡುವ ಕೈ ಆಗಿಬೇಕು..' ಎಂಬುದು ತಾಯಿ ರತ್ನ(ಶ್ರುತಿ) ಹೇಳುವ ಮಾತು. ಮಗ ಮುತ್ತು (ಯುವ) ಮುಂದೆ ಒಂದು ಕೆಟ್ಟ ಮಾತು ಆಡಿದರೂ, ಅದನ್ನೇ ಮಗ ಕಲಿತುಬಿಡುತ್ತಾನೆ ಎಂಬ ಭಯದಿಂದ, ಒಂದೊಂದು ಮಾತನ್ನು ತೂಕ ಹಾಕಿ ಹೇಳುತ್ತಿರುತ್ತಾಳೆ ರತ್ನ!

ಮಗನ ಒಳಗೆ ಇರುವ ಮಗು ಮತ್ತು ಮೃಗ ಎರಡನ್ನೂ ಕಂಡಿರುವ ಆಕೆಗೆ, ಮಗನಿಂದ ಕುಟುಂಬಕ್ಕೆ ಒಳ್ಳೆಯ ಹೆಸರು ಬರಬೇಕು ಎಂಬುದಷ್ಟೇ ಆಸೆ. ಆದರೆ, ಮುತ್ತು ಒಬ್ಬನನ್ನ ಕೊಂದು ನೇತಾಕುವ ಹೊತ್ತಿಗೆ 'ಎಕ್ಕ' ಸಿನಿಮಾದ ಇಂಟರ್ವಲ್ ಬಂದಿರುತ್ತದೆ!

ಮುತ್ತು ಏಕೆ ಕೊಲೆ ಮಾಡಿದ? ಹಳ್ಳಿಯಲ್ಲಿ ಅಮಾಯಕನಾಗಿದ್ದ ಮುತ್ತು ರೌಡಿ ಆಗಿದ್ದೇಕೆ? ಅಷ್ಟಕ್ಕೂ ಅವನು ಹಳ್ಳಿಯನ್ನೇಕೆ ಬಿಟ್ಟು ಬೆಂಗಳೂರಿಗೆ ಬಂದ ಅನ್ನೋದೇ 'ಎಕ್ಕ' ಕಥೆ. ಈ ಹಿಂದೆ 'ರತ್ನನ್ ಪ್ರಪಂಚ' ಎಂಬ ಅದ್ಭುತ ಸಿನಿಮಾ ನಿರ್ದೇಶಿಸಿದ್ದ ರೋಹಿತ್ ಪದಕಿ ಈ ಬಾರಿ ಯುವ ರಾಜ್‌ಕುಮಾರ್‌ಗಾಗಿ 'ಎಕ್ಕ' ಎಂಬ ಲೋಕಲ್ ಸಿನಿಮಾ ಮಾಡಿದ್ದಾರೆ. ಲೋಕಲ್ ಸಿನಿಮಾ ಅಂದಿದ್ದೇಕೆಂದರೆ, ಇದೊಂದು ಪಕ್ಕಾ ಲೋಕಲ್ ಸ್ಟೋರಿ! ಮುತ್ತು ಎಂಬ ಯುವಕ ಹಳ್ಳಿಯಿಂದ ಸಿಟಿಗೆ ಬಂದು, ಆನಂತರ ಸನ್ನಿವೇಶದ ಕೈಗೆ ಸಿಲುಕಿ ಕೈಗೆ ರಕ್ತ ಅಂಟಿಸಿಕೊಂಡು ರೌಡಿ ಆಗುವ ಕಥೆಯೇ 'ಎಕ್ಕ'... ಇದೇ ಮಾದರಿಯಲ್ಲಿ ಈ ಹಿಂದೆ ಸುಮಾರು ಸಿನಿಮಾಗಳು ಬಂದು ಹೋಗಿವೆ. ಹಾಡುಗಳು ಅವುಗಳ ಸಾಹಿತ್ಯವಷ್ಟೇ ಬದಲಾಗುತ್ತವೆ ಅಷ್ಟೇ!

ಯುವ ಈ ಬಾರಿ ಕೊಂಚ ಭಿನ್ನವಾಗಿ ಕಾಣಿಸಿಕೊಂಡಿದ್ದಾರೆ. ಹಿಂದಿನ 'ಯುವ' ಸಿನಿಮಾದಲ್ಲಿ ಕೊಂಚ ಸೀರಿಯಸ್ ಪಾತ್ರವೇ ಅವರಿಗೆ ಸಿಕ್ಕಿತ್ತು. ಇಲ್ಲಿ ಸ್ಟೈಲ್ ಬದಲಾಗಿದೆ. ಪಕ್ಕಾ ಲೋಕಲ್ ಹಳ್ಳಿ ಹೈದ. ಯುವ ಬೆಂಗಳೂರಿನ ಕಿಲಾಡಿ ರೌಡಿಯಾಗಿಯೂ ಮಿಂಚಿದ್ದಾರೆ. ನಟನೆಯಲ್ಲಿ ಮೊದಲಿಗಿಂತ ಸ್ವಲ್ಪ ಇಂಪ್ರೂವ್‌ಮೆಂಟ್ ಕಾಣಿಸುತ್ತದೆ. ಈ ಸಿನಿಮಾದ ಇನ್ನೊಂದು ಆಕರ್ಷಣೆ ಅಂಥೋನಿ ದಾಸ್ ಹಾಡಿರುವ ಸೂಪರ್ ಸಾಂಗ್ಸ್! ಬ್ಯಾಂಗಲ್ ಬಂಗಾರಿ ಹಾಡು ಎಲ್ಲರ ಬಾಯಲ್ಲಿ ನಲಿದಾಡುತ್ತಿದೆ. ಅದೇ ರೀತಿ ಎಕ್ಕ ಮಾರ್ ಮಾರ್... ಕೂಡ.

ಯುವ ಒಳ್ಳೆ ಸ್ಟೆಪ್ ಹಾಕಿದ್ದಾರೆ. ನಾಯಕಿಯರಾದ ಸಂಜನಾ ಆನಂದ್ ಮತ್ತು ಸಂಪದಾ ತಮಗೆ ಸಿಕ್ಕಿರುವ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. 'ಸಲಗ' ಬ್ಯೂಟಿ ಸಂಜನಾ ಚೂರು ಜಾಸ್ತಿಯೇ ಸ್ಕೋರ್ ಮಾಡುತ್ತಾರೆ... ಈ ಚಿತ್ರದ ಇನ್ನೊಂದು ಟ್ವಿಸ್ಟ್ ಎಂದರೆ, ಡೆಡ್ಲಿ ಪೊಲೀಸ್ ಆಫೀಸರ್ ಆಗಿ ಡೆಡ್ಲಿ ಸೋಮ ಆದಿತ್ಯ ಖಡಕ್ ಆಗಿ ಕಾಣಿಸಿಕೊಂಡಿದ್ದಾರೆ! ಇನ್ನೂ, ಯುವನ ತಾಯಿಯಾಗಿ ಶ್ರುತಿ ನಟನೆ ಅಚ್ಚುಕಟ್ಟಾಗಿದೆ. ಕಥೆಗೆ ಟರ್ನಿಂಗ್ ಪಾಯಿಂಟ್ ನೀಡುವ 'ಮಸ್ತಾನ್' ಪಾತ್ರದಲ್ಲಿ ಬಾಲಿವುಡ್ ನಟ ಅತುಲ್ ಕುಲಕರ್ಣಿ ಸಖತ್ ಇಷ್ಟವಾಗುತ್ತಾರೆ! ಹೊಸಬ ಪೂರ್ಣಚಂದ್ರ ಇವರೆಲ್ಲರ ನಡುವೆಯೂ ಹೈಲೈಟ್ ಆಗುತ್ತಾರೆ!




ಡಾ. ಸೂರಿ, ಪುನೀತ್ ರುದ್ರನಾಗ್, ಹರಿಣಿ ಶ್ರೀಕಾಂತ್, ಅರ್ಚನಾ ಕೊಟ್ಟಿಗೆ, ಬಾಲನಟಿ ಆರ್ಯಳ ಪಾತ್ರಗಳು ಗಮನ ಸೆಳೆಯುತ್ತವೆ. ಬೇಜಾರಿನ ಸಂಗತಿ ಏನೆಂದರೆ, ಕಾಮಿಡಿ ಕಿಂಗ್ ಸಾಧು ಕೋಕಿಲ ಅವರಿದ್ದರೂ ಹೇಳಿಕೊಳ್ಳುವಂತಹ ಕಾಮಿಡಿ ಸೀನ್ಸ್ ಇಲ್ಲವೇ ಇಲ್ಲಾ! 'ರತ್ನನ್ ಪರ್ಪಂಚ'ದಂತ ಅದ್ಭುತ ಸಿನಿಮಾ ಕೊಟ್ಟಿದ್ದ ನಿರ್ದೇಶಕ ರೋಹಿತ್ ಪದಕಿ ಈಗ ಒಂದು ಸಿಂಪಲ್ ಕಥೆಗೆ ಹೊಸ ರೀತಿಯ ಟಚ್ ನೀಡಲು ಪ್ರಯತ್ನಿಸಿದ್ದಾರೆ! ಅವರ ಒನ್ ಲೈನ್ ಪಂಚಿಂಗ್ ಡೈಲಾಗ್‌ಗಳು ಅಲ್ಲಲ್ಲಿ ಕಿಕ್ ನೀಡುತ್ತವೆ. ಸಂಗೀತ ನಿರ್ದೇಶಕ ಚರಣ್‌ರಾಜ್, ಸತ್ಯ ಹೆಗಡೆ ಅವರ ಕ್ಯಾಮೊರಾ ವರ್ಕ್ ಬಗ್ಗೆ ಮಾತಾಡುವಂತಿಲ್ಲ, ಇಬ್ಬರೂ ಸೂಪರ್!


ಆರಂಭದಲ್ಲಿ ಸಾಕಷ್ಟು ಟ್ವಿಸ್ಟ್ ತಿರುವುಗಳು ಇರುವುದರಿಂದ ಮೊದಲರ್ಧ ಸಲೀಸಾಗಿ ಸಾಗುತ್ತದೆ. ಆದರೆ ಸೆಕೆಂಡ್ ಹಾಫ್ ಜರ್ನಿ ಕೊಂಚ ನಿಧಾನ ಎನಿಸುತ್ತದೆ. ಈಗೇನಿದ್ರೂ ಫಾಸ್ಟ್ ದುನಿಯಾ. ಫಾಸ್ಟ್ ಫುಡ್ ದುನಿಯಾ. ಯುವನ ದೊಡ್ಡಪ್ಪನ 'ಟಗರು' ಗೆದ್ದಿದ್ದೆ ಉಲ್ಟಾ ಎಡಿಟಿಂಗ್‌ನಿಂದ! ಎಕ್ಕದಲ್ಲೂ ಇದೇ ಆಟ ಆಡುವ ಚಾನ್ಸ್ ಹೇರಳವಾಗಿತ್ತು. ಪದಕಿ ಯಾಕೆ ಮಿಸ್ ಮಾಡಿಕೊಂಡರೋ ಗೊತ್ತಿಲ್ಲ. ಈ ಚಿತ್ರದ ಇನ್ನೊಂದು ಕೊರತೆ ಏನೆಂದರೆ, ಮೂರು ಮಂದಿ ನಿರ್ಮಾಪಕರು ಇದ್ದಾಗ್ಯೂ ರಿಚ್‌ನೆಸ್ ಇಲ್ಲಾ! ನಮ್ಮವರು ಖರ್ಚು ಮಾಡೋದಕ್ಕೆ ತಯಾರಿಲ್ಲ, ದುಡ್ಡು ಬಂದ್ರೆ ಮಾತ್ರ ಬಾಚಿ ಕೊಳ್ಳಲು ಗೋಣಿಚೀಲ ಹಿಡ್ಕೊಂಡು ನಿಲ್ಲುತ್ತಾರೆ!

ಒಟ್ಟಾರೆ, ರಸದೌತಣವಲ್ಲದಿದ್ರೂ ಮಾಸ್ ಪ್ರಿಯರಿಗೆ ಇಷ್ಟವಾಗಬಹುದಾದ ಸಿನಿಮಾ ಎಕ್ಕ.... ಅಕ್ಕಂದ್ರು ಒಪ್ಕಂಡ್ರೆ ಮುಗೀತು, ಎಕ್ಕ ಮಾರ್ ಮಾರ್ ಮಾರ್....

☯

# ಅದ್ಧೂರಿ ಸಿನಿಮಾದಲ್ಲಿ ಕಥೆಯೇ ತುತ್ತೂರಿ!

ಆ್ಯಕ್ಷನ್ ಇದೆ, ಎದೆ ತುಂಬುವ ಹಾಡುಗಳಿವೆ, ಎದ್ದು ಕುಣಿಸುವ ನೃತ್ಯಗಳಿವೆ. ರವಿಚಂದ್ರನ್, ಜೆನಿಲಿಯ, ಕಣ್ ಕುಕ್ಕುವ ಶ್ರೀಲೀಲಾ.... ಎಲ್ಲಾ ಇದ್ದಾರೆ. ಪ್ರತಿ ಫ್ರೇಮ್‌ನಲ್ಲಿಯೂ ಅದ್ಧೂರಿತನ ಎದ್ದು ಕಾಣುತ್ತದೆ. ಆದರೆ, ಮದುವೆ ಗಂಡಿಗೆ ಅದೇ ಇಲ್ಲಾ ಎನ್ನುವಂತೆ, ಒಳ್ಳೆಯ ಕಥೆಯೇ ಇಲ್ಲಾ!!



ಗಣಿ ಉದ್ಯಮಿ, ಶಾಸಕ ಜನಾರ್ಧನ ರೆಡ್ಡಿ ಪುತ್ರ ಕಿರೀಟಿಯನ್ನು ಮಾಸ್ ಹೀರೋ ಆಗಿ ಪರಿಚಯಿಸಲೆಂದೇ ಸಿದ್ಧಗೊಂಡ ಸಿನಿಮಾವಿದು. ಕಿರೀಟಿ ನೋಡಲು ಹ್ಯಾಂಡ್ ಸಮ್ ಆಗಿದ್ದಾರೆ. ಆದರೆ, ಈಗಷ್ಟೇ ಚಿತ್ರರಂಗಕ್ಕೆ ಅಂಬೆ ಗಾಲು ಇಟ್ಟಿರೋ ಕಿರೀಟಿಗೆ ಸೂಪರ್ ಸ್ಟಾರ್ ನಟರಿಗೆ ಕೊಡುವಂತೆ ಬಿಲ್ಡಪ್ ಕೊಟ್ಟಿರುವುದು ಯಾಕೋ ಹಿಡಿಸುತ್ತಿಲ್ಲ. ಇದು ಸಿನಿಮಾವನ್ನು ಸಾಕಷ್ಟು ಕಡೆ ಡ್ರಾಮ್ಯಾಟಿಕ್ ಎನ್ನಿಸುವಂತೆ ಮಾಡುತ್ತದೆ.



ಕಾಲೇಜಿನಲ್ಲಿ ಮತ್ತು ತನ್ನ ಉದ್ಯೋಗದಲ್ಲಿ 'ಜೂನಿಯರ್' ಆಗಿದ್ದ ನಾಯಕ ಅಭಿ, ತನ್ನ ಬುದ್ಧಿವಂತಿಕೆ ಬಳಸಿಕೊಂಡು ಎದುರಾಳಿಗಳನ್ನು ಮಣಿಸುವುದು ಚಿತ್ರದ ಒನ್ ಲೈನ್ ಸ್ಟೋರಿ. ಹುಟ್ಟುತ್ತಲೇ ಅಮ್ಮನನ್ನು ಕಳೆದುಕೊಳ್ಳುವ ನಾಯಕ ಅಪ್ಪನ ಆಶ್ರಯದಲ್ಲೇ ಬೆಳೆಯುತ್ತಾನೆ. ಅಪ್ಪನ ಅತಿಯಾದ ಪ್ರೀತಿ ಮಗನಿಗೆ ಕಿರಿಕಿರಿಯನ್ನುಂಟು ಮಾಡುತ್ತದೆ. ಹೀಗಾಗಿ, ಕಾಲೇಜಿನ ಸಮಯದಲ್ಲಿ ಮನೆಯಿಂದ, ಅಪ್ಪನಿಂದ ದೂರ ಉಳಿಯಲು ನಿರ್ಧರಿಸುತ್ತಾನೆ.



ತಾನು ಮಾಡುವ ಎಲ್ಲ ಕೆಲಸದಲ್ಲಿಯೂ ತನ್ನ ಅನುಭವವೇ ನೆನಪಿನಲ್ಲಿ ಉಳಿಯಬೇಕು ಎಂಬುದು ಆತನ ಬಯಕೆ. ಅದಕ್ಕಾಗಿ ಆತ ಕಾಲೇಜಿನಲ್ಲಿ ಮಾಡುವ ಚೇಷ್ಟೆಗಳೇ ಚಿತ್ರದ ಮೊದಲಾರ್ಧ. ಜೊತೆಗೆ, ಕಾಲೇಜು, ಕೀಟಲೆ, ಹಾಡು, ಕುಣಿತ, ಆ್ಯಕ್ಷನ್, ಗೆಳೆಯರ ಬಳಗ, ಒಂದಷ್ಟು ಕಾಮಿಡಿಯೊಂದಿಗೆ ಸಾಗುತ್ತದೆ. ಕಿರೀಟಿ ತಾವೊಬ್ಬ ಉತ್ತಮ ಡ್ಯಾನ್ಸರ್ ಎಂಬುದನ್ನು ಮೊದಲ ಪ್ರಯತ್ನದಲ್ಲಿಯೇ ಸಾಬೀತುಪಡಿಸಿದ್ದಾರೆ.

ಅಭಿಯ ಕಾಲೇಜು ಮುಗಿದು ಆತ ಕೆಲಸ ಮಾಡುವ ಕಚೇರಿಗೆ ಕಥೆ ಶಿಫ್ಟ್ ಆಗುತ್ತದೆ. ಅಲ್ಲಿಂದ ಕಥೆ ಬೇರೆಯೇ ದಿಕ್ಕಿಗೆ ಹೊರಳುತ್ತದೆ. ಅಪ್ಪ-ಮಗನ ಸಂಬಂಧ, ಅಕ್ಕತಮ್ಮನ ಬಾಂಧವ್ಯ, ದ್ವೇಷದೊಂದಿಗೆ ಚಿತ್ರದ ದ್ವಿತೀಯಾರ್ಧ ಪ್ರಾರಂಭವಾಗುತ್ತದೆ. ನಾಯಕನ ಅಪ್ಪನಾಗಿ ರವಿಚಂದ್ರನ್ ಜೀವಿಸಿದ್ದಾರೆ. ಕಂಪನಿಯೊಂದರ ಸಿಇಒ ಆಗಿ ಜೆನಿಲಿಯಾ ಚೆನ್ನಾಗಿ ನಟಿಸಿದ್ದಾರೆ. ಅವರಿಗೆ ಹೇಳಿ ಮಾಡಿಸಿದ ಪಾತ್ರವದು.

ಅಭಿಯ ಆಫೀಸ್ ರಾಜಕೀಯ, ಖಳನಾಯಕನೊಂದಿಗೆ ಹೊಡೆದಾಟ, ಜತೆಗೆ ಒಂದಷ್ಟು ಭಾವನಾತ್ಮಕ ಸನ್ನಿವೇಶಗಳು ಈ ಭಾಗದಲ್ಲಿವೆ. ಅಭಿಯ ಗೆಳೆಯರ ಬಳಗ ಅಲ್ಲಲ್ಲಿ ನಗಿಸುವ ಕೆಲಸ ಮಾಡುತ್ತದೆ. ಸಾಕಷ್ಟು ಕಡೆ ಕಥೆಗೆ ಅಗತ್ಯವೇ ಇಲ್ಲದ ಅದ್ಧೂರಿತನವಿದೆ. ಈ ಕಥೆಗೆ ಪಂಚತಾರ ಹೋಟೆಲ್‌ನಂತೆ ಭಾಸವಾಗುವ ಐಷಾರಾಮಿ ಕಚೇರಿ ಬೇಕಿರಲಿಲ್ಲ. ಆ ಐಷಾರಾಮಿ ತನದಿಂದಾಗಿಯೇ ಅಲ್ಲಿ ನಡೆಯುವ ಸನ್ನಿವೇಶಗಳು ಜಾಳು ಎನ್ನಿಸುತ್ತವೆ.

ಕಿರೀಟಿ ನಟನೆಯಲ್ಲಿ ಇನ್ನಷ್ಟು ಪಳಗಬೇಕು. ಶ್ರೀಲೀಲಾ ಮುದ್ದಾಗಿ ಕಾಣುತ್ತಾರೆ. ಆದರೆ ಅವರ ಪಾತ್ರವನ್ನು ಗ್ಲಾಮರ್‌ಗೆ ಸೀಮಿತಗೊಳಿಸಲಾಗಿದೆ. ಉಳಿದಂತೆ, ಕ್ಯಾಮೊರಾಮೆನ್ ಸೆಂದಿಲ್ ಕುಮಾರ್ ಪ್ರತಿಯೊಂದು ದೃಶ್ಯವನ್ನು ಕಲರ್‌ಫುಲ್ಲಾಗಿಸಿದ್ದಾರೆ. ದೇವಿಶ್ರೀ ಪ್ರಸಾದ್ ಸಂಗೀತ ಮತ್ತು ನೃತ್ಯ ಸಂಯೋಜನೆ ಚಿತ್ರದ ಹೈಲೈಟ್! ಏನೇ ಆದರೂ ಕಥೆಯಲ್ಲಿ ಗಟ್ಟಿತನವೇ ಇಲ್ಲದ ಕಾರಣ ಜೂನಿಯರ್ ತನ್ನ ಅದ್ಧೂರಿತನದಲ್ಲೂ ಸೊರಗುತ್ತಾನೆ!

☯



POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 27.7.2025

# ದಮ್ ಇದ್ರೆ ನನ್ ಮೇಲೆ ಕಂಪ್ಲೇಂಟ್ ಕೊಡ್ರಿ....!



**ಯಾ**ಕೋ ಕಾಣೆ, ಹಿರಿಯ ನಿರ್ಮಾಪಕ ಕನಕಪುರ ಶ್ರೀನಿವಾಸ್ ಅಣ್ಣ ಉಗ್ರ ಪ್ರತಾಪಿ ಅವತಾರ ತಾಳಿ ಬಿಟ್ಟಿದ್ದಾರೆ! ಶಿವರಾಜ್‌ಕುಮಾರ್‌ರಿಂದ ಹಿಡಿದು ಧ್ರುವ ಸರ್ಜಾ, ಶ್ರೀಮುರಳಿ ತನಕ ಜನ್ಮ ಜಾಲಾಡುತ್ತಿದ್ದಾರೆ! ಇದೀಗ ಕಿಚ್ಚ ಬಿರುದಾಂಕಿತ ಸುದೀಪ್ ಸರದಿ!

'ಅವಾಗ ಸಿನಿಮಾ ಮಾಡಬೇಕಾದ್ರೆ, ಇದೇ ಹೀರೋಗಳು ನಮ್ಮ ಮನೆ ಹತ್ರ ಮಲಗುತ್ತಿದ್ರು. ಇದೇ ಸುದೀಪ್ ನಮ್ಮ ಆಫೀಸ್ ಕೆಳಗೆ ಚಾಪೆ ಹಾಸಿಕೊಂಡು ಮಲಗಿದ್ರು. ನಾಳೆ ಬೇಕು ಅಂದ್ರೆ ಕೇಳಿ, ನನ್ನ ಹತ್ರ ಅದರ ಫೋಟೋಗಳೂ ಇವೆ. ನಮ್ಮ ಕನಕಪುರದಲ್ಲೇ 'ಧಮ್' ಅನ್ನೋ ಸಿನಿಮಾ ಮಾಡಿದ್ದು, ಆಗೆಲ್ಲ ಚಾಪೆ ಹಾಕ್ಕೊಂಡು ಮಲಗಿದ್ದ ಚಕ್ರವರ್ತಿ ಸುದೀಪ್ ಅದನ್ನೆಲ್ಲ ಮರೆತರೆ ಹೇಗೆ? ಈವಾಗ ಸುದೀಪ್ ಬೆಳೆದಿರಬಹುದು, ನಾವು ಸೋತಿರಬಹುದು... ಮನುಷ್ಯ ಹಿಂದೆ ಹೇಗಿದ್ದ ಅನ್ನೋದನ್ನ ಯೋಚನೆ ಮಾಡಬೇಕು. ಆಗ ಚಾಪೆ ಹಾಕಿ ಮಲಗಿದ್ದನ್ನ ಮರೆಯಬಾರದು' ಎಂದು ಸಂಕಟದಾಯಕವಾಗಿ ಹೇಳಿಕೊಂಡಿದ್ದಾರೆ!!



ಇಷ್ಟಕ್ಕೇ ಸುಮ್ಮನಾಗದ ಕನಕಪುರ ಶ್ರೀನಿವಾಸಣ್ಣ, ಅವರಿಗೆಲ್ಲ ಎರಡು ಕೊಂಬಿಲ್ಲ! ನಿಮಗೆಲ್ಲ ನಿಜವಾಗಿಯೂ ಧಮ್ ಅನ್ನೋದು ಇದ್ರೆ, ಇದಕ್ಕೆ ಉತ್ತರ ಕೊಡಿ, ಫಿಲ್ಮ್ ಚೇಂಬರ್‌ಗೆ ಬನ್ನಿ ಎಂದು ಕೆಲ ನಟರಿಗೆ ಸವಾಲ್ ಕೂಡ ಹಾಕಿದ್ದಾರೆ!

'ನಿಮಗೆ ಹೃದಯ, ಕಿಚ್ಚು ಅನ್ನೋದಿದ್ರೆ ಬನ್ನಿ ಚೇಂಬರ್‌ಗೆ ನಾನು ಉತ್ತರ ಕೊಡ್ತೀನಿ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅನ್ನೋದು ಇದೆಯಲ್ಲ? ಬಂದು ಬೇಕಾದ್ರೆ, ನನ್ನ ಮೇಲೆ ದೂರು ಕೊಡಿ. ಅವರಿಗೆಲ್ಲ ತಲೆ ಮೇಲೆ ಎರಡು ಕೊಂಬಿಲ್ಲ, ಆಗೆಲ್ಲ ಅವರಿಗೆ ಲಕ್ಷ ಲಕ್ಷ ಕೊಟ್ಟಿದ್ದವರು ನಾವು. ಅದಕ್ಕೇ ನಾನು ಹೀಗೆ ಮಾತನಾಡುತ್ತಿದ್ದೀನಿ' ಎಂದು ಆಕ್ರೋಶ ಹೊರಹಾಕಿದ್ದಾರೆ!!

'ಈಗಿನ ನಟರೆಲ್ಲ ದುಡ್ಡಿನ ಮಜಾ ನೋಡಿದ್ದಾರೆ. ಆಗಿನ ಕಾಲವೇ ಬೇರೆ ಇತ್ತು. ಈಗಿನ ಕಾಲವೇ ಬೇರೆ, ಈಗೆಲ್ಲ ಊ ಅಂದ್ರೂ, ಉಹೂ ಅಂದ್ರೂ ಕಾಸು ಕೊಡ್ತಾರೆ. ಈಗ ಚಿನ್ನ ಮಾರ್ತಾರೆ ಅಂದ್ರೂ ದುಡ್ಡು ಕೊಡ್ತಾರೆ, ಎಲ್ಲದಕ್ಕೂ ದುಡ್ಡು ಕೊಡ್ತಾರೆ. ಆವತ್ತು ನಾವು ಇವರನ್ನ ಬೆಳೆಸಿದ್ದಕ್ಕೇ ಹೀಗಿದ್ದಾರೆ. ಈಗ ಅವರಿಗೆ ಸಿನಿಮಾ ಇಲ್ಲದಿದ್ರೂ ಕಣಜ ತುಂಬಿ ಹೋಗಿದೆ. ಸುದೀಪ್ ಏನ್ ಲಂಡನ್‌ನಲ್ಲಿ ಹುಟ್ಟಿಲ್ಲ, ಇಲ್ಲೇ ಶಿವಮೊಗ್ಗದಲ್ಲಿ ಹುಟ್ಟಿರೋದು. ಈಗ ಫೋನ್ ಮಾಡಿದ್ರೆ ಫೋನ್ ತೆಗಿಯಲ್ಲ, ಸ್ವಿಚ್ ಆಫ್ ಮಾಡ್ತಾರೆ, ಮನೆ ಹತ್ರ ಹೋದ್ರೂ ಸಿಗಲ್ಲ, ಆವತ್ತು ನಮ್ಮ ಮನೆ ಹತ್ರ ಬಂದು ಇರ್ತಿದ್ರು ನಡೆದು ಬಂದ ಹಾದಿಯನ್ನ ಅನ್ನೋದನ್ನ ಕಲಾವಿದ ಮರೆಯಬಾರದು' ಎಂದಿದ್ದಾರೆ!!!


# ಈ ಕೆಲಸವನ್ನ ಅಂದೇ ಮಾಡಿದ್ದರೆ?!



'ಶಿಲ್ಪಾ ಶ್ರೀನಿವಾಸ್' ಎಂಬ ಸಿನಿಮಾಗೆ ಶಿಲ್ಪಾ ಶ್ರೀನಿವಾಸ್ ಅವರೇ ಹೀರೋ! ಇದೇನಪ್ಪ ಆಶ್ಚರ್ಯ ಅಂತ ಕೇಳಬೇಡಿ. ಇದು ನಿಜ. ಈಗಾಗಲೇ ಹೊಸಕೋಟೆಯ ಗಟ್ಟಿಗನಬ್ಬೆಯಲ್ಲಿ ಚಿತ್ರಕ್ಕೆ ಚಾಲನೆ ನೀಡಲಾಗಿದೆ.

ಚಲನಚಿತ್ರೋದ್ಯಮ ಎಲ್ಲರಿಗೂ ಅವಕಾಶ ಕೊಡುತ್ತೆ. ನಿಜವಾಗಿ ಸಾಧನೆ ಮಾಡಬೇಕೆಂದು ಇಲ್ಲಿಗೆ ಬಂದವರು ಚಿತ್ರರಂಗವನ್ನು ತನ್ನ ತಾಯಿ ಎಂದು ಭಾವಿಸುತ್ತಾರೆ. ಕಲಾಮಾತೆ ಎಂದು ಆರಾಧಿಸುತ್ತಾರೆ. ಇನ್ನು ಕೆಲವರು ಬರೀ ಶೋಕಿಗಾಗಿ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟು ತನ್ನ ಹಿರಿಯರು, ಅಪ್ಪ, ಅಮ್ಮ ಕಷ್ಟಪಟ್ಟು ಕೂಡಿಟ್ಟ ಸಂಪಾದನೆಯ ಹಣವನ್ನು ಹಾಳು ಮಾಡಿ, ಕಲಾಮಾತೆಯನ್ನು ಅವಮಾನಿಸುತ್ತಾರೆ. ಇಂಥವರಿಂದಾಗಿಯೇ ಚಿತ್ರರಂಗ ಅಧೋಗತಿಗೆ ಇಳಿಯುತ್ತಿದೆ ಅನ್ನೋದು ಬೇರೆ ಮಾತು. ಇದನ್ನು ಮಟ್ಟ ಹಾಕಲು ಕಲಾಮಾತೆಯ ನಿಜವಾದ ಆರಾಧಕನೊಬ್ಬ ಏನೆಲ್ಲಾ ಮಾಡುತ್ತಾನೆ, ಅಂಥವರಿಗೆ ಹೇಗೆ ಬುದ್ಧಿ ಕಲಿಸುತ್ತಾನೆ ಎಂಬ ಕಥಾಹಂದರವನ್ನು ಒಳಗೊಂಡ ಚಿತ್ರವೊಂದು ಇತ್ತೀಚೆಗೆ ಸೆಟ್ಟೇರಿದೆ. ಆ ಚಿತ್ರದ ಹೆಸರೇ 'ಶಿಲ್ಪಾ ಶ್ರೀನಿವಾಸ್'!!

ಇದಕ್ಕೆ ನಿರ್ಮಾಪಕ, ನಾಯಕ ನಟ, ವಿತರಕ ಎಲ್ಲಾ ಶಿಲ್ಪಾ ಶ್ರೀನಿವಾಸ್ ಅವರೇ. ಚಲನಚಿತ್ರ ವಾಣಿಜ್ಯ ಮಂಡಳಿಯ ಉಪಾಧ್ಯಕ್ಷರಾಗಿರುವ ಶಿಲ್ಪಾ ಶ್ರೀನಿವಾಸ್ ಅವರ ಈ ವೇಷಭೂಷಣವನ್ನು ಗಮನಿಸಿದ್ರೆ 'ಉಪೇಂದ್ರ' ನೆನಪಾಗ್ತಾರೆ ಅಲ್ವಾ! ಆ ಚಿತ್ರದ ನಿರ್ಮಾಪಕರು ಇವರೇ ಕಣ್ರೀ!!




ಅಂದು ಕೋಟಿ ಕೋಟಿ ಸುರಿದು ಉಪ್ಪಿಯ ತಾಳಕ್ಕೆ ಕುಣಿದು 'ಉಪೇಂದ್ರ' ಸಿನಿಮಾ ನಿರ್ಮಿಸಿ ಅವರನ್ನು ಸೂಪರ್ ಸ್ಟಾರ್ ಮಾಡಿದ್ರು. ಮುಂದೆ ಆದದ್ದೇನು? ಉಪ್ಪಿ ಇವರಿಗಾಗಿ ಇನ್ನೊಂದು ಸಿನಿಮಾ ಮಾಡಲಿಲ್ಲ! ಈ ನೋವಿನಿಂದಲೋ ಏನೋ, ಈಗ ಶಿಲ್ಪಾ ಶ್ರೀನಿವಾಸ್‌ರೇ ಹೀರೋ ಆಗಿ ಅವತರಿಸಿಬಿಟ್ಟಿದ್ದಾರೆ! ಇದೇ ಕೆಲಸವನ್ನು ಅಂದೇ ಮಾಡಿದ್ರೆ?! ವರ್ಕ್‌ಔಟ್ ಆಗ್ತಿತ್ತೋ ಏನೋ!!

ಅಂದಹಾಗೆ, 'ಶಿಲ್ಪಾ ಶ್ರೀನಿವಾಸ್' ಚಿತ್ರಕ್ಕೆ ಹೊಸಕೊಟೆಯ ಗಟ್ಟಿಗನಬ್ಬೆಯಲ್ಲಿ ಇತ್ತೀಚಿಗೆ ಚಾಲನೆ ದೊರೆಯಿತು. ನಟ, ಸಂಕಲನಕಾರ ನಾಗೇಂದ್ರ ಅರಸ್ ಅವರು ಚಿತ್ರದ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದರು.



'ಮುಗಿಲ ಮಲ್ಲಿಗೆ' ಚಿತ್ರದ ನಿರ್ದೇಶಕ ಆರ್. ಕೆ. ಗಾಂಧಿ ಅವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಇನ್ನುಳಿದಂತೆ, ಅನಿರುದ್ಧ ಶಾಸ್ತ್ರಿ ಅವರ ಸಂಗೀತ, ಪ್ರತಾಪ್ ಭಟ್ ಅವರ ಸಾಹಿತ್ಯ, ಥ್ರಿಲ್ಲರ್ ಮಂಜು ಅವರ ಸಾಹಸ, ಪ್ರಮೋದ್ ಭಾರತೀಯ ಅವರ ಛಾಯಾಗ್ರಹಣ, ನಾಗೇಂದ್ರ ಅರಸ್ ಅವರ ಸಂಕಲನ, ಮೋಹನ್‌ಕುಮಾರ್ ಅವರ ಪ್ರಸಾದನ, ಮಲ್ಲಿಕಾರ್ಜುನ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ತಾರಾಗಣದಲ್ಲಿ ಕಿಶೋರ್ ಕಾಸರಗೋಡು, ಸ್ವಾತಿ ಲಿಂಗರಾಜ್, ಪ್ರಿಯಾಂಕ, ಮಾಸ್ಟರ್ ಮನ್ವಿತ್, ಮಾಸ್ಟರ್ ಅಬ್ಯಂತ್, ಶೋಭರಾಜ್, ನಾಗೇಂದ್ರ ಅರಸ್, ಕಿರಣ್ ಕುಮಾರ್ ಗಟ್ಟಿಗನಬ್ಬೆ, ಸಿ.ಟಿ. ಜಯರಾಮ್, ಹೊಸಕೋಟೆ ಶಿವಕುಮಾರ್, ಲೋಕೇಶ್, ಮಾಸ್ಟರ್ ಮನ್ವಿತ್, ಮಾಸ್ಟರ್ ಅಬ್ಯಂತ್ ಮೊದಲಾದವರಿದ್ದಾರೆ.


## ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ – ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೊರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ದವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666, 8884452699 policenewsreporter@gmail.com


Vol. 41 No. 08 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com